# ಶ್ರೀ ವೆಂಕಟೇಶ್ವರ ವೃತ ನಿಯಮಗಳು



ಲಲಿತ ಋಷಿಕೇಶ್




Rushikesh Neyhaa Lalitha




September 5, 2010



September 7, 2010



September 12, 2010



September 12, 2010

# ಶ್ರೀ ವೆಂಕಟೇಶ್ವರ ವ್ರತ ನಿಯಮಗಳು



Kannada translation by **Niveditha Sarang** from Kundapur, India.

ಈ ಪುಸ್ತಕ ಡೌನ್‌ಲೋಡ ಮಾಡಲು

https://www.venkateswaravratham.org/download

# ಲಲಿತ ಋಷಿಕೇಶ್

**Email: info@venkateswaravratham.org**

**Website: https://ww.venkateswaravratham.org**

**https://ww.facebook.com/venkateswaravratham**

Kannada Translation: First Edition, November 2011

Sree Venkateswara Vratham PDF book is available for free download in Telugu, Tamil, Kannada, Hindi, Marathi and English fromour website: https://www.venkateswaravratham.org/download

## Contents:

ಸಪ್ತಗಿರಿ ಒಡೆಯಾಹಾಗು ನನ್ನ ಸಂಬಂಧ ........ 6
ಶ್ರೀ ವೆಂಕಟೇಶ್ವರ ಮಂತ್ರ ........ 15
ವ್ರತ ನೆರೆವೇರಿಸಲು ಬೇಕಾದ ಸಾಮಗ್ರಿಗಳು ........ 16
ವ್ರತದ ನೈವೇದ್ಯ ತಯಾರಿಸುವ ವಿಧಾನ ........ 16
ವ್ರತ ನಿಯಮಗಳು ........ 16
ಶ್ರೀ ವೆಂಕಟೇಶ್ವರ ವ್ರತ ........ 17
ಶ್ರೀ ವೆಂಕಟೇಶ್ವರ ಅಷ್ಟೋತ್ತರ ಶತನಾಮಾವಳಿ ........ 28
ಶ್ರೀ ಮಹಾ ಲಕ್ಷ್ಮಿ ಅಷ್ಟೋತ್ತರ ಶತಾನಾಮಾವಳಿ ........ 30
ಶ್ರೀ ಪದ್ಮಾವತಿ ಅಷ್ಟೋತ್ತರ ಶತನಮಾವಳಿ ........ 31
ವ್ರತ-ಕಥೆಗಳು ........ 39

ಕಥೆ– ೧ : ಶ್ರೀ ಭಗವಾನ್ ಉವಾಚ ........ 39
ಕಥೆ – ೨ : ಶ್ರೀ ವಿಶ್ವಾಮಿತ್ರ ಉವಾಚ ........ 40
ಕಥೆ– ೩ : ಶ್ರೀ ವಸಿಷ್ಟ ಉವಾಚ ........ 43
ಕಥೆ – ೪ : ಶ್ರೀ ಭಾರಧ್ವಜ ಉವಾಚ ........ 45
ಕಥೆ ೫ : ಶ್ರೀ ಅತ್ರಿ ಉವಾಚ ........ 47

Picture of **Sree Kalyana Venkateswara Swamy** is on the last page or back cover of this book.

ಓಂ ನಮೋ ವೆಂಕಟೇಶಾಯ ನಮಃ

# ಶ್ರೀ ಬಾಲಾಜಿ ಲೀಲೆಗಳು ಮತು ಶ್ರೀ ವೆಂಕಟೇಶ್ವರ ವೃತ ನಿಯಮಗಳು

ವೆಂಕಟಾದ್ರಿಸಮಂ ಸ್ಥಾನಂ ಬ್ರಹ್ಮಾಂಡೇ ನಾಸ್ತಿ ಕಿಂಚನ|
ವೆಂಕಟೇಶಸಮೋದೇವೋ ನ ಭೂತೋ ನ ಭವಿಷ್ಯತಿ||
(ಈ ಭೂಮ್ಮಂಡದಲ್ಲಿ ವೆಂಕಟಾದ್ರಿ ಅಂತಃ ಸ್ಥಾನವೂ, ವೆಂಕಟೇಶ್ವರಾಃ ಸಮನಾದ ದೇವನು ಯಾವತ್ತು ಇರಲ್ಲಿಲಾ ಮುಂದೆ ಆಗುವುದು ಇಲ್ಲ)

ಶ್ರೀವೆಂಕಟೇಶ್ವರ ದೇವರ ದಯೆ ಮತುಕೃಪೆ ಪಡೆಯಲು ಈ ಕಲಿಯುಗದಲ್ಲಿ ಶ್ರೀ ವೆಂಕಟೇಶ್ವರವೃತಅತ್ಯೂನತವಾದ ಮಾರ್ಗ ವೆನ್ನಲಾಗಿದೆಈ ದೇವರ ಮಹಿಮೆ ಹಾಗೂ ಲೀಲೆಗಳ ಬಗ್ಗೆ ನಾನುಹಲವು ಬಾರಿ ಕೇಳಿದ್ದೇನೆ .ಈ ದೇವರನ್ನ ನನ್ನ ಪ್ರಾಣ ವೆಂದು ತಿಳಿದು ಪೂಜಿಸಿದ್ದೇನೆ . ಅತ್ಯಂತ ದಯಾಳು ಕೃಪಾಳು ದುಖವಿನಾಶಕ ನಾಗಿರುವಈ ಸ್ವಾಮಿಯೂನಾನಾ ಕಷ್ಟಗಳಿಂದ ತನ್ನ ಭಕ್ತರನ್ನ ಪಾರು ಮಾಡುವವನು ಅವರಮೇಲೆ ತನ್ನ ಪ್ರೀತಿ ಮಮತೆಯನ್ನು ದಾರೆ ಎರೆಯುವನ್ನಾಗಿದ್ದಾನೆ. ಯಾರು ತನ್ನ ಜೀವನದಲ್ಲಿ ಸರಿಯಾದ ಮಾರ್ಗವನ್ನು ಹಿಡಿದು ನಡೆಯುವನೋ ಅವರಾ ಸಂಪೂರ್ಣ ಜವಾಬ್ದಾರಿಯನ್ನು ಆ ಪರಮಾತ್ಮನು ಹೊರುವನು ಇದರಲ್ಲಿ ಯಾವ ಸಂದೇಹವೂ ಬೇಡ.

ನನ್ನ ಪೋಷಕರಾದ ಶ್ರೀ ಗೌರವಾನ್ವಿತ. ಬುರ್ಳೆ ಪುಳ್ಳ ರಾವ್ ಮತ್ತು ಶ್ರೀಮತಿಬುರ್ಳೆ ವೆಂಕಟ ಲಕ್ಷ್ಮಿಅವರುಈದೇವರ ಬಗ್ಗೆ ಹಲವು ವಿಸ್ಮಯಕಾರಿ ವಿಷಯಗಳನ್ನು ನನಗೆ ತಿಳಿಸಿದ್ದಾರೆ, ಅವರುಈ"ಸಪ್ತಗಿರಿಯ ಒಡೆಯನ" ಕಡೆಗೆ ಅಪಾರ ಭಕ್ತಿ ಮತ್ತು ಪ್ರೀತಿ ಹೊಂದಿದ್ದರು. ನಾನು ಬೆಳೆದಂತೆ ನನ್ನ ಬಾಂಧವ್ಯವೂ ಈ ಪರಮಾತ್ಮನಲ್ಲಿ ಬೆಳೆಯಿತು. ಅವನುನನ್ನ ಜೀವನದ ಒಂದು ಅವಿಭಾಜ್ಯ ಅಂಗವಾಗಿದ್ದಾನೆ. ಈ ದೇವರಲ್ಲಿ ನನಗೆ ಅಪಾರವಾದ ಭಕ್ತಿ ಇದೆ, ನನಗೆನೆನಪು ಇದ್ದ ಹಾಗೆ ನಾನು ಯಾವತ್ತುಈ ದೇವರಲ್ಲಿ ನನ್ನಯಾವ ಆಸೆಯನ್ನು ಪೂರೈಸಲು ಕೆಳಿದ್ದಿಲ್ಲಾ ,ದೇವರುಯಾವತ್ತೂ ನನ್ನ ಕಷ್ಟ ಸುಖದ್ದಲ್ಲಿ ನನ್ನ ಜೊತೆ ಇರುವನೆಂದು ಮನದಲಿ ಅರಿತುಕೊಂಡಿದ್ದೆ.

ಈ ದಿನಗಳಲ್ಲಿ, ದೇವರ ಕಡೆಗೆ ಕಡಿಮೆ ಭಕ್ತಿ ಹಾಗೂ ಸ್ವಾರ್ಥಿ ಆಸೆಗಳ ಕಡೆಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ಕೊಡುತ್ತೇವೆ, ಶುದ್ಧ ಹೃದಯ ಮತ್ತು ಏನು ಬಯಕೆ ಇಲ್ಲದೇದೇವರನ್ನ ಪೋಜಿಸಿದರೆ ದೇವರ ದಿವ್ಯದರ್ಶನ ಪಡೆಯಬಹುದಾಗಿದೆ. ನನಗೆ ದೇವರಲ್ಲಿ ಆದ ಹಲವು ಅನುಭವಗಳನ್ನು ಹಂಚಿಕೊಳ್ಳಬಯಸುತ್ತೇನೆ. ಪರಮಾತ್ಮಶ್ರೀನಿವಾಸನು ನುಡಿಯುವನು (ಸಪ್ತಗಿರಿ ಒಡೆಯಾ ಅಥವಾ ಸ್ವಾಮಿ ವೆಂಕಟೇಶ್ವರ ಅಥವಾ ವೆಂಕತೆಸಾ ಅಥವಾ ಬಾಲಾಜಿ ಅಥವಾ ತಿರುಮಲೇಶ ಅಥವಾ ಪೆರುಮಲ್ಲ ಅಥವಾ ಗೋವಿಂದ) ಯಾವ ಮನೆಯಲ್ಲಿ ಪೋಷಕರು, ಮಗ ಸೊಸೆಯಂದಿರು ,ಮಗಳು ಅಳಿಯಂದರು, ಮೊಮಕ್ಕಳು ಸಹಿತವಾಗಿ ಸುಖವಾಗಿ ಅನ್ಯೋನ್ಯವಾಗಿ ಇರುತ್ತಾರೋ ಆ ಮನೆಗೆ ನಾನು ಬೇಟಿ ನೀಡುವೆನೆಂದು. ಶ್ರೀ ಲಕ್ಷ್ಮಿ (ಐಶ್ವರ್ಯದ ದೇವತೆ) ಸಂತೋಷ ವಾಗಿ ಅಲ್ಲಿ ನೃತ್ಯ ಮಾಡುವಳು. ಪ್ರತಿ ಮಾನವನಿಗೆ ಆಸೆಗಳು ಸಹಜ. ಇತರರಿಗೆ ಹಾನಿ ಆಗುವ ಬಯಕೆ ಪೂರ್ಣಗೊಳಿಸೆಂದು ನಾವು ದೇವರಲ್ಲಿ ಎಂದಿಗೂ ಕೇಳಬಾರದು. ಯಾವಾಗಲೂಆರೋಗ್ಯಕರ, ಒಳ್ಳೆಯ ಮತ್ತು ಇಳುವರಿ ಉತ್ತಮ ಪಾಲಿತಾಂಶ ಕೊಡುವ ಆಸೆಗಳನ್ನು ಕೇಳಬೇಕು.

ಶ್ರೀನಿವಾಸದೇವನು ತನ್ನ ಭಕ್ತರು ಕಡೆಗೆ ಊಹಿಸಲಾಗದ ಪ್ರೀತಿ ಮತ್ತು ಸಹಾನುಭೂತಿಹೊನ್ದಿದ್ದಾನೆನಮ್ಮ ಅಹಂ, ಸ್ವಾರ್ಥ ಮನೋಭಾವನೆಯನ್ನ ಬಿಟ್ಟು ಪ್ರಾಪಂಚಿಕ ಆಸೆಗಳನ್ನ ತೊರೆದು ಪೂರ್ಣ ಹೃದಯದಿ ಅವರನ್ನ ಪ್ರಾರ್ಥಿಸಬೇಕು.

# ಸಪ್ತಗಿರಿ ಒಡೆಯಾಹಾಗು ನನ್ನ ಸಂಬಂಧ

ನನ್ನ ಪೋಷಕರಾದ, ಬುರ್ಲೆ ಪುಳ್ಳ ರಾವ್ ಮತ್ತು ಶ್ರೀಮತಿ. ಬುರ್ಲೆ ವೆಂಕಟ ಲಕ್ಷ್ಮಿ ಸ್ವಾಮಿ ವೆಂಕಟೇಶ್ವರ ಕಡೆಗೆ ಇರುವ ಒಲವು ಮತ್ತು ಭಕ್ತಿಯನ್ನುಪದಗಳಿಂದ ವರ್ಣಿಸಲು ಸಾಧ್ಯವಿಲ್ಲ.ಅವರು ಆಗಾಗ್ಗೆ ತಿರುಮಲಕ್ಕೆ ಭೇಟಿನೀಡಿಸಪ್ತಗಿರಿ ಬೆಟ್ಟವನ್ನು ಬರಿ ಗಾಲಿನಿಂದ ಹತ್ತಿದ್ದಾರೆ ಹಾಗೂ ದೇವರ ದರ್ಶನ ಪಡೆದಿದ್ದಾರೆ. ನನ್ನ ತಂದೆ ಯಾವಾಗಲೂ ತನ್ನ ಸಂಪೂರ್ಣ ಹೃದಯದಿಂದ ಆ ದೇವರನ್ನುಪೋಜಿಸಿದ್ದಾರೆ.ನನ್ನ ಜನನವೂ ೧೯೮೦ ಖಮ್ಮಮ್ ನಲ್ಲಿ ನನ್ನ ತಾತನಾದ ಶ್ರೀ ಸಿಂಗವರಪು ಅನಂತ ರಾಮುಲು ಮತ್ತು ಅಜ್ಜಿ ಶ್ರೀಮತಿ. ಕೋಟಿ ಮಣಿರತ್ನಂ ಅವರ ಮನೆಯಲ್ಲಿ ಆಯ್ತು. ವರ್ಷ ೨೦೦೦ ರಲ್ಲಿ, ನಾನು ಕೆಲಸದ ಸಲುವಾಗಿ ಹೈದೆರಾಬಾದಗೆ ಹೋಗಿ ಅಲ್ಲಿಯ ಒಂದು ಹಾಸ್ಟೆಲ್ ಗೆ ಸೇರಿದೆ .ಒಂದು ದಿನ ನನ್ನ ಕನಸಿನಲ್ಲಿ ಬಹಳ ಪ್ರಕಾಶಮಾನ ಬೆಳಕುಕಂಡಿತು ಆ ಬೆಳಕಿನಲ್ಲಿ ಬೇರೇನು ಕಾಣಸಲಿಲ್ಲ ಕೇವಲ "ತಕ್ಷಣ ನೀನು ಶ್ರೀ ವೆಂಕಟೇಶ್ವರ ಸ್ವಾಮಿ ವೃತ ನಿರ್ವಹಿಸಿ" ಎಂಬುದಾಗಿ ಸ್ವರ ಕೇಳಿಸಿತು. ಕಣ್ಣುಗಳನ್ನ ತೆರೆದಾಗಾ ಸುತ್ತಲೂ ಕತ್ತಲೆ ಇರುವುದನ್ನ ನೋಡಿ ನಾನು ಪುನಃ ನಿದ್ದೆಗೆ ಜಾರಿದೆ. ಮುಂದಿನದಿನ, ನಾನು ಅಮೀರ್ಪೇಟ್ ದೇವಾಲಯದಲ್ಲಿ ಇರುವಾ ಶಾಸ್ತ್ರಿಗಳನ್ನ ಕಂಡು ಶ್ರೀ ವೆಂಕಟೇಶ್ವರ ಸ್ವಾಮಿ ವೃತದ ಬಗ್ಗೆ ಕೇಳಿದೆ ಯಾರಿಗೂ ಈ ವೃತದ ಬಗ್ಗೆ ತಿಳಿದ್ದಿರಲಿಲ್ಲ ಹಾಗೂ ವೃತದ ಬಗ್ಗೆ ಕೇಳಿರಲಿಲ್ಲ.ನಾನು ವಿವಿಧ ದೇವಸ್ಥಾನಗಳಲ್ಲಿನ ಅರ್ಚಕರಿಗೆ ಈ ವೃತದ ಬಗ್ಗೆ ಕೇಳಿದೆ ಆದರೆ ಯಾರಿಗೂ ಅದರ ಬಗ್ಗೆ ಮಾಹಿತಿವಿರಲಿಲ್ಲ. ಕೆಲ ಸಮಯದ ನಂತರ, ನಾನುಸಂಪೂರ್ಣವಾಗಿ ಕನಸು ಮತ್ತು ವೃತದ ಬಗ್ಗೆ ಮರೆತೆ. ನಾನು ಪ್ರತಿ ವರ್ಷವೂ ತಪ್ಪದೆ ತಿರುಮಲಕ್ಕೆ ಭೇಟಿ ನೀಡಿ ಸಪ್ತಗಿರಿ ಬೆಟ್ಟವನ್ನು ಬರಿ ಕಾಲಿನಿಂದ ಏರಿ ಅಂಗ ಪ್ರದಕ್ಷಿಣೆ (ಮಾರ್ಗದ ಉದ್ದಕ್ಕೂ ಉರುಳಿದೇಹದ ಪ್ರತಿ ಬಾಗವು ನೆಲಕ್ಕೆ ಸ್ಪರ್ಶಿಸುವಂತಹದ್ದು) ನಿರ್ವಹಿಸುತ್ತಿದೆ, ಆ ಕನಸನ್ನ ನಾನು ಸಂಪೂರ್ಣವಾಗಿ ಮರೆತಿದ್ದೆ .

ನನ್ನ ವಿವಾಹವೂ ೨೦೦೨ರಲ್ಲಿ ಋಷಿಕೇಶ್ ಜೊತೆ ಆಯಿತು ದೂರದ ಕ್ಯಾಲಿಫೋರ್ನಿಯಾಕ್ಕೆ ಅವರೊಂದಿಗೆ ತೆರಳಿದೆ,೨೦೦೩ ರಲ್ಲಿ ನನ್ನ ಮಗಳು ನೆಹಾಳ ಜನನವಾಯಿತು ೨೦೦೫ ರಲ್ಲಿ ನಾನು ನನ್ನ ಕುಟುಂಬ ಸಮೇತ ಭಾರತಕ್ಕೆ ಬಂದಾಗ ನಾವು ಎಂದಿನಂತೆ ತಿರುಮಲ ತಿರುಪತಿಗೆ ದೇವರ ದರ್ಶನ ಪಡೆಯಲು ಹೊರಟೆವು ನಾವು ಉಳಿದ ಕೊಂಡ ಜಾಗವು ದೇವಸ್ಥಾನದದಿಂದ ಸುಮಾರು ದೂರದಲಿತ್ತು.

ಬೆಳಗಿನ ಜಾವದಲ್ಲಿ ಅಂಗ ಪ್ರದಕ್ಷಿಣೆ ನಿರ್ವಹಿಸಲು ನಿರ್ದರಿಸಿದ್ದೆ. ಸ್ವಲ್ಪ ಕಾಸು ಕೈಯಲ್ಲಿ ಹಿಡಿದು ಟ್ಯಾಕ್ಸೀ ಗೋಸ್ಕರ ಕಾದೆ ಒಂದು ಕುದುರೆ ಬಂಡಿ ನನ್ನ ಎದುರಿಗೆ ಬಂದು ನಿಂತಿತ್ತು ಅದರಲ್ಲಿರುವ ವೃದ್ದನು ನನ್ನನು ಬಂಡಿಯಲ್ಲಿ ಕುಳಿತುಕೊ ಎಂದನು ಅಂಗ ಪ್ರದಕ್ಷಿಣೆ ನಿರ್ವಹಿಸಲು ಹತ್ತೇ ನಿಮಿಷ ವಿರುವುದರಿಂದ ಬಂಡಿ ಯಲ್ಲಿ ಹೋದರೆ ತಡವಾಗುವುದೆಂದು ಹೇಳಿದೆ ಅದಕ್ಕೆ ಆ ಬಂಡಿಯಲ್ಲಿರುವ ವೃದ್ದನು ನಕ್ಕು" ಸಮಯಕ್ಕೆ ಸರಿಯಾಗಿ ತಲಪಿಸುವೆ ಭಯಪಡಬೇಡ, ನೀನು ಇಂದು ಅಂಗ ಪ್ರದಕ್ಷಿಣೆ ತಪ್ಪದೇ ನಿರ್ವಹಿಸುವೆ" ಎಂದನು. ಹೆಚ್ಚು ಸಮಯವಿಲ್ಲದ್ದರಿಂದಮುನ್ದೆನುಯೊಚಿಸಿದೆ ಬಂಡಿ ಏರಿ ಕುಳಿತೆ

ಆ ವೃದ್ದನು ನನಗೆ ದೇವಸ್ಥಾನದಲ್ಲಿ ಒಂದು ಮಹಿಳೆ ಬಳಿ ಕರೆದುಕೊಂಡು ಹೋದನು ಆ ಮಹಿಳೆಯ ಮುಖ ಇನ್ನೂ ನನಗೆ ನೆನಪಿದ್ದೆ,ಅತ್ಯಂತ ಪ್ರಕಾಶಮಾನವಾಗಿಯೂ ಆಕರ್ಷಕವಾಗಿರುವ ಅವಳಹಣೆಯ ಮೇಲೆ ದೊಡ್ಡ ಕೆಂಪು ಬೊಟ್ಟು (ಕುಂಕುಮ)ಇತ್ತು ಮುಖದಲ್ಲಿ ಅರಶಿಣ ಲೇಪೀಸಿಕೊಂಡಿದರು ಅವಳ ಮೂಗಿನ ಎರಡು ಬದಿಯಲ್ಲು ಮುಗುತಿಯಿತ್ತು ಹಾಗೂ ತಲೆಮುಡಿಯಲ್ಲಿ ಹೂ ಇತ್ತು ಅವರು ನನಗೆ ದೇವಿ ಪದ್ಮಾವತಿ ಯಂತೆ ಭಾಸವಾದರು, ಅವರು ನನ್ನ ಕೈ ಹಿಡಿದು ಪುಷ್ಕರ್ಣಿ ಯ (ಕೆರೆ,ಕೊನೆರು) ಬಳಿ ಕರೆದುಕೊಂಡು ಹೋಗಿ ನೀರಿನಲ್ಲಿ ಮೂರು ಬಾರಿ ಮುಳುಗಿಸಿದರು ನಂತರ ಅವರುನನ್ನ ಮುಖಕ್ಕೆ ಅರಿಶಿಣ ಲೆಪಿಸಿ ನನಗೆ ಕುಂಕುಮವಿಟ್ಟು ಸೂರ್ಯ ನಮಸ್ಕಾರ ಮಾಡೆಂದು ಹೇಳಿದರು ತದನಂತರ ಅವರು ದೇವಾಲಯದ ಪ್ರಮುಖ

ಮುಂದಿನಬಾಗಿಲಿನಿಂದ (ದ್ವಜ ಸ್ಥಂಬ)ನನಗೆ ದೇವಾಲಯದ ಒಳಗೆ ಕರೆದೊಯ್ದರು. ಮತ್ತು ನನ್ನ ' ಅಂಗ ಪ್ರದಕ್ಷಿಣೆನಂತರ,ಸ್ವಾಮಿ ವೆಂಕಟೇಶ್ವರನ ವಿಶೇಷ ದರ್ಶನವನ್ನು ಮಾಡಿಸಿದರು. ಇಂತಹ ಮಂಗಳಕರ ದರ್ಶನ ಪಡೆದ ನಂತರ ಅವರಿಗೆ ಧನ್ಯವಾದ ಹೇಳಲು ಹೋದರೆ ಆ ತಾಯಿ ಕಾಣಿಸಲೇಇಲ್ಲ ಆಶ್ಚರ್ಯವೆಂದರೆ ನನ್ನ ಕೈಯಲ್ಲಿರುವ ಕಾಸು ಒದ್ದೆಯಾಗಿರಲಿಲ್ಲ, ಆ ವೃದ್ಧ ನನಗೆ ಬಿಟ್ಟು ಹೋದ ಜಾಗದಲ್ಲಿ ಅನೇಕ ಜನರನ್ನಹಾಗೂ ಪೋಜಾರಿಯರನ್ನ ವಿಚಾರಿಸಿದಾಗ ಅವರಾರು ಆ ವೃದ್ಧನ್ನ ಅಥವಾ ಆ ಮಹಿಳೆಯನ್ನ ನೋಡಿಲ್ಲವೆಂದರು ತಿರುಮಲ ತಿರುಪತಿಯಲ್ಲಿ ಯಾವುದೇ ಕುದುರೆ-ಬಂಡಿಗಳಲ್ಲಿ ವೆಂದು ಹೀಳಿದರು. ನಂತರ ನಾನು ಇಡೀ ಚಿತ್ರವನ್ನು ಅರಿತುಕೊಂಡೆ. ಆ ವೃದ್ಧನು ಸಾಕ್ಷಾತ್ ಶ್ರೀ ವೆಂಕಟೇಶ್ವರನು ಆ ಮಹಿಳೆ ಸಾಕ್ಷಾತ್ ದೇವಿ ಪದ್ಮಾವತಿ ವೆಂದು ಅರಿತೆ. ನಾನು ನನ್ನ ದೇವರನ್ನ ಗುರುತಿಸಲಾಗಲಿಲ್ಲ ವೆಂದು ದುಖಿಸಿದೆ. ಸ್ವಲ್ಪ ಸಮಯದ ನಂತರ ದೇವಿಯ ಮಾತು("ನನ್ನ ದೇವರ ದರ್ಶನವೂ ನೀನು ಖಂಡಿತವಾಗಿ ಪಡೆಯುವೆ")ನೆನಪಿಗೆ ಬಂದು ಸಂತೋಷಗೊಂಡೆ ಇಡೀ ಘಟನೆ ಒಂದು ಪವಾಡವೆಂದುತಿಳಿದುಕೊಂಡೆ. ನಾನು ನನ್ನ ರೂಮಿಗೆ ಹೋಗಿ ನನ್ನ ಮನೆಯವರಿಗೆ ಈ ಕಥೆಯನ್ನ ವಿವರಿಸಿದೆ .

ನನ್ನ ಪತಿ, ನನ್ನ ಮೈದುನನಾದ ಗಣೇಶ ಅವರ ಪತ್ನಿ ಶಿವಪ್ರಿಯಾ ಎಲ್ಲರೂ ಅಲ್ಲಿದರು . ಅವರು ಅನೇಕ ಜನರಲ್ಲಿ ಕುದುರೆ–ಬಂಡಿಯ ಬಗ್ಗೆ ವಿಚಾರಿಸಿದರು ಎಲ್ಲರುತಿರುಮಲ ತಿರುಪತಿಯಲ್ಲಿ ಯಾವುದೇ ಕುದುರೆ–ಬಂಡಿ ಗಳಿಲ್ಲಾ ಎಂದರು ಯಾರು ನಂಬಿದರೋ ಬಿಟ್ಟರೋ ನನಗಂತೂ ಅವರು ಸಾಕ್ಷಾತ್ ಶ್ರೀ ವೆಂಕಟೇಶ್ವರ ಪದ್ಮಾವತಿಯೆಆಗಿದ್ದರು.

ಈ ಘಟನೆಯಯಾದ ಕೆಲವು ಸಮಯದ ನಂತರ ನಾವು ಕ್ಯಾಲಿಫೋರ್ನಿಯಾಕ್ಕೆ ತೆರಳಿದೆವು ಆದರೆ ತಿರುಮಲ ತಿರುಪತಿಯಲ್ಲಿ ಯಾದ ಘಟನೆಯನ್ನು ಮರೆಯಲಾಗಲೇ ಇಲ್ಲಾ. ನಾನು .೨೦೦೦ ನಲ್ಲಿ ಕಂಡ ಕನಸು ೨೦೦೦ ಮೇ ತಿಂಗಳಲ್ಲಿ ಪುನರಾವರ್ತನೆಯಾಯಿತು ಅದೇ ಬೆಳಕು ಅದೇ ಧ್ವನಿ ಪುನಃ ನನ್ನನು ವೃತನಿರ್ವಹಿಸಲು ಸೂಚನೆಯನ್ನ ನೀಡಿತ್ತು. ಇದರ ಜೊತೆಗೆ, ಅವರು ಈ ವೃತದ ಪ್ರಚಾರ ಕೈಗೊಳ್ಳುವಂತೆ ಆಜ್ಞೆ ಮಾಡಿದರು. ಜನರಿಗೆ ತನ್ನ ಪವಾಡಗಳ ಬಗ್ಗೆ ತಿಳಿಸಿಈ ವೃತವನ್ನು ಆಚರಿಸುವಂತೆ ಪ್ರೇರಪಿಸ ಬೇಕೆಂದರು"ನನ್ನ ಜನನವು ಈ ವೃತದ ಪ್ರಚಾರಕ್ಕಾಗಿ ಆಗಿದೆ" ಎಂದರು. ಆಗ ನಾನು ದೇವರಲ್ಲಿ ನಾನು ಯಾರ ಸಹಾಯ ವಿಲ್ಲದೇ ಇಷ್ಟು ದೊಡ್ಡ ಕಾರ್ಯ ಹೇಗೆ ಮಾಡಲಿ ನನ್ನ ಮಾತನ್ನು ಯಾರು ನಂಬುತ್ತಾರೆ , ನನ್ನ ಪ್ರಶ್ನೆ ಕೇಳಿ ಆ ದೇವನು ನಕ್ಕುಈ ವೃತವನ್ನು ಮೊದಲನೆಯದಾಗಿ ನೀನು ಆಚರಿಸು ಅಲ್ಲಿಂದಲೇ ನಿನಗೆ ದಾರಿ ಕಾಣುವುದೆಂದರು, ಇಷ್ಟು ಅಲ್ಲದೇ ಆ ಪರಮಾತ್ಮನು ನನಗೆ ಈ ಪುಸ್ತಕವನ್ನ ಬರೆ ಎಂದುಆದೆಶಿಸಿದರು .

ನನ್ನ ಪತಿ ಋಷಿಕೆಶ್ ಗೆ ಕನಸಿನ ಬಗ್ಗೆ ಹೇಳಿದೆ, ಅವರು ಸಂಪೂರ್ಣವಾಗಿ ನನ್ನನ್ನು ನಂಬಿದ್ದರು ಮತ್ತು ಅದನ್ನು ಒಪ್ಪಿಕೊಂಡರು. ನಾವು ಜೂನ್ ೨೭ರಂದು "ಶ್ರೀ ವೆಂಕಟೇಶ್ವರ ವೃತ" ಆಚರಿಸಿದೆವು ಅಂದು ಶನಿವಾರ ಹುಣ್ಣಿಮೆಯಾಗಿತ್ತು ಇದಾದನಂತರನಾವು ಜುಲೈ ೨೫ ಭಾನುವಾರ ಹುಣ್ಣಿಮೆಯ ದಿನದಂದು ಪುನಃಈವೃತವನ್ನು ಆಚರಿಸಿದೆವು, ದೇವರಿಗೆ ಮಹಾ ನೈವೇದ್ಯವನ್ನು ಅರ್ಪಿಸಿ (೧೫ ಬಗ್ಗೆಯ ಅಡುಗೆ ಹಾಗೂ ಹಣ್ಣುಗಳು) ಪೂಜಾ ಕೊಠಡಿಯ ಬಾಗಿಲನ್ನು ಮುಚಿದ್ದೆವು ಸ್ವಲ್ಪ ಸಮಯದ ನಂತರ ನಾನು ಬಾಗಿಲನ್ನು ತೆರೆದಾಗಾ ನೈವೆದ್ಯವು (ಅನ್ನಾ ಅದರ ದೊಡ್ಡ ತುತ್ತು) ಕಲ್ಯಾಣ ಶ್ರೀ ವೆಂಕಟೇಶ್ವರ ದೇವರ ಫೊಟೊಗೆ ಅಂಟಿಕೊಂಡಿತ್ತು ಇದನ್ನ ನೊಡಿ ನಾವು ಬೆರಗಾದೆವು. ಪುನಃ ಸೆಪ್ಟೆಂಬರ್ ೪ ರ ಏಕಾದಶಿ ಶನಿವಾರದಂದು ನಾವು ಈವೃತವನ್ನುಆಚರಿಸಿದೆವು ಎಂದಿನಂತೆ ದೇವರಿಗೆ ನೈವೇದ್ಯ ಅರ್ಪಿಸಿ ಪೂಜಾ ಕೊಠಡಿಯ ಬಾಗಿಲನ್ನ ಮುಚಿದೆವು ಅನಂತರ ಬಾಗಿಲನ್ನ ತೆರೆದಾಗಾ ನೈವೇದ್ಯವೂಊಂಡೆಯ ಆಕಾರದಲ್ಲಿರುವಂತೆ ಕಂಡಿತ್ತು ತಕ್ಷಣ ನಾನು ನನ್ನ ಪತಿ,ಮಗಳು ಹಾಗೂ ನನ್ನ ಮನೆಯಲ್ಲಿರುವ ಸ್ನೇಹಿತರಿಗೆ ಈ ವಿಸ್ಮಯವನ್ನು ತೋರಿಸಿದೆ ಎಲ್ಲರೂ ವಿಸ್ಮಿತಗೊಂಡರು ಈ ಅನುಭವವನ್ನು ಮಾತಿನಲ್ಲಿ ಹೇಳಲಾರೆ,ಅತ್ಯಂತ ದೈವಿ, ಸುಂದರ ಅನುಭವ ಅದು.

ಆ ದಿನ ದಿಂದ ನಮ್ಮ ಮನೆಯಲ್ಲಿ ಅನೇಕ ಪವಾಡಗಳ ಅನುಭವವಾಗಿದೆ, ಜನವರಿ ೨, ೨೦೧೧ರಂದು ಇಂಗ್ಲೀಷ್ ಗೆ ಭಾಷಾಂತರಿಸುವಾಗಲೂ ಈ ಪವಾಡಗಳು ನಡೆಯುತ್ತಾ ಇವೆ. ಅಕ್ಟೋಬೆರ್ ೨೦೧೦ರಲ್ಲಿ ನನ್ನ ತೆಲುಗುವಿನ ಪುಸ್ತಕದಲ್ಲಿ ಪ್ರಕಟವಾದ ಪವಾಡಗಳೆ ಇವು. ನಾವು ನಮ್ಮ ಸೆಪ್ಟೆಂಬರ್ ೫, ೨೦೧೦ ರಿಂದ ಅಕ್ಟೋಬರ್ ೧೦, ೨೦೧೦ರ ತನಕ ಆದ ಘಟನೆಗಳನ್ನ ಮಾತ್ರಈ ಪುಸ್ತಕದಲ್ಲಿ ವಿವರಿಸಿದ್ದೇನೆ

**ಸೆಪ್ಟೆಂಬರ್ ೫, ೨೦೧೦:** ನಾನು ಬೆಳಿಗ್ಗೆ ಎದ್ದು ನನ್ನ ಮುಖವನ್ನು ಕನ್ನಡಿಯಲ್ಲಿ ನೋಡಿಕೊಂಡಾಗ, ನನ್ನ ಹಣೆಯಿಂದ ಮುಗಿನ ತನಕ ೩ ಚಂದನದ ದೊಡ್ಡ ನಾಮಗಳು ಕಾಣಿಸಿದವು ಅದನ್ನ ನೋಡಿ ಬೆರಗಾದೆ ಆ ದಿನ ನನ್ನ ಪರಮಾತ್ಮನು ನಮ್ಮ ಮನೆಯಲ್ಲಿ ವಾಸವಾಗಿರುವನೆಂದು ಅರಿತೆ. ಅಂದು ಬೆಳಿಗ್ಗೆ ಪೂಜೆಯ ನಂತರ ಶಾಪಿಂಗ್ಗೆ ತೆರಳಿದೆ. ಸಂಜೆ ಮನೆಗೆ ಬಂದಾಗ ಆರತಿ ತಟ್ಟೆಯಲ್ಲಿ ತುಪ್ಪದ ಬತ್ತಿ ಇರಿಸಲಾಗಿತ್ತು ನಮಗೆ ಇದು ಹೇಗೆ ಆಯಿತೆನ್ನು ಗೊತ್ತಾಗಲಿಲ್ಲ ಹಾಗೆಯೇ ಸ್ವಲ್ಪ ಅಂಜಿದೆವು. ಮನೆಯಲ್ಲಿ ಯಾರೂಇರಲಿಲ್ಲ ಆದರೂ ಇದು ಹೇಗೆ ಸಂಭವಿಸಿತು? ಅನಂತರ ಇದು ಇನ್ನಾರು ಅಲ್ಲ ನಮ್ಮ ಕಲಿಯುಗದ ಪರಮಾತ್ಮ ಅಂತ ಅರಿವಾಯಿತು. ನಂತರ ದೇವರಿಗೆ ಆರತಿ ತೊರಿಸಿ ಸ್ವಲ್ಪ ಸಮಯದ ನಂತರ ನಾನು ಅಡುಗೆ ಮನೆಯಲ್ಲಿ ಕೆಲಸ ಮಾಡುತ್ತಿರುವಾಗ ಇದ್ದಕ್ಕಿದ್ದಂತೆ ಸುಗಂಧವೂ ಮನೆಯಲ್ಲಿ ಹರಡಿತು. ನಾನು ಪೂಜಾ ಕೊಠಡಿಯೊಳಗೆ ಹೋಗುತ್ತಿದ್ದಂತೆ ಗಂಧ ದ ಉದಬತ್ತಿ ಹಚ್ಚಲಾಗಿತ್ತು ಸ್ವಲ್ಪ ಸಮಯದ ನಂತರ ನನ್ನ ಮಗಳು ತಟ್ಟೆಯಲ್ಲಿ ಪುನಃ ತುಪ್ಪದ ಬತ್ತಿ ಬಂದಿದೆ ಎಂದಳು ನಾನು ಪುನಃ ದೇವರಿಗೆ ಆರತಿ ತೋರಿಸಿದೆ ನನ್ನ ಕನಸಿನಲ್ಲಿ ಹೇಳಿದಂತೆ ಶ್ರೀಮನ್ ನಾರಾಯಣ ನನ್ನ ಮನೆಗೆ ದಯಪಾಲಿಸಿದ್ದರು. ನನ್ನ ಸಂತೋಷಕ್ಕೆ ಗಡಿಯೆ ಇರಲಿಲ್ಲಾ

**ಸೆಪ್ಟೆಂಬರ್ ೬ ,೨೦೧೦:** ಇಂದು ಬೆಳಿಗ್ಗೆ ನಾವು ಮಲಗಿರುವ ಹಾಸಿಗೆಯ ಮೇಲೆ ಅಕ್ಷತೆ ಕಾಳು (ಅಕ್ಕಿ ಯಲ್ಲಿ ಅರಿಶಿನ ಪುಡಿ ಮತ್ತು ಎಣ್ಣೆ) ಇದ್ದವು. ನಾವುಎಚ್ಚರಿಕೆಯಿಂದ ಒಟ್ಟು ಮಾಡಿ ಒಂದು ಚೀಲದಲ್ಲಿ ಶೇಕರಿಸಿದ್ದೆವು. ಸ್ನಾನದ ನಂತರ ನಾನು ಪೂಜಾ ಕೊಠಡಿಯೊಳಗೆ ಹೋಗಿ ಪೂಜೆಮಾಡುತ್ತಿರಲುಒಂದು ಪ್ರಕಾಶಮಾನಬೆಳಕು ದೇವರ ಚಿತ್ರದಿಂದ ಕಾಣಿಸಿತು. ಇದು ಅತ್ಯಂತ ಪ್ರಕಾಶಮಾನವಾಗಿತ್ತು, ನನ್ನ ಕಣ್ಣುಗಳುಮುಚ್ಚಿದ್ದು ನಂಗೆ ತಿಳಿಯಲಿಲ್ಲಾಎಚ್ಚರವಾದಾಗ ಪತಿ ಜೋರಾಗಿ ನನ್ನ ಹೆಸರು ಕರೆದು ನನ್ನನು ಎಬ್ಬಿಸಲು ಪ್ರಯತ್ನ ಪಡುತಿದ್ದರು. ನಾನು ಪ್ರಜ್ಞೆ ತಪ್ಪಿರಬೇಕು ಅಂದುಕೊಂಡೆ. ಕನ್ನಡಿಯಲ್ಲಿ ನನ್ನ ಮುಖ ನೋಡಿಕೊಂಡಾಗ, ಪುನಃ ೩ ನಾಮಗಳು ಹಣೆಯ ಮೇಲೆ ಮೂಡಿತು .ಅಷ್ಟೇ ಅಲ್ಲ ದೊಡ್ಡ ಕೆಂಪು ಕುಂಕುಮದ ಬೊಟ್ಟು ಅದರಜೊತೆಯಿತ್ತು. ನಂತರ ನನ್ನ ಪತಿ ದೇವರು ನಿನ್ನ ಮೈ ಮೇಲೆ ಬಂದಿರ್ಬೇಕು ನಿನ್ನ ಧ್ವನಿ ಯು ಗಂಡಸ್ಸಿನಂತೆ ಆಗಿತ್ತು ಎಂದರು , ನನ್ನ ಪತಿಯನ್ನ "ಇದು ನಿಜವೇ ನನಗೆ ಏನು ನೆನಪಿಲ್ಲಾ" ಎನ್ನುತ್ತಿದ್ದೆ .ಆ ದಿನ ನಾವು ಮಧ್ಯಾಹ್ನ೧ ಗಂಟೆಗೆ ಹೊರಗೆ ಹೋದೆವು ಮನೆಗೆ ಮರಳುವಾಗಸಂಜೆ ೬ ಆಗಿತ್ತು .ನಾವು ಬರುವ ಮುಂಚೆಯೇ ಆರತಿಯಚಂದನದ ಉದುಬತ್ತಿಯು ಇಡಲಾಗಿತ್ತು, ಮನೆಯಲ್ಲಿ ದೀಪವೂ ಉರಿಯುತಿತ್ತು ತೀರ್ಥವು ಸಿದ್ದವಾಗಿತ್ತು

**ಸೆಪ್ಟೆಂಬರ್ ೭ , ೨೦೧೦:** ಈ ದಿನ ದೇವರ ಫೋಟೋದಿಂದ ಅರಿಶಿನ ಪುಡಿ ಬರಲು ಪ್ರಾರಂಭಿಸಿತುಚಿತ್ರದ ಚೌಕಟ್ಟಿನಲ್ಲಿ ಯಾವುದೇ ಅರಿಶಿನ ಪುಡಿ ಇರಲಿಲ್ಲ, ಬೆಳಿಗ್ಗೆ ೧೨:೩೦ ಮಧ್ಯಾಹ್ನ,ನನ್ನ ಮಗಳ ಜೊತೆ ದೇವರ ಕೊಠಡಿ ಸ್ವಚ್ಛಗೊಳಿಸಲು ಹೋದಾಗ ನನ್ನ ಮಗಳು "ಅಮ್ಮ ದೇವರ ಫೋಟೋದಿಂದ, ಅರಿಶಿನ ಪುಡಿ ಚಿಮ್ಮುತಿದೆ "ಎಂದಳು. ಈ ಅರಶಿಣ ನಮ್ಮ ಮನೆಯಿಂದ ಬಂದಿರಬಹುದೇ ಅಂತ ಆಲೋಚಿಸಿದೆ ಆದರೆ ಅಷ್ಟು ಪ್ರಮಾಣದ ಪುಡಿ ನನ್ನ ಮನೆಯಲ್ಲಿ ಇರಲಿಲ್ಲ. ನಾನು ನನ್ನ ಅಡುಗೆ ಮನೆಯ ಅರಶೀನ ಡಬ್ಬಿ ಹುಡುಕಲಾರಂಬಿಸಿದೆ

ನಾನು ಡಬ್ಬಿಯ ಮುಚ್ಚಳವನ್ನು ತೆರೆದಾಗ ಅದರಲ್ಲಿ ಓಂ ಮತ್ತು ಸ್ವಸ್ತಿಕಾ ಚಿಹ್ನೆಗಳು ಬರೆದಿದನ್ನ ಗಮನಿಸಿದೆ. ಕೂಡಲೇ ನಾನುನನ್ನ ಪತಿಯನ್ನ ಕರೆದು ತೋರಿಸಿದೆ ಅವರು ಇದರ ಕೆಲವು ಫೋಟೋಗಳನ್ನ ತಗೆದರು, ದೇವರ ಫೋಟೋ ಚೌಕಿನಿಂದ ಚಿಮ್ಮಿದ ಅರಿಶಿನ ಪುಡಿಯು ಅತ್ಯಂತ ಸುಗಂದಿತವಾಗಿತ್ತು . ನನ್ನ ಮನೆಯು ಸಂಪೂರ್ಣವಾಗಿ ಅರಿಶಿನ ಪುಡಿಯ ಸುವಾಸನೆಯಿಂದ ತುಂಬಿತ್ತು. ನಮ್ಮ ಮನೆಗೆ ಬಂದ

ಸ್ನೇಹಿತರಿಗೂ ಹಾಗೆಯೇ ಅನ್ನಿಸಿತು ಇಂದು ಸಂಜೆ ಕೂಡ ತಟ್ಟೆಯಲ್ಲಿ ತುಪ್ಪ ಮತ್ತು ಬತ್ತಿ ಆರತಿ ತಟ್ಟೆಯಲ್ಲಿ ತಯಾರಾಗಿತ್ತು

**.ಸೆಪ್ಟೆಂಬರ್ ೮, ೨೦೧೦:** ಇಂದು ದೇವರ ಫೋಟೋದಿಂದ ಹೆಚ್ಚಿನ ಅರಿಶಿನ ಪುಡಿ ಬರಲಾರಂಬಿಸಿತ್ತು,ತಣ್ಣಗಿನ ಹಾಲಿನಲ್ಲಿ ಜೇನು ತುಪ್ಪ ಬೆರೆಸಿ ಒಂದು ಸಣ್ಣ ಬೆಳ್ಳಿ ಬಟ್ಟಲಿನಲ್ಲಿ ಸಿದ್ಧ ಇರಿಸಲಾಗಿತ್ತು. ಈ ಎಲ್ಲಾ ಅದ್ಭುತಗಳು ನಮ್ಮ ಮನೆಯಲ್ಲಿ ಆರಂಭವಾದ ದಿನದಿಂದ ನಾವು ದಿನದಲ್ಲಿ ದೇವರಿಗೆ ೩ ಸಲನೈವೇಧ್ಯ ವನ್ನು ನೀಡಲು ಪ್ರಾರಂಬಿಸಿದೆವು. ದೇವರಿಗೆ ನೈವೇದ್ಯ ಅರ್ಪಿಸದೇ ನನ್ನ ಮಗಳು ನೆಹಾ ಕೂಡ ಊಟ ಮಾಡುತ್ತಿರಲಿಲ್ಲಾ.

**ಸೆಪ್ಟೆಂಬರ್ ೯, ೨೦೧೦:** ಈ ದಿನ ದೇವರ ಫೋಟೋ ದಿಂದ ಅದಿಕ ಅರಶಿಣ ಪುಡಿ ಹೊರ ಚಿಮ್ಮುತಿತ್ತು ,ದೇವರ ಮುಖ ಮುಚ್ಚುವಷ್ಟು ಅರಶಿಣ ಅಲ್ಲಿತ್ತು ಒಂದು ಚಿಕ್ಕಅರಶಿಣ ಗುಡ್ಡವೆ ಅಲ್ಲಿ ಆಗಿತ್ತು, ಈ ಅರಿಶಿನದ ಗುಡ್ಡದ ಮೇಲೆ ನಾವು ಪರಮಾತ್ಮ ನರಸಿಂಹ ಸ್ವಾಮಿಯ ಆಕಾರ ಗಮನಿಸಿದೆವು. ಪರಮಾತ್ಮ ಇಂದು ನಮಗೆ ನರಸಿಂಹ ಸ್ವಾಮಿ ರೂಪದಲ್ಲಿ ದರ್ಶನ ನೀಡಿದರು. ನಾವು ನಮ್ಮ ಕೆಲವು ಅತಿಥಿಗಳನ್ನ ಮನೆಗೆ ಆಹ್ವಾನ ಮಾಡಿದೆವು ಕೆಲವರಿಗೆ, ಅರಿಶಿನ ಪುಡಿಯ ಮೇಲಿನ ಆಕಾರವು ಸ್ವಾಮಿ ವೆಂಕಟೇಶ್ವರ ನಂತೆಯೂ ಇನ್ನೂ ಹಲವರಿಗೆ ಪರಮಾತ್ಮನರಸಿಂಹ ಸ್ವಾಮಿ ನಂತೆಯೂ ಇನ್ನೂ ಕೆಲವರಿಗೆ ಪರಮಾತ್ಮ ಕೃಷ್ಣ ನಂತೆ ಕಂಡಿತುಇನ್ನೂ ಉಳಿದವರಿಗೆ ಓಂಕಾರ ರೂಪದಲ್ಲಿ ಕಂಡಿತು. ದೇವರನ್ನ ಆರಾಧಿಸುತ್ತಿದ್ದ ರೀತಿಯಲ್ಲೇ ದೇವರು ಅವರಿಗೆ ದರ್ಶನ ನೀಡಿದರು.ಅದೇ ದಿನ, ನಾನು ಇನ್ನೊಂದು ವಿಶೇಷ ನಂಬಲು ಅಸಾಧ್ಯವಾದ ಘಟನೆ ಅನುಭವಿಸಿದೆ ನಮ್ಮ ಮನೆಗೆ ಬಂದ ಹಲವರಿಗೆ ಈ ಪವಾಡ ನೊಡಲು ಸಾಧ್ಯವಾಯಿತು ದೇವರ ಚಿತ್ರ ರಿಂದ ಅರಿಶಿನ ಪುಡಿ ಬರುವುದು ಆರತಿ ತಟ್ಟೆಯಲ್ಲಿ ತುಪ್ಪದ ಬತ್ತಿ ಇದನೆಲ್ಲ ಕೇಳಿದಿರಿ ಆದರೆ ನಾನು ಈಗ ನಿರೂಪಣೆ ಮಾಡುತ್ತಿರುವ ಘಟನೆ ಬಹಳ ವಿಶೇಷ,ಹಾಗೂ ಮನಸಿಗೆ ಉಲ್ಲಾಸದಾಯಕವಾಗಿದೆ ಮತ್ತು ಇದನ್ನ ನೋಡಿದ ಕೆಲವು ಜನರು, ತಮ್ಮ ಕಣ್ಣನ್ನು ತಾವೇ ನಂಬದೇ ಹೋದರು.ಈ ಬೆಳಿಗ್ಗೆ ನನ್ನ ಪತಿ ನನಗಿಂತ ಬೇಗ ಎದ್ದಾಗ ನನ್ನ ಮುಖ ನೋಡಿ ಭಯಗೊಂಡರು,ನನ್ನನ್ನು ಎಬ್ಬಿಸಿ"ನೀನು ಮುಖಕ್ಕೆ ಏನು ಹಚ್ಚಿಕೊಂಡಿರುವೆ?" ಎಂದು ಕೇಳಿದರು . ನಾನು ಕನ್ನಡಿಯಲ್ಲಿ ನನ್ನ ಮುಖ ನೋಡಿಕೊಂಡಾಗ ನನ್ನ ಮುಖಕ್ಕೆ ಅರಿಶಿನ ಲೇಪೀಸಲಾಗಿತ್ತು ಅದರ ಜೊತೆ ನನ್ನ ಹಣೆಯ ಮಧ್ಯದಲ್ಲಿ ಒಂದು ರೂಪಾಯಿ ನಾಣ್ಯ ಗಾತ್ರದ ಕುಂಕುಮದ ಬೊಟ್ಟು ಇತ್ತು. ಈ ಕುಂಕುಮದ ಬೊಟ್ಟು ನಿರಂತರವಾಗಿ ಹಣೆಯ ಮೇಲೆ (ಅತ್ಯಂತ ನಿಧಾನವಾಗಿ) ಬೆಳೆಯುತ್ತಾ ಇತ್ತು.ಅಂದು ನನಗೆ ಇದೇನು ನಡೆಯುತ್ತಾ ಇದೆ ಎಂದು ತಿಳಿಯಲಿಲ್ಲ ಮನದಲ್ಲಿ ಹಲವಾರು ಅನುಮನಗಳಿದ್ದವು. ಸಂಜೆ ಹೊತ್ತಿಗೆ, ಕುಂಕುಮದ ಬೊಟ್ಟು ಗಾತ್ರದಲ್ಲಿ ಬೆಳೆದಿತ್ತು,ಅದೇ ಸಂಜೆನನ್ನ ಸ್ನೇಹಿತರು ಭಜನೆಗಳನ್ನ ಹಾಡಲು ಅವರ ಮಕ್ಕಳೊಂದಿಗೆ ನಮ್ಮ ಮನೆಗೆ ಬಂದರು. ಅವರು ಭಜನೆಗಳನ್ನ ಹಾಡುತಿರುವಾಗ ನನ್ನ ಕಣ್ಣುಗಳನ್ನ ಮುಚ್ಚಿದೆ ಆಗ ನನಗೆ ಶ್ರೀ ಸ್ವಾಮಿ ವೆಂಕಟೇಶ್ವರ ಸ್ವಾಮಿ ಮತ್ತು ಪದ್ಮಾವತಿಯು ಕಂಡರು. ಆಗ ನನ್ನ ಮುಖಕ್ಕೆ ಅರಿಶಿನ ಹಾಗೂ ಕುಂಕುಮದ ಮಹಿಮೆ ಅರಿತುಕೊಂಡೆ ದೇವರನ್ನ ನೋಡಲು ಅವು ನನಗೆ ಅವಶ್ಯವಾದ ಶಕ್ತಿಯನ್ನ ನಿಡುತ್ತಾ ಇದ್ದವು ಸಾಮಾನ್ಯವಾಗಿ ನಮ್ಮ ಕಣ್ಣುಗಳು ಪರಮಾತ್ಮನನ್ನ ನೋಡಲು ಶಕ್ತಾರಲ್ಲ .ಆ ದೇವ ದೇವಿಯರು ನನಗೆ ಅವರ ದೈವತ್ವದ ಅಂದ ನೋಡಲು ನೀಡಿದ ಶಕ್ತಿ ಅದಾಗಿತ್ತು ಇದು ನನ್ನ ಸೌಭಾಗ್ಯ ವೆಂದುಕೊಂಡೆ.ಆ ದಿನ, ನಾವು ದೇವತೆ ಗೆ ಸಕ್ಕರೆ ಮಿಶ್ರಿತ ಹಾಲುನೈವೇದ್ಯವಾಗಿ ಅರ್ಪಿಸಿದೆವು. ಕೆಲವು ಸಮಯದ ನಂತರ ಆ ನೈವೆದ್ಯವು ಜೇನು ತುಪ್ಪವಾಗಿತ್ತು ,ಈ ಪವಾಡವನ್ನ ಕಂಡ ಜನರು ತುಂಬಾ ಸಂತೋಷ ಪಟ್ಟರು ಈ ಪವಾಡ ವನ್ನ ನೋಡಿದ ಅವರು ಅದೃಷ್ಟ ವಂತರು ಎಂದು ಹೇಳುತ್ತ ಅವರವರ ಮನೆಗೆ ತೆರಳಿದರು

**ಸೆಪ್ಟೆಂಬರ್ ೧೧, ೨೦೧೦:** ಈ ದಿನ ಸಹ ದೀಪಗಳು ತನಂತಾನೆ ಬೆಳಗಿದ್ದವು .ತುಪ್ಪಆರತಿ ತಟ್ಟೆಯಲ್ಲಿ ತಯಾರಾಗಿತ್ತು. ನಾನು ಬೆಳಿಗ್ಗೆ ಎದ್ದಾಗ ನನ್ನಮುಖದ ಮೇಲೆ ಅರಿಶಿಣ ದ ಲೇಪನ ಹಾಗೂ ಹಣೆಯ

ಮೇಲೆ ಒಂದು ದೊಡ್ಡ ಕುಂಕುಮದ ಬೊಟ್ಟು ಕಾಣಿಸಿಕೊಂಡಿತು.ನಾನು ಈ ಘಟನೆಯು ಮತ್ತೆ ಸಂಭವಿಸಿದನ್ನ ನೋಡಿ ಬಹಳ ಸಂತೋಷಪಟ್ಟೇ. ಈ ಘಟನೆ ಸಂಭವಿಸಿದ ಕಳೆದ ಬಾರಿಗೆ,ದೇವತೆಗಳು ತಮ್ಮ ದರ್ಶನದಿಂದ ನನಗೆ ಅಲಂಕರಿಸಿದರು ಇವತ್ತು ಕೂಡಾ ಅವರ ದರ್ಶನ ಪಡೆಯುಲಿರುವೆ ತಿಳಿದು ಸಂತೋಷಗೊಂಡೆ . ಅಂದು ದೇವರಿಗೆ ನೈವೇದ್ಯವಾಗಿ ನಿಂಬೆ ಅನ್ನ ಹಾಗೂ ಮೊಸರನ್ನ ನೀಡಿದೆವು.ಕೆಲವು ನಿಮಿಷಗಳ ನಂತರ ನಾವು ಕೊಠಡಿಯೊಳಗೆ ಪ್ರವೇಶಿಸಿದಾಗ ನಿಂಬೆ ಅನ್ನ ಹಾಗೂ ಮೊಸರನ್ನ ಯಾರೋ ಕಲಸಿ ದಂತಿತ್ತು. ಅಂದು ನಮಗೆ ಆ ಪ್ರಸಾದವೇ ಭೋಜನವಾಗಿತ್ತು.ಅಂದು ನಮ್ಮ ಮನೆಗೆ ಕೆಲವು ಅತಿಥಿಗಳು ಬಂದಿದರು. ಅವರಲ್ಲಿ ಒಬ್ಬಳು ಪವಾಡಗಳು ನಮ್ಮ ಮನೆಯಲ್ಲಿ ನಡೆಯುತ್ತಿದೆ ಎಂದು ನಂಬಲಿಲ್ಲ. ಅವರು " ದೇವರು ಕಲ್ಲಿನಿಂದ ಮಾಡಲ್ಪಟ್ಟಿದಾರೆ ಅವರಕೇವಲಆರಾಧನೆ ಮಾಡಬೇಕು ನಮ್ಮ ಆಸೆಗಳನ್ನು ಇಡೆರಿಸು ಅಂತ ದೇವರಲ್ಲಿ ಕೇಳಬೇಕು" ಎಂದಳು. “ದೇವರು ನಿಮ್ಮ ಮನೆಗೆ ಬಂದಿದ್ದಾರೆ ಎಂಬುದು ಕೇವಲ ಕಾಲ್ಪನಿಕ”ಎಂದಳು. ನಂತರ ಅವಳು ಸುಮಾರು ಒಂದು ಗಂಟೆ ನನಗೆ ಪ್ರಶ್ನೆಗಳನ್ನ ಕೇಳಿದಾಗ ನಾನು ತಾಳ್ಮೆಯಿಂದಲೇಅವನ್ನ ಉತ್ತರಿಸಿದ. ಆಕೆ ದೇವರಿಗೆ ಇಡಲು ಸ್ವಲ್ಪ ಹೂವು ತಂದಿದ್ದಳು ಅವಳ ಎಲ್ಲಾ ಪ್ರಶ್ನೆಗಳಿಗೆ ಉತ್ತರಿಸಿದ ನಂತರ ಅವಳು ಮನೆಗೆ ತೆರಳಿದಳು.ಇನ್ನೂ ಕೆಲವು ಅತಿಥಿಗಳು ನಮಗೆ ಭೇಟಿ ನೀಡಿದರು. ನಮಗೆ ಅವರ ಪರಿಚಯ ಹಲವು ವರುಷಗಳಿಂದ ಇತ್ತು. ಅವರು ಕೇವಲ ನನ್ನ ಮನೆಯಲ್ಲಾಗುವ ಪವಾಡಗಳನ್ನ ಪರೀಕ್ಷಿಸಲು ಬಂದಿದ್ದಾರೆ ಎಂದು ಅರಿತುಕೊಂಡೆ. ಸ್ವಲ್ಪ ಸಮಯ ನಮ್ಮ ಜೊತೆ ಇದ್ದು ಅವರು ಪ್ರಸಾದವನ್ನ ಸ್ವೀಕರಿಸದೇ ಅವರಮನೆಗೆ ತೆರಳಿದರು. ಆ ಸಂಜೆ, ನನ್ನ ಪತಿ ಮತ್ತು ಮಗಳು ಒಬ್ಬ ಸ್ನೇಹಿತನ ಮನೆಗೆ ಔತಣ ಕೂಟಕ್ಕೆ ಹೋದರು, ಆದರೆ ನಾನು ಮನೆಯಲ್ಲೇ ಉಳಿದೆ. ನಾನು ದೇವರ ದರ್ಶನಕ್ಕಾಗಿ ಮನೆಯಲ್ಲಿ ಕಾತರದಿಂದ ಕಾಯತೊಡಗಿದೆ.ನಮ್ಮ ಮನೆಗೆ ಬಂದಿದ್ದ ಮಹಿಳೆ ನಮಗೆ ಫೋನ್ ಕರೆ ಮಾಡಿದಳು.(ಹಿಂದಿನ ಸಂಜೆ ಅವಳು ಪವಾಡಗಳನ್ನು ನಂಬಿರಲಿಲ್ಲಹಾಗೂ ಪ್ರಸಾದವನ್ನ ಸ್ವೀಕರಿಸದೆ ಹೋಗಿದ್ದಳು). ಅವಳುಬಾಲಾಜಿ ಮತ್ತು ಪದ್ಮ ಎಂಬ ದಂಪತಿಗಳು ನಿಮ್ಮಗೆಭೇಟಿ ನೀಡುವ ಆಲೋಚನೆ ಮಾಡಿದ್ದಾರೆ ಹಾಗೂ ಅವರಿಗೆ ನಿಮ್ಮವಿಳಾಸ ಹಾಗು ದೂರವಾಣಿ ಸಂಖ್ಯೆ ನೀಡಿ ಕಳುಹಿಸಿದ್ದೆನೆಎಂದಳು. ಅವರಿಗೆ ಯಾವುದೇ ಸಮಸ್ಯೆ ಆದಲ್ಲಿನಿಮ್ಮ ಮನೆ ಹುಡುಕಲು ಕಷ್ಟ ವಾದರೆ ಅವರು ಬಹುಶಃ ನಿಮಗೆ ಕರೆ ಮಾಡುತ್ತಾರೆ ಎಂದಳು. ನಾನು ಅದಕ್ಕೆ ಒಪ್ಪಿಕೊಂಡೆ. ನಾನು ಇನ್ನೂದೇವರ ದರ್ಶನಕ್ಕೆ ಕಾತುರದಿಂದ ಕಾಯುತ್ತಿದ್ದೆ. ಸ್ವಲ್ಪ ಸಮಯದ ನಂತರ, ಬಾಲಾಜಿ ಮತ್ತು ಪದ್ಮ ನನ್ನ ಮನೆಗೆ ಬಂದರು. ನಾನುಅವರನ್ನ ಸ್ವಾಗತಿಸಿ ಪೂಜಾ ಕೊಠಡಿಯೊಳಗೆ ಕರೆದುಕೊಂಡು ಹೋದೆ, ಅವರು ದೇವರನ್ನ ನೋಡಿ "ನೀವು ತುಂಬಾ ಅದೃಷ್ಟವಂತರು; ದೇವರ ಸಂಪೂರ್ಣಅನುಗ್ರಹ ನಿಮ್ಮ ಮೇಲೆ ಇದೆ "ಎಂದರು. ನಂತರ ನಾನು ಅವರಿಗೆ ಪ್ರಸಾದವನ್ನ ನೀಡಿದೆ ಅದನ್ನ ಅವರು ಸಂತೋಷ ದಿಂದಲೇಸ್ವೀಕರಿಸಿದ್ದರು. ಕೆಲವು ನಿಮಿಷಗಳ ನಂತರಮತ್ತೆ ಭೇಟಿ ಮಾಡುತ್ತೇವೆ ಎಂದು ಹೊರಟು ನಿಂತರು. ಅವರು ಹೋದ ನಂತರ, ನಾನು ಮತ್ತೆ ನನ್ನ ಸೌಭಾಗ್ಯದಿಂದ ದೇವರ ದರ್ಶನ ಪಡೆದೆ. ಇದಾದನಂತರ ನನ್ನ ಪತಿ ತನ್ನ ಸ್ನೇಹಿತನ ಮನೆಯಿಂದ ಮರಳಿದರು. ನಾನು ಅವರಿಗೆ ಶ್ರೀ ವೆಂಕಟೇಶ್ವರ ಹಾಗೂ ಪದ್ಮಾ ದಂಪತಿಗಳ ಬಗ್ಗೆ ಹೇಳಿದೆ ಮತ್ತು ಆ ಸಂಜೆ (ಪ್ರಸಾದ ತೆಗೆದುಕೊಳ್ಳದೆಯೇ ಹೋದ ಮಹಿಳೆ) ಅವರನ್ನ ನಮ್ಮ ಮನೆಗೆ ಕಳುಹಿಸಿದಳು ಎಂದೆ . ಇದನ್ನ ಕೇಳಿ ನನ್ನ ಪತಿ ಹೇಳಿದರು "ಅವಳೆ ಪವಾಡಗಳನ್ನು ನಂಬುವುದಿಲ್ಲ ಹಾಗಾದರೆ, ಏಕೆ ಅವಳು ಇತರರನ್ನು ಕಳುಹಿಸುತ್ತಾಳೆ?"ಎಂದರು ನನ್ನ ಪತಿ ಇದನ್ನ ಉಲ್ಲೇಖಿಸುವವರೆಗು,ನನಗೆ ಆ ಅನುಮಾನವೆ ಬರಲಿಲ್ಲ. ಈ ಘಟನೆಯನಂತರ ನನ್ನ ಮನಸಿನಲ್ಲಿ ಒಂದು ಪ್ರಶ್ನೆ ಮುಡಿತು ಈ ದಂಪತಿಗಳ ಆಗಮನದ ಮುಂಚೆಯಿಂದಲೂ ನಾನು ದೇವರ ದರ್ಶನಕ್ಕೆ ಕಾಯುತ್ತಿದ್ದೆ ಆ ದಂಪತಿಗಳು ಬಂದು ಹೋದ ನಂತರವೇ ಯಾಕೆ ನಂಗೆ ನನ್ನ ದೇವರ ದರ್ಶನ ಸಿಕ್ಕಿತು?ಏಕೆ ಆದಂಪತಿಗಳ ಆಗಮನದ ಮೊದಲು ಆಗಲಿಲ್ಲ? ನಾನು ನನ್ನ ಅನುಮಾನವನ್ನ ಸ್ಪಷ್ಟಪಡಿಸಲು ಬಯಸಿದೆ. ನಾವು ಫೋನ್ ಕರೆ ಮಾಡಿ ಮಹಿಳೆಯನ್ನ ವಿಚಾರಿಸಿದಾಗ ಅವಳು ನಮ್ಮ ಮನೆಗೆ ಯಾರನ್ನು ಕಳಿಸಲಿಲ್ಲ ವೆನ್ನು ಬಾಲಾಜಿ ಮತ್ತು ಪದ್ಮ ಎಂಬುವರ ಪರಿಚಯವೇ ಅವಳಿಗಿಲ್ಲಎಂದಳು. ಹಾಗೂ ಅವಳ ಯಾವ ಸ್ನೇಹಿತರ ಅಥವಾ ಸಂಬಂಧಿಕರ ಹೆಸರು ಅದಾಗಿರಲಿಲ್ಲಾ ಎಂದಳು.ಆಗನನಗೆ ನನ್ನ ಮನೆಗೆ ಭೇಟಿ ನೀಡಿದ ದಂಪತಿಗಳು ಬೇರೆ ಯಾರೂ ಅಲ್ಲದೆ ನಾನು ಕಾತುರದಿಂದ ಕಾಯುತ್ತಿದ ಭಗವಂತನೇ ಆಗಿದ್ದರುಎಂದುಮನದಟ್ಟಾಯಿತು. ನಾನು ಎರಡನೆಯ ಬಾರಿಯೂ ದೇವರನ್ನ ಗುರಿತಿಸದೆ ಹೋದನೆ ಎಂದು

ನಿರಾಶೆಗೊಂಡೆ ಮೊದಲ ಬಾರಿಗೆ (ತಿರುಮಲ ತಿರುಪತಿ ಯಲ್ಲಿ ದರ್ಶನ ನೀಡಿದಾಗ ಅವರನ್ನ ಗುರುತಿಸದೇ ಹೋದೆ,೨೦೦೫ ರಲ್ಲಿ ಆದ ಘಟನೆ) ಎರಡನೇ ಬಾರಿ ಈ ಘಟನೆ ಪುನವರ್ತಿಸಿತ್ತು. ನಾನುದೇವರಲ್ಲಿ ಅತ್ತು "ಓಹ್ ದೇವರೇ! ನೀವು ನನ್ನ ಮನೆಗೆ ಭೇಟಿ ನೀಡಿದರು, ನಿಮ್ಮನ್ನ ನಾನು ಗುರುತಿಸದೇ ಹೋದನೆ ಏನಿದು ಪರೀಕ್ಷೆ ? "ಎಂದು ಅತ್ತೆ.ಅಂದು ರಾತ್ರಿ ೧೧ ಗಂಟೆಗೆ ನಾವು ಪೂಜಾ ಕೊಠಡಿ ಬಾಗಿಲು ಮುಚ್ಚಿದೆವು,ಸ್ವಲ್ಪ ಹೊತ್ತು ನಾನು ಟೀವೀ ವೀಕ್ಷಿಸಿಸ ತೊಡಗಿದೆ. ಸ್ವಲ್ಪ ನಿದ್ದೆ ಬರುತಿದ್ದೆ ಎಂದಾಗ ದೇವರನ್ನು ನೋಡಲು ಪೂಜಾ ಕೊಠಡಿಗೆ ಹೋದೆ. ಆಗ ರಾತ್ರಿಯ ೧೧:೩೦ ದೇವರ ವಿಗ್ರಹಗಳಿಂದ (ಶ್ರೀ ವೆಂಕಟೇಶ್ವರ ಸ್ವಾಮಿ ಹಾಗೂ ದೇವಿ ಪದ್ಮಾವತಿ ) ಜೇನು ಹರಿಯುತಿರುವುದು ನನ್ನ ಗಮನಕ್ಕೆ ಬಂತು ಇದು ನಂಬಲ ಅಸಾಧ್ಯವಾದ ವಿಷಯವಾಗಿತ್ತು ನನ್ನ ಗಂಡನು ಇದನ್ನ ನೋಡಿ ವಿಸ್ಮಿತ ಗೊಂಡರು" ನಾವು ಈ ವಿಸ್ಮಯದ ಹಲವು ವೀಡಿಯೊಗಳು ಹಾಗೂ ಚಿತ್ರಗಳನ್ನು ಸೆರೆಹಿಡಿದೆವು ತಕ್ಷಣ ನನ್ನ ಮೈದುನನಾದ ಗಣೇಶ ಹಾಗೂ ಅವನ ಪತ್ನಿಶಿವ ಪ್ರಿಯಾ ಳಿಗೆ (ಸ್ಕೈಪ್ ವಿಡಿಯೋ ಮೂಲಕ) ಈ ಪವಾಡವನ್ನ ತೋರಿಸಿದೆವು ಅವರು ಅತ್ಯಂತ ಸಂತೋಷ ಗೊಂಡರು . ನಂತರ, ನಾನು ದೇವರವಿಗ್ರಹನೋಡಿದಾಗಅವರಮುಂದೆ ಇದ್ದ ಹೂಗಳುಅವರಿಗೆ ಬೇಡಯೆಂಬಂತೆ ಎಸಯಲಾಗಿತ್ತು. ಆ ಮಹಿಳೆ ನೀಡಿರುವ ಹೂಗಳು ಇವಾಗಿದವು (ಪ್ರಸಾದವನ್ನ ಸ್ವೀಕರಿಸದೇ ಹೋದ) ನಂತರ ಕೇವಲ ಭಕ್ತಿಯಿಂದ ನೀಡಿದ ಹೂಗಳನ್ನ ದೇವರಿಗೆ ಇಡಲು ನಿರ್ದರಿಸಿದ್ದೆವು. ಪ್ರತಿ ದಿನವೂ ಒಂದು ಅವಸ್ಮರಣಿಯ ಹಾಗೂ ಹಲವು ಸಿಹಿ ನೆನಪುಗಳು ಬಿಟ್ಟು ಹೋಗುತ್ತಿದ್ದವು.

**ಸೆಪ್ಟೆಂಬರ್ ೧೨, ೨೦೧೦:** ಈ ದಿನ ಕುಂಕುಮ ದೇವರ ಚಿತ್ರದ ಚೌಕಟ್ಟಿನಿಂದ ಹೊರಗೆ ಬರುತಿತ್ತುವಿಗ್ರಹಗಳಿಂದ ಜೇನುತೊಟ್ಟಿಕ್ಕುತ್ತಿತು.ನಾವು ಮಧ್ಯಾಹ್ನ ನೈವೇದ್ಯವನ್ನ ದೇವರಿಗೆ ಅರ್ಪಿಸಿದೆವು. ಅಂದು ದೇವರು ಅದನ್ನ ಸ್ವೀಕರಿಸಲಿಲ್ಲ. ಸಂಜೆ ನಾವು ದೇವರಿಗೆ ತೊನ್ನೆಕಾಯಿಯ ಜೊತೆ ಅನ್ನ ಅರ್ಪಿಸಿದೆವು. ನಾವು ಪುನಃ ದೇವರ ಕೊಠಡಿ ಪ್ರವೇಶಿಸಿದಾಗ ನಾವು ಅರ್ಪಿಸಿದ ನೈವೇದ್ಯವೂ ಮಿಶ್ರಗೋಂಡು ಲಾಡು ಕಟ್ಟಿದಂತೆ ಇತ್ತು,ನಾವು ನಮ್ಮ ಮನೆಗೆ ಬಂದ ಅತಿಥಿಗಳಿಗೆ ಈ ಪ್ರಸಾದವನ್ನ ಹಂಚಿದೆವು.

**ಸೆಪ್ಟೆಂಬರ್೧೩,೨೦೧೦:** ಇಂದು ಬೆಳಿಗ್ಗೆ ನಾನು ನೈವೇದ್ಯವಾಗಿ ಒಣಗಿದ ಹಣ್ಣುಗಳು ದೇವರಿಗೆ ನೀಡಿದೆಸ್ವಾಮಿ ಯು ಸ್ವಲ್ಪ ತಿಂದು ಉಳಿದನ್ನ ನಮಗೆ ಬಿಟ್ಟರು ಎಂದಿನಂತೆ ತುಪ್ಪದ ಆರತಿ ತಟ್ಟೆಯು ಸಿದ್ದವಾಗಿತ್ತು. ನಾನು ನನ್ನ ಮಗಳನ್ನ ಶಾಲೆಗೆ ಕಳುಹಿಸಿದ ನಂತರ ಅಡುಗೆ ಪ್ರಾರಂಬಿಸಿದೆ, ನಾನು ಫೋನ್ ನಲ್ಲಿ ನನ್ನ ಗಂಡನ ಜೊತೆ ಮಾತನಾಡುವ ಸಂದರ್ಭದಲ್ಲಿ ಗೆಜ್ಜೆಯ ಶಬ್ದ ಕೇಳಿದೆ ಅವು ಪೂಜಾ ಕೊಠಡಿಯಿಂದ ಬರುತಿದ್ದವು. ನನ್ನ ಪತಿಗೆ ಅದನ್ನು ವಿವರಿಸಿದೆ ಅವರಿಗೆ ಅದು ಕೇಳಿಸಲಿಲ್ಲಾ . ನಾನು ಈ ಘಟನೆಯನ್ನ ವಿಡಿಯೋ ಕ್ಯಾಮೆರಾ ಮತ್ತು ಸ್ಕೈಪ್ ಮೂಲಕ ನನ್ನ ಮೈದುನನಿಗೆ ಈ ಗೆಜ್ಜೆಯ ಶಬ್ದ ಕೇಳಿಸಿದೆ .ಆಗ ಅವರು ಅದನ್ನ ನಂಬಿದ್ದರು. ನಾನು ಕೂಡ ಇದು ನಿಜವೆಂದು ಹಾಗೂ ಕಾಲ್ಪನಿಕ ಅಲ್ಲವೆಂದು ಅರಿತೇ . ಇದನ್ನ ಕೇಳಿದನಾನು ಅತ್ಯಂತ ಸಂತೋಷಗೊಂಡೆ ದೇವತೆಯ ನೃತ್ಯ ಶಬ್ದ ಕೇಳಿದ ನಾನು ಅದೃಷ್ಟಶಾಲಿಯೂ ಎಂದುಕೊಂಡೆ. ನನ್ನ ಮಗಳು ಶಾಲೆಯಿಂದ ಬಂದೊಡನೆ ಈ ಸಿಹಿಯಾದ ನಾದವನ್ನು ಕೇಳಿದಳು.ನಾವು ಇಬ್ಬರು ಇದನ್ನ ಸುಮಾರು ಐದು ನಿಮಿಷಗಳ ಕಾಲ ಕೇಳಿಸಕೊಂಡೆವು. ಅಂದು ರಾತ್ರಿ ನನ್ನ ಪತಿಗೆ ಕೂಡ ಇದನ್ನ ಕೇಳಿಸಿ ಕೊಳ್ಳುವ ಅವಕಾಶ ದೊರಕಿತು

**ಸೆಪ್ಟೆಂಬರ್ ೧೪,೨೦೧೦:** ಜೇನು ಇನ್ನೂ ನನ್ನ ಆರಾಧ್ಯ ದೇವರ ವಿಗ್ರಹದಿಂದ ಹರಿಯುತಿತ್ತು . ಇದನ್ನ ನಾವು ನಮ್ಮ ಮನೆಗ ಬಂದ ಸ್ನೇಹಿತರು, ಅತಿಥಿಗಳು ಹಾಗೂ ಭಕ್ತರಿಗೆ ತೀರ್ಥವಾಗಿ ನೀಡಿದೆವು.

**ಸೆಪ್ಟೆಂಬರ್ ೧೫,೨೦೧೦:** ಈ ದಿನ ನಾವು ದೇವರ ಚಿತ್ರದ ಚೌಕಟ್ಟಿನ ಮುಂದೆ ಹೆಚ್ಚು ಕುಂಕುಮವಿರುದನ್ನ ಗಮನಿಸಿದೆವು ನಾವು ಜೇನು ಸಂಗ್ರಹಿಸಲು ಇರಿಸಲಾದ ಬಟ್ಟಲು ತುಂಬಿತ್ತು ಆದ್ದರಿಂದ ನಾವು ಹೊಸ ಬಟ್ಟಲು ಇರಿಸಿದೆವು.

**ಸೆಪ್ಟೆಂಬರ್ ೧೬,೨೦೧೦:** ಈ ದಿನ ನಾವು ನೈವೇದ್ಯ ರೂಪದಲ್ಲಿ ಒಂದು ಸೇಬು ನೀಡಿದೆವು.ನಾವು ಪೂಜಾ ಕೊಠಡಿಗೆ ಮತ್ತೆ ಹೋದಾಗ ನಾವು ಅರ್ಪಿಸಿದ ಸೆಬನ್ನ, ಸ್ವಾಮಿ ಸ್ವಲ್ಪ ತಿಂದಿದ್ದರುಈ ದಿನ, ಅರಿಶಿನ ಮತ್ತು ಕುಂಕುಮ ದೇವರ

ಮುಖ ಹಾಗೂ ಕಿರೀಟವನ್ನ ಆವರಿಸಿರಲಿಲ್ಲ . ಮುಖ ಮತ್ತು ಕಿರೀಟವು ಪ್ರಕಾಶಮಾನವಾಗಿ ಕಾಣುತಿತ್ತು. ನಾವು ನಮ್ಮ ಮನೆಗೆ ಬಂದ ಜನರಿಗೆ ಅರಿಶಿನ ಪುಡಿ ಹಾಗೂ ಕುಂಕುಮ ನೀಡಲು ಆರಂಭಿಸಿದ್ದೆವು ಜೇನು ಇನ್ನೂ ದೇವದೇವತೆಯ ವಿಗ್ರಹದಿಂದ ತೊಟ್ಟಿಕ್ಕುತ್ತಿತು. ಸುಮಾರು ೧೦ ನಿಮಿಷಗಳ ಒಂದು ಸಂಕ್ಷಿಪ್ತ ಅವಧಿಯಲ್ಲಿ ಜೇನು ಅತ್ಯಂತ ವೇಗವಾಗಿ ತೊಟ್ಟಿಕ್ಕತೊಡಗಿತು. ಅಂದು ನಾವು ದೇವರಿಗೆ ಕಿಚ್ಚಿಡಿ ಅರ್ಪಿಸಿದೆವು. ಅದಾದ ನಂತರ ೧೫ನಿಮಿಷಗಳ ಕಾಲ ಟಿವಿ ನೋಡತೊಡಗಿದೆ ದೇವರಿಗೆ ನೀಡಲಾದ ಕಿಚಿಡಿಯ ಒಂದು ಸಣ್ಣ ತುತ್ತು ನನ್ನ ಬಾಯಲ್ಲಿ ಕಾಣಿಸಕೊಂಡಿತ್ತುನಾವು ಪೂಜಾ ಕೊಠಡಿ ಪ್ರವೇಶಿಸಿದ ದೇವರು ಒಂದು ತುತ್ತು ಸ್ವೀಕರಿಸಿದನ್ನ ಗಮನಿಸಿದೆ. (ಸೆಪ್ಟೆಂಬರ್ ೧೮,೨೦೧೦ ರ ಚಿತ್ರವನ್ನು ನೋಡಿ)

**ಸೆಪ್ಟೆಂಬರ್ ೧೯,೨೦೧೦:** ಈ ದಿನ ನಾವು ಭಗವಂತನಿಗೆ ಒಂದು ಸೇಬು ನೀಡಿದೆವು. ದೇವರು ಹಣ್ಣಿನ ಒಂದು ಚಿಕ್ಕ ತುಂಡು ತಗೆದುಕೊಂಡು ನನಗೆ ಮತ್ತೊಂದು ತುಂಡು ನೀಡಿದ್ದಾರೆ. ನಾನು ಅಡಿಗೆ ಮನೆಯಲ್ಲಿ ಅಡುಗೆ ಮಾಡುತ್ತಿರುವಾಗ ನನ್ನ ಬಾಯಲ್ಲಿಇದುಕಾಣಿಸಿಕೊಂಡಿತ್ತು ನಾನು ತಕ್ಷಣ ನನ್ನ ಗಂಡನಿಗೆ ಅದನ್ನ ತೋರಿಸಿದೆ. ನಂತರ, ದೇವರ ಕೊಠಡಿ ಪ್ರವೇಶಿಸಿದಾಗ ಸೇಬಿನ ಒಂದು ತುಂಡು ದೇವರು ತಿಂದಿದರು.ಸಂಜೆ ನಾವು ಒಂದು ಸಣ್ಣ ಬಟ್ಟಲಿನಲ್ಲಿ ನೈವೇದ್ಯವಾಗಿ ಹಣ್ಣಿನ ರಸ ನೀಡಿದೆವು. ನಂತರ ನಾವು ಪೂಜಾ ಕೊಠಡಿ ಮರಳಿ ಹೋದಾಗ ಬಟ್ಟಲಿನಲ್ಲಿ ಸ್ವಲ್ಪ ರಸ ಮಾತ್ರ ಉಳಿದಿತ್ತು ದೇವರು ನಮ್ಮ ನೈವೇದ್ಯವನ್ನು ಸ್ವೀಕರಿಸಿದರು ಎಂದು ಕೊಂಡೆ. ನಂತರ, ನಾವು ಬಟ್ಟಲಿನಲ್ಲಿ ಉಳಿದ ರಸ ಕುಡಿದೆವು. ಜೆನುಇನ್ನೂ ದೇವರ ವಿಗ್ರಹಗಳಿಂದ ಹರಿಯುತಿತ್ತು

**ಸೆಪ್ಟೆಂಬರ್ ೨೦,೨೦೧೦:** ಇವತ್ತು ನಾವು ದೇವರಿಗೆ ಅನ್ನ ಮತ್ತು ತೊಂಡೆ ಕಾಯಿ ಫ್ರೈ ನೀಡಿದೆವು. ನಾವು ಕೆಲವು ನಿಮಿಷಗಳ ನಂತರ ಪೂಜಾ ಕೊಠಡಿ ಪ್ರವೇಶಿಸಿದಾಗ ತಟ್ಟೆಯಲ್ಲಿ ನೈವೇದ್ಯವೂ ನಾಲ್ಕು ಉಂಡೆಗಳಾಗಿದ್ದವು .ಆ ದಿನ ಸಂಜೆ ನಾವು ದೇವರಿಗೆ ಚಪ್ಪಾತಿ ಹಾಗೂ ಚನ್ನಾ ಮಸಾಲನೀಡಿದೆವು, ದೇವರು ಅದನ್ನ ಬಹಳ ಪ್ರೀತಿಯಿಂದ ತಿಂದರು ಮತ್ತು ನಮಗೆ ಉಳಿದನ್ನ ಬಿಟ್ಟರು. ಜೇನು ಇಂದು ಕೂಡ ದೇವರ ವಿಗ್ರಹಗಳಿಂದ ಹರಿಯುತಿತ್ತು.

**ಸೆಪ್ಟೆಂಬರ್ ೨೧,೨೦೧೦:** ಇಂದು ನಾವು ಅನ್ನ ಮತ್ತು ಪಾಲಕ ಪಲ್ಯ ನೈವೇದ್ಯವಾಗಿ ನೀಡಿದ್ದೆವು. ಕೆಲವು ಸಮಯದ ನಂತರ ಅನ್ನ ಮತ್ತು ಪಾಲಕ ಪಲ್ಯ ಬೆರೆತುಕೊಂಡಿತ್ತು ದೇವರು ಸ್ವಲ್ಪ ನೈವೇದ್ಯವನ್ನು ಸ್ವೀಕರಿಸಿದ್ದರು. ಇದ್ದಕ್ಕಿದ್ದಂತೆತುಪ್ಪದ ದೀಪ ಆರತಿಸಿದ್ದ ಗೊಂಡಿತ್ತು. ಅಲ್ಲದೆ, ಜೇನುತುಪ್ಪ ಮತ್ತು ಹಾಲಿನ ಸಣ್ಣ ಬಟ್ಟಲು ಕಾಣಿಸ ಕೊಂಡಿತ್ತು .ಈ ರೀತಿಯಲ್ಲಿ ದೇವನು ತಮ್ಮ ಪವಾಡಗಳನ್ನು ತೋರಿಸಿ ಈ ಕಲಿಯುಗದಲ್ಲಿ ತನ್ನ ಅಸ್ತಿತ್ವವನ್ನು ಸಾಬಿತು ಪಡುಸುತಿದ್ದರು. ಈ ಅದ್ಭುತಗಳನ್ನ ತೋರಿಸಲು ದೇವರು ನಮ್ಮನ್ನ ಆಯ್ಕೆ ಮಾಡಿರುವುದು ನಮಗೆ ಸಂತೋಷ ತಂದಿತ್ತು.

**ಸೆಪ್ಟೆಂಬರ್ ೨೨,೨೦೧೦:** ಇಂದು ನಾವು ಅನ್ನ ಮತ್ತು ದಾಲ್ ಫ್ರೈ ದೇವರಿಗೆ ನೀಡಿದೆವು . ಕೆಲವುಸಮಯದನಂತರ ನಾವು ಪೂಜಾ ಕೊಠಡಿ ಪ್ರವೇಶಿಸಿದ್ದಾಗ ಅನ್ನ ಮತ್ತು ದಾಲ್ ಫ್ರೈ ಕಲಿಸಲಾಗಿತ್ತು, ದೇವರು ಸ್ವಲ್ಪವನ್ನು ಸ್ವೀಕರಿಸಿ ಉಳಿದನ್ನು ನಮಗೆ ಬಿಟ್ಟಿದರು .ಸಾಯಂಕಾಲ ದ್ರಾಕ್ಷೆ ದೇವರಿಗೆ ಅರ್ಪಿಸಿದೆವು ನಾವು ಊಟ ಮಾಡುವ ಸಮಯದಲ್ಲಿ ದ್ರಾಕ್ಷಿಯು ಇದ್ದಕ್ಕಿದ್ದಂತೆ ನನ್ನ ಬಾಯಿಯಲ್ಲಿ ಕಾಣಿಸಕೊಂಡಿತ್ತು ನಾವು ಪೂಜಾ ಕೊಠಡಿ ಒಳಗೆ ಹೋದಾಗ ಕೇವಲ ಎರಡು ದ್ರಾಕ್ಷಿಗಳು ಬಟ್ಟಲಿನಲ್ಲಿ ಬಿಡಲಾಗಿತ್ತು.

**ಸೆಪ್ಟೆಂಬರ್ ೨೩, ೨೦೧೦:** ಈ ದಿನ ನಾವು ಚಿಕ್ಕ ದ್ರಾಕ್ಷಿಯನ್ನು ನೈವೇದ್ಯವಾಗಿ ನೀಡಿದ್ದೆವು.ಮತ್ತೊಮ್ಮೆ,ದೇವರಿಗೆ ನೀಡಿದ ದ್ರಾಕ್ಷಿಯು ನನ್ನ ಬಾಯಿಯಲ್ಲಿ ಕಾಣಿಸ ಕೊಂಡಿತ್ತು. ವಿಗ್ರಹಗಳಿಂದ ಜೇನು ಇನ್ನೂ ತೊಟ್ಟಿಕ್ಕುತಿತ್ತು. ಇಂದು ನನ್ನ ಪತಿ ಸ್ನೇಹಿತರು ನಮ್ಮ ಮನೆಗೆ ಭೇಟಿ ನೀಡಿದರು. ಅವರು ಬರುವ ಮುಂಚೆ ಜೇನಿನ ಝರಿ ವೇಗವಾಗಿ ಹರಿಯುತಿತ್ತು. ನನ್ನ ಪತಿ ಇದರ ವಿಡಿಯೋ ತೆಗೆದುಕೊಳ್ಳುತ್ತಿರುವ ಸಂದರ್ಭದಲ್ಲಿ ಅವರು ಆರತಿ ತಟ್ಟೆಯಲ್ಲಿ ಸುಟ್ಟ ಬತ್ತಿ ಗಮನಿಸಿದರು ಅದು ಇದ್ದಕ್ಕಿದ್ದಂತೆ ಬೆಳಗಿತ್ತು . ಅದು ಅತ್ಯಂತ ಅತ್ಯಾಶ್ಚರ್ಯಕರ ಹಾಗೂ ನಂಬಲಾಗದ ಘಟನೆ ಯಾಗಿತ್ತು. ಅವರು ನನ್ನನ್ನು ಮತ್ತು ಅವರ ಸ್ನೇಹಿತರನ್ನ ಕರೆದು ತೋರಿಸಿದ್ದರು. ಎಲ್ಲರೂ ಇದನ್ನ ನೋಡಿ ಬಹಳ ಸಂತೋಶೊಗಂಡು ಈ ಪವಾಡಗಳ ಸಾಕ್ಷಿಯಾಗಿರುದನ್ನ ಅವರ ಅದೃಷ್ಟವೆಂದು ಭಾವಿಸಿದರು.

**ಸೆಪ್ಟೆಂಬರ್ ೨೪, ೨೦೧೦:** ನಾವು ಬೆಳಿಗ್ಗೆ ಮತ್ತು ಮಧ್ಯಾಹ್ನ ನೀಡಿದ ನೈವೇದ್ಯವನ್ನು ದೇವರು ಸ್ವೀಕರಿಸಲಿಲ್ಲ, ಸಂಜೆನಾವು ಒಣದ್ರಾಕ್ಷಿ ಅರ್ಪಿಸಿ ಮನೆಯಿಂದ ಹೊರಗೆ ಹೋದೆವು. ನಾವುನಮ್ಮ ಮನೆಯಿಂದ ಸುಮಾರು ೫

ಕಿಲೋಮೀಟರ್ ದೂರ ಹೋದಾಗ ಇದ್ದಕ್ಕಿದ್ದಂತೆ, ದೇವರಿಗೆ ನೀಡಲಾದ ಎಂದು ಆ ಒಣ ದ್ರಾಕ್ಷಿಯು ನನ್ನ ಬಾಯಿಯಲ್ಲಿ ಕಾಣಿಸಿತು. ಅಲ್ಲಿಯವರೆಗೆ, ಈ ಎಲ್ಲಾ ವಿಷಯಗಳನ್ನು ಸಂಭವಿಸಿದ್ದು ನಮ್ಮ ಮನೆಯಲ್ಲಿ. ನಾವು ಮನೆಯಿಂದ ಹೊರಗೆ ಇದ್ದಾಗ ಹೀಗಾಗಿದ್ದು ಮೊದಲ ಬಾರಿ. ನಾನು ತುಂಬಾ ಸಂತೋಷ ಗೊಂಡೆ.

**ಸೆಪ್ಟೆಂಬರ್ ೨೫,೨೦೦೦:** ನಾನು ಪೂಜಾ ಕೊಠಡಿ ಒಳಗೆ ಹೋದಾಗ ಇಂದು ಪುನಃ ತುಪ್ಪ ದೀಪದ ಆರತಿ ತಟ್ಟೆ ತಯಾರಾಗಿತ್ತು ಜೇನು ಮತ್ತು ಹಾಲು ತನಂತಾನೆ ದೇವರ ಮುಂದೆ ಒಂದು ಸಣ್ಣ ಬೆಳ್ಳಿ ಬಟ್ಟಲು ಕಾಣಿಸಿಕೊಂಡಿತು. ನನ್ನ ಪತಿ ಹಾಗೂ ಮಗಳು ನನ್ನ ಜೊತೆ ಸೇರಿ ದೇವರ ಪೂಜೆ ಮಾಡಿದರು ನಾನು ಚಂದನದ ಪುಡಿಯಲ್ಲಿ ನೀರು ಬೇರಸಿ ಒಂದು ಬೆಳ್ಳಿ ಬಟ್ಟಲಿನಲ್ಲಿ ಇರಿಸಿದೆ ಸೆಪ್ಟೆಂಬರ್ ೪ ೨೦೦೦ ರಿಂದ ಇಂದು ತನಕ, ಆ ಬಟ್ಟಲಿನಲ್ಲಿ ಇರುವ ಚಂದನ ಒಣಗಿಲ್ಲ. ನಾವು ಪೂಜೆ ಮುಗಿಸುತಿರುವಾಗ, ನನ್ನ ಹಣೆಯ ಮೇಲೆ ಒಂದು ಚಿಕ್ಕ ಬೊಟ್ಟು ಗಮನಿಸಿದೆವು ಇದು ಸಾಮಾನ್ಯ ಕುಂಕುಮ ಬೊಟ್ಟು ಅಲ್ಲ, ಶ್ರೀಗಂಧದ ಬೊಟ್ಟಾಗಿತ್ತು . ಹಾಗೂ ನನ್ನ ಕತ್ತಿನ ಮೇಲೆ (೩ ಶ್ರೀಗಂಧದ ರೇಖೆಗಳು) ಬರೆದಿತ್ತು . ಪೂಜೆಯ ನಂತರ ನನ್ನ ಗಂಡ ಹಾಗೂ ನನ್ನ ಮಗಳು ಆಡುತಿದ್ದರು ನಾನು ಅಡುಗೆ ಮನೆಯಲ್ಲಿ ಅಡುಗೆ ಮಾಡುತ್ತಿದ್ದೆ. ಆ ಸಮಯದಲ್ಲಿ ಮೂರು ಶ್ರೀಗಂಧದ ಕಡ್ಡಿಗಳು ಪೂಜಾ ಕೊಠಡಿಯಲ್ಲಿ ಇದಕ್ಕಿಂತೆ ಬೆಳಗಿತ್ತು. ಆದ್ದರಿಂದ ನಾನು ಅಲ್ಲಿ ಹೋಗಿ ಗಾಜಿನ ಬಟ್ಟಲು ಇರಿಸಿದೆ. ನಂತರ ಕೆಲವು ನಿಮಿಷಗಳ, ಶ್ರೀಗಂಧದ ಕಡ್ಡಿಗಳ ಒಂದು ಕಟ್ಟು ಇದಕ್ಕಿಂತೆ ಬೆಳಗಿತು. ನಮ್ಮ ಮನೆ ಸಂಪೂರ್ಣವಾಗಿ ಚಂದನದ ಸುಗಂಧ ದಿಂದ ತುಂಬಿತ್ತು. ಇಂದು ನಾನು ದೇವರಿಗೆ ತರಕಾರಿ ಮಿಶ್ರ ಗೊಂಡ ಅನ್ನ ನೀಡಿದೆವು. ಸ್ವಲ್ಪ ಸ್ವೀಕರಿಸಿದ ಪರಮಾತ್ಮನು ಉಳಿದನ್ನ ನಮಗೆ ಬಿಟ್ಟರು ಅದೇ ಸಂಜೆ ಕೂಡ ತುಪ್ಪ ಸಣ್ಣ ದೀಪಗಳಲ್ಲಿ ತುಂಬಲಾಗಿತ್ತು ಹಾಗೂ ಆರತಿಯ ಸಿದ್ದತೆ ಕೂಡ ಆಗಿತ್ತು .ನಾವು ಅಂದು ಸಂಜೆ ಕಪ್ಪು ದ್ರಾಕ್ಷೆ ದೇವರಿಗೆ ನೈವೇದ್ಯವಾಗಿ ನೀಡಿದೆವು, ಆದರೆ ಸ್ವಾಮಿ ದ್ರಾಕ್ಷಿಯನ್ನು ತಿನ್ನಲಿಲ್ಲ.ಜೇನು ಇನ್ನೂ ದೇವರ ವಿಗ್ರಹಗಳಿಂದ ತೊಟ್ಟಿಕ್ಕುತಿತ್ತು. ಚಂದನದಪುಡಿ ಇನ್ನೂ ಕೂಡ ಸಣ್ಣ ಬೆಳ್ಳಿ ಬಟ್ಟಲಿನಲ್ಲಿ ತಾಜಾ ಮತ್ತು ತೇವವಾಗಿದೆ.

**ಸೆಪ್ಟೆಂಬರ್ ೨೬, ೨೦೦೦:** ಇಂದು ಬೆಳಿಗ್ಗೆ ಹಾಗೂ ಮಧ್ಯಾಹ್ನ ಸ್ವಾಮಿಯೂ ನೈವೇದ್ಯವನ್ನು ಸ್ವೀಕರಿಸಲಿಲ್ಲ. ಸಂಜೆ ನಾವುನೈವೇದ್ಯವಾಗಿ ಹಣ್ಣುಗಳನ್ನ ನೀಡಿ ಹೊರಗೆ ಶಾಪಿಂಗ್ ಗೆ ಹೋದೆವು .ನಾವು ಸುಮಾರು ೪ ಕಿಲೋಮೀಟರ್ ದೂರ ನಮ್ಮ ಮನೆಗೆ ಆಗಿತ್ತು. ನಾವುಅಂಗಡಿ ಪ್ರವೇಶಿಸುವ ಮಾಡಲಾಯಿತು, ಇದ್ದಕ್ಕಿದ್ದಂತೆ ನನ್ನ ಬಾಯಿಗೆ ಒಂದು ದ್ರಾಕ್ಷಿ ಬಂತು. ಮನೆಗೆ ಹಿಂತಿರುಗಿದ ನಂತರ, ನಾವು ದೇವರಿಗೆ ನೀಡಿದ ದ್ರಾಕ್ಷಿಯು ತನಂತಾನೆ ಬಟ್ಟಲಿನಲ್ಲಿ ಕಡಿಮೆ ಆಗಿರುವುದು ಗಮನಿಸಿದೆವು.

**ಸೆಪ್ಟೆಂಬರ್ ೨೭ , ೨೦೦೦:** ಇಂದು ನಾವು ಲಾರ್ಡ್ ಸೆಬನ್ನ ನೀಡಿದೆವು. ಸ್ವಾಮಿ ಒಂದು ತುಂಡು ತಿಂದು ಮತ್ತೊಂದು ತುಂಡು ನನ್ನ ಬಾಯಿಯಲ್ಲಿ ಕಾಣಿಸಗೊಂಡಿತ್ತು. ಸಂಜೆ ನಾವು ದೇವರಿಗೆ ಬಾಳೆ ಹಣ್ಣು ನೀಡಿದೆವು. ಬಾಳೆ ಮೂರನೇ ಒಂದು ಭಾಗ ಮಾಂತ್ರಿಕವಾಗಿ ನನ್ನ ಗಂಟಲಿನಿಂದ ಹೊರಬಂತು. ಆ ಬಾಳೆ ಹಿಸುಕಿದಂತಿರಲಿಲ್ಲ ನನ್ನ ಪತಿ ಮತ್ತು ಮಗಳು ತಮ್ಮ ಕಣ್ಣುಗಳನ್ನು ನಂಬಲಾಗಲಿಲ್ಲ ಈ ಪವಾಡ ನೋಡಿ ಆಶ್ಚರ್ಯವಾಯಿತು. ಆ ಸಮಯದಲ್ಲಿ ನಾನು ಬಹಳಷ್ಟು ನೋವು ಅನುಭವಿಸಿದೆ ನನ್ನ ಗಂಟಲಿನಲ್ಲಿ. ನಂತರ ನಾವು ಪೂಜಾ ಕೊಠದಿಗೆ ಹೋದಾಗ ಆ ಮೂರನೆಯ ಬಾಳೆ ಯ ಭಾಗ ಮಾಯವಾಗಿತ್ತು.. ಹಾಗೆಯೇ, ಬಾಳೆಹಣ್ಣಿನ ಚಿಕ್ಕ ತುಂಡಿನ ಮೇಲೆ ಒಂದು ಸಣ್ಣ ಜೇನಿನ ಹನಿ ಇತ್ತು. ಇನ್ನೂ ಸ್ವಾಮಿಯ ವಿಗ್ರಹದಿಂದ ಜೇನು ತೊಟ್ಟಿಕ್ಕು ತಿತ್ತು. ಜೇನು ವಿಗ್ರಹದಿಂದ ತೊಟ್ಟಿಕ್ಕೂತಿರುವುದು ಇದು ೩ನೇ ವಾರವಾಗಿತ್ತು.

**ಅಕ್ಟೋಬರ್೧೦ ,೨೦೦೦:** ಈ ದಿನ ನಾವು ದೇವರಿಗೆ ಸೇಬನ್ನು ನೀಡಿದೆವು. ನಾನು ಅಡುಗೇಮನೆಯಲ್ಲಿ ಅಡುಗೆ ಮಾಡುತ್ತಿರುವಾಗ ಪೂಜಾ ಕೊಠಡಿಯಿಂದ ಒಂದು ಸುವಾಸನೆ ಬರತೊಡಗಿತ್ತು. ನಾನು ಚಕಿಟಳಾಗಿ ಕೊಠಡಿ ಪ್ರವೇಶಿಸಿದಾಗ ಅಲ್ಲಿ ವಂದು ಆಶ್ಚರ್ಯ ನನಗೆ ಕಾದಿತ್ತು ದೇವರು ನಾವು ನೀಡಿದ ಸೆಬನ್ನು ಸ್ವೀಕರಿಸಿರಲಿಲ್ಲ ಆದರೆ ಅದರ ಪಕ್ಕದಲ್ಲಿ ತಿರುಪತಿ ಲದ್ದು ವಿತ್ತು . ನಮ್ಮ ಜೀವನದಲ್ಲಿ ತಿರುಪತಿ ಲದ್ದು ಹಲವು ಬಾರಿ ತಿಂದಿದ್ದೀವಿ ಎಂದಿಗೂಇಂತಹ ಬಿಸಿ ಲದ್ದು ತಿಂದಿರಲಿಲ್ಲ. ನಮ್ಮ ಕೈ ಬೆರಳುಗಳಿಗೆ ತುಪ್ಪದ ಪಸೆ ಇತ್ತು . ಲದ್ದು ರುಚಿ ವರ್ಣಿಸಲು ಸಾದ್ಯವಿರಲಿಲ್ಲ.

ಈ ಪುಸ್ತಕದ ಸಂಯೋಜನೆ "ಶ್ರೀ ಬಾಲಾಜಿ ಪವಾಡಗಳು ಮತುಶ್ರೀ ವೆಂಕಟೇಶ್ವರವ್ರತ ನಿಯಮಗಳು" ಸುಲಭ ದಾಗಿರಲಿಲ್ಲ ನಾನು ಒಬ್ಬ ಗೃಹಿಣಿ ಹಾಗೂ ಸಾಮಾನ್ಯ ಮಹಿಳೆ. ಇದೆಲ್ಲ ನನ್ನ ದೇವರಾದ ಕಲಿಯುಗದ ಶ್ರೀ

ವೆಂಕಟೇಶ್ವರ ಸ್ವಾಮಿ ಮತ್ತು ಪದ್ಮಾವತಿ ದೇವಿಯ ಆಶೀರ್ವಾದದಿಂದ ಮಾತ್ರ ಸಾಧ್ಯವಾಯಿತು.ನನ್ನ ಪತಿ ಋಷಿಕೇಶ್ ನನಗೆ ಬಹಳಷ್ಟು ಪ್ರೋತ್ಸಾಹಿಸಿದರು ನನ್ನ ಮಗಳು ನೆಹಾ ಕೂಡ ನನಗೆ ಬೆಂಬಲ ನೀಡಿದಳು ನಾನು ಅವಳಿಗೂ ಧನ್ಯವಾದ ವ್ಯಕ್ತಪಡಿಸಲು ಬಯಸುತ್ತೇನೆ. ಈ ಪುಸ್ತಕದ ಬರಹಗಾರ ತಿಮ್ಮರಾಜು ವಿಶ್ವಪತಿ ರಾಮಕೃಷ್ಣ ಮೂರ್ತಿಗೆ ನಾನು ಕೃತಜ್ಞತೆ ಸೂಚಿಸಲು ಬಯಸುತ್ತೇನೆ. ಹಾಗೂ ಈ ಪುಸ್ತಕದ ಪ್ರಕಟಿಸಲು ನನಗೆ ನೆರವಾದ ಎಲ್ಲರಿಗೂ ನನ್ನ ಧನ್ಯವಾದಗಳು. ಈ ಪವಾಡಗಳ ಬಗ್ಗೆ ಭಕ್ತಿಯಿಂದ ಕೇಳಿದವರಿಗೆ ಹಾಗೂ ಈ ವ್ರತವನ್ನು ನಿರ್ವಹಿಸುವವರಿಗೆ ದೇವರ ಅನುಗ್ರಹ ಲಭಿಸುವುದು.

**ಲಲಿತಾ ಋಷಿಕೇಶ್**

# ಶ್ರೀ ವೆಂಕಟೇಶ್ವರ ಮಂತ್ರ

ಕಲಿಯುಗದ ದೇವರೆಂದೇ ಹೆಸರುವಾಸಿಯಾದ ಶ್ರೀ ವೆಂಕಟೇಶ್ವರನು ಸ್ವತಃ ನನಗೆ ವೇದಗಳಿಂದ ಆಯ್ದ ಮಂತ್ರಗಳನ್ನು ಉಪದೇಶಿಸಿದ್ದಾರೆ, ದೇವರಲ್ಲಿ ನಮಗೆ ನಿಜವಾದ ಭಕ್ತಿ ಉಂಟಾಗಲು ಇವು ಸಹಾಯಕಾರಿ.

**ಮುರಾರಿಸೇವಕ ಜರಾದಿಪೀಡಿತ ನಿರಾರ್ತಿಜೀವನ ನಿರಾಶ**

**ಭೂಸುರ ವರಾತಿಸುಂದರ ಸುರಾಂಗನಾರತಿ**

**ಕರಾಂಗಸೌಷ್ಠವ ಕುಮಾರತಾಕೃತಿ ಕುಮಾರತಾರಕ**

**ಸಮಾಪನೋದಯ ದನೂನಪಾತಕ ಮಹಾಪದಾಮಯ**

**ವಿಹಾಪನೋದಿತ ಸಕಲಭುವನ ವಿದಿತ ಕುಮಾರಧಾರಾಭಿಧಾನ ತೀರ್ಥಾಧಿಷ್ಠಿತಸ್ಯ,**

**ಧರಣಿತಲ ಗತಸಕಲ ಹತಕಲಿಲ ಶುಭಸಲಿಲ**

**ಗತಬಹುಳ ವಿವಿಧಮಲ ಹತಿಚತುರ ರುಚಿರತರ**

**ವಿಲೋಕನಮಾತ್ರ ವಿದಳಿತ ವಿವಿಧ ಮಹಾಪಾತಕ**

**ಸ್ವಾಮಿಪುಷ್ಕರಿಣೀ ಸಮೇತಸ್ಯ,**

ಪ್ರತಿ ದಿನ ಈ ಮಂತ್ರ ವಾಚನದಿಂದ ಭಕ್ತರು ಆರೋಗ್ಯಕರ ಹಾಗೂ ಶ್ರೀಮಂತ ಜೀವನಕ್ಕೆ ಕಾರಣವಾಗಬಹುದು.

**ಲಲಿತಾ ಋಷಿಕೇಶ್**

## ವ್ರತ ನೆರೆವೇರಿಸಲು ಬೇಕಾದ ಸಾಮಗ್ರಿಗಳು

೬ ತೆಂಗಿನಕಾಯಿ (ಕಲಶಗಳಿಗೆ ೧ ಮತ್ತು ಕಥೆಗಳಿಗೆ ೫), ವಸ್ತ್ರ ( ಹತ್ತಿಯಿಂದ ಮಾಡಿದ ಸರ), ಕಲಶ, ಹೊಸಕುಪ್ಪುಸ ತುಂಡು (೧ ಮೀಟರ್), ಅರಿಶಿನ ಪುಡಿ, ಕುಂಕುಮ, ಅಕ್ಷತೆ (ಅಕ್ಕಿ ಕಾಳುಗಳಿಗೆ ಅರಿಶಿನ ಮತ್ತು ತೈಲ ಮಿಶ್ರ) ,ಆಗರ್ಬತ್ತಿ, ಕರ್ಪೂರ (ಆರತಿ ಗಾಗಿ), ಪಾನ್ ಅಥವಾ ತಾಂಬೂಲ ಎಲೆಗಳು ಅಥವಾ ಮಾವು ಎಲೆಗಳನ್ನು (೩ ಅಥವಾ ೫ ಕಲಶಕ್ಕಾಗಿ ಮತ್ತು ೨.ವಿನಾಯಕ ಪೂಜೆಗಾಗಿ), ಪಂಚಾಮೃತ (ಹಸುವಿನ ಹಾಲು, ಮೊಸರು , ತುಪ್ಪ,ಜೇನು ಮತ್ತು ಸಕ್ಕರೆ ) ವಿನಾಯಕನ ನೈವೇದ್ಯಕ್ಕೆ (ಬೆಲ್ಲದ ಸಣ್ಣ ತುಂಡು) ಮತ್ತು ವ್ರತದ ನೈವೇದ್ಯಕ್ಕೆ (ಗೋಧಿ ರವೆ, ತುಪ್ಪ, ಪುಡಿ ಸಕ್ಕರೆ, ಬಾಳೆಹಣ್ಣು ಮತ್ತು ಯಾಲಕ್ಕಿ ಪುಡಿ)

## ವ್ರತದ ನೈವೇದ್ಯ ತಯಾರಿಸುವ ವಿಧಾನ

ಒಂದು ಬಾಣಲೆಯಲ್ಲಿ ಸ್ವಲ ತುಪ್ಪ ಹಾಕಿ, ಇದಕ್ಕೆ ಗೋಧಿ ರವೆ ಸೇರಿಸಿ ಮತ್ತುಸಣ್ಣ ಉರಿಯಲ್ಲಿ ಕೈಯಾಡಿಸುತ್ತ ಇರಿ, ಚನ್ನಾಗಿ ಕೆಂಪು ಬಣ್ಣ ಹಾಗೂ ಘಮ್ ಎಂದು ಪರಿಮಳ ಬರುವವರೆಗೂ ಕೈಯಾಡಿಸಿ. ತಣ್ಣಗಾದ ನಂತರ ಇದಕ್ಕೆ ಪುಡಿ ಸಕ್ಕರೆ,ಬಾಳೆ ಹಣ್ಣು ಸೇರಿಸಿ, ಬೇಕಾದರೆ ನೀವು ತೆಂಗಿನ ಕಾಯಿಯ ತುಂಡು ಕೊಡ ಸೇರಿಸಬಹುದು. ಎಲ್ಲಕ್ಕಿ ಪುಡಿ ಅಥವಾ ಯಾವುದೇ ಇತರ ಒಣ ಹಣ್ಣುಗಳು ಸೇರಿಸಬಹುದು ಒಳ್ಳೆಯ ರುಚಿ ನೀಡುತ್ತದೆ.

# ವ್ರತ ನಿಯಮಗಳು

**-ತಿಮ್ಮರಾಜು ವಿಶ್ವಪತಿ ರಾಮಕೃಷ್ಣ ಮೂರ್ತಿ**

ಈ ವ್ರತದ ಆಚರ್ಣೆಯ ಮೂಲಕ ಶ್ರೀ ವೆಂಕಟೇಶ್ವರ ಸ್ವಮಿಯ ಅನುಗ್ರಹ ಪಡೆಯುವುದು ಈ ಕಲಿಯುಗದಲ್ಲಿ ಬಹಳ ಸುಲಭ. ಎಲ್ಲಾ ತೊಂದರೆಗಳು ಈ ವ್ರತದ ಆಚರ್ಣೆಯ ಮೂಲಕ ದೂರವಾಗುವುದು. ಇದುನಿರ್ವಹಿಸುವುದು ತುಂಬಾ ಸುಲಭ ಈವ್ರತವನ್ನ ವೈಕುಂಠ ವಾಸಿಯಾದ ಶ್ರಿಮನ್ ನಾರಾಯಣ ಸ್ವತಃ ಆಶೀರ್ವದಿಸಿದ್ದಾರೆ.ಯಾರಾದರೂ ಯಾವುದೇ ಸಮಯದಲ್ಲಿ ಈ ವ್ರತವನ್ನ ಆಚರಿಸಬಹುದು. ಭಕ್ತರು ಈ ವ್ರತದ ಆಚರ್ನೆಯಿಂದ ಆರೋಗ್ಯ ಸಮಸ್ಯೆಗಳು, ಸಂಪತ್ತು ಸಮಸ್ಯೆಗಳು , ಕುಟುಂಬದ ಸಮಸ್ಯೆಗಳು ಇದೆಲ್ಲರಿಂದಲು ಸ್ವಾತಂತ್ರ್ಯ ಪಡೆಯಬಹುದಾಗಿದೆ ಅಥವಾ ಮನಸ್ಸಿನ ಶಾಂತಿ ಪಡೆಯಬಹುದಾಗಿದೆ. ನಿಮ್ಮ ಜೀವನದ ಎಲ್ಲಾ ಅಡೆತಡೆಗಳನ್ನು ತಗೆದುಹಾಕುತ್ತದೆ. ಈ ವ್ರತವನ್ನು ಶುಭ ದಿನದಂದು ಮಾಡಬಹುದುಭಕ್ತದಿಗಳು ತಮ್ಮ ಕೆಲಸ ಅಥವಾ ವ್ಯವಹಾರ ಒಳ್ಳೆಯ ಫಲಿತಾಂಶಗಳನ್ನು ಈ ವ್ರತದ ಆಚರ್ಣೆಯಿಂದ ಪಡೆಯಬಹುದಾಗಿದೆಈ ವ್ರತವು ೨ ರೀತಿಯಲ್ಲಿ ಕೆಳಗೆ ಸೂಚಿಸಿದಂತೆ ನಿರ್ವಹಿಸಬಹುದಾಗಿದೆ.

### ಮೊದಲ ಪ್ರಕ್ರಿಯೆ:

ಮೇಲೆ ಹೇಳಿದಂತೆ, ಈ ವ್ರತವನ್ನು ಯಾವುದೇ ಸಮಯದಲ್ಲಿ ತಮ್ಮಅನುಕೂಲಕ್ಕೆ ತಕ್ಕಂತೆ ಮಾಡಬಹುದಾಗಿದೆ. ಈ ವ್ರತದ ಗರಿಷ್ಠ ಫಲಿತಾಂಶವನ್ನು ಪಡೆಯಲು ಇದನ್ನಮಾರ್ಗಶಿರ, ಮಾಘ ಮತ್ತು ಕಾರ್ತೀಕ ತಿಂಗಳಲ್ಲಿ ಅಥವಾ ಪೌರ್ನಮಿ ದಿನಗಳಲ್ಲಿ,ಪಂಚಮಿ, ಸಪ್ತಮಿ, ಏಕಾದಶಿ, ತಿಥಿಗಳಲ್ಲಿ ಶ್ರವಣ ಅಥವಾ ಸ್ವಾತಿ ತಾರೆಗಳ ದಿನಗಳಲ್ಲಿ ಮಾಡಬೇಕು.ಇದು ಬೆಳಿಗ್ಗೆಅಥವಾ ಸಂಜೆ ನಿರ್ವಹಿಸಬಹುದು. ಇದು ೫ ಕಥೆಗಳನ್ನ ಹೊಂದಿದೆ. ಮೊದಲನೆಯ ಅಧ್ಯಾಯವನ್ನು ಸ್ವಯಂ ಶ್ರೀ ವೆಂಕಟೇಶ್ವರ ಸ್ವಾಮೀಯ ಕೃಪೆಯಿಂದ ಬರೆಯಲಾಗಿದೆ ಉಳಿದ ನಾಲ್ಕು ಅಧ್ಯಾಯಗಳು ಮಹಾನ್ ತಪಸ್ವಿಗಳಾದ ವಿಶ್ವಾಮಿತ್ರ,ವಸಿಷ್ಟ,ಭಾರಧ್ವಜ ಹಾಗೂ ಅತ್ರಿ ಮುನಿಯವರು ಅಲಂಕರಿಸಲ್ಪಟ್ಟಿದೆ . ಈ ವ್ರತವನ್ನು ದೇವಾಲಯದಲ್ಲಿ ಅಥವಾ ಯಾವುದೇ ಪವಿತ್ರ ಸ್ಥಳದಲ್ಲಿ ಅಥವಾ ನಿಮ್ಮ ಮನೆಯಲ್ಲಿ ಅಥವಾ ನದಿಯ ತಟದ ಮೇಲೆ ಮಾಡಬಹುದು. ಸಂಬಂಧಿಕರು ಮತ್ತು ಸ್ನೇಹಿತರು.ಜೊತೆಗೊಂಡು ಈ ವ್ರತವನ್ನ ಆಚರಿಸಿದ್ದರೆ ಇನ್ನೂ ಉತ್ತಮ ಮೊದಲಿಗೆ,ಆಯ್ದ ಸ್ಥಳವನ್ನು ಸ್ವಚ್ಚಗೊಳಿಸಿ. ನಂತರ, ಒಂದು ಮಂಟಪ ವ್ಯವಸ್ಥೆ ಮಾಡಿ ಅಲ್ಲಿ ದೇವರ ಮೂರ್ತಿ ಅಥವಾ ಶ್ರೀ ಕಲ್ಯಾಣ ವೆಂಕಟೇಶ್ವರ ಚಿತ್ರ ಸ್ಥಾಪಿಸಿ. ಗರಿಷ್ಟ ಫಲಿತಾಂಶಕ್ಕೆ ಶ್ರೀದೇವಿ ಹಾಗೂ ಭೂದೇವಿ ಜೊತೆಗೊಂಡ ಶ್ರೀ ಕಲ್ಯಾಣ ವೆಂಕಟೇಶ್ವರ ಸ್ವಾಮಿ ಚಿತ್ರವನ್ನು ಸ್ಥಾಪಿಸಿ.ಈ ವ್ರತವನ್ನು ಶ್ರದ್ದೆ ಹಾಗೂ ಭಕ್ತಿ ಇಂದ ಮಾಡಿದಲ್ಲಿ ಆ ಪರಾತ್ಮನು ಸ್ವಯಂ ಪ್ರಸಾದವನ್ನ ಸ್ವೀಕರಿಸುವನು.ಪ್ರತಿ ಕಥೆಯ ಕೊನೆಯಲ್ಲಿ ಒಂದು ತೆಂಗಿನ ಕಾಯಿಯನ್ನು ಒಡೆಯಬೇಕು ಹಾಗೂ

ದೇವರಿಗೆ ಅರ್ಪಿಸಬೇಕು. ಮಹಾ ಪ್ರಸಾದವನ್ನು ಗೊಧಿ ರವೆ, ಸಕ್ಕರೆ ಹಾಗೂ ಬಾಳೆ ಹಣ್ಣಿನ ತುಂಡುಗಳಿಂದ ತಯಾರಿಸಬಹುದು,ಪ್ರತಿ ಕಥೆಯ ನಂತರ ಗೋವಿಂದ.ಗೋವಿಂದ.ಗೋವಿಂದ ಎಂದು ೩ ಭಾರಿ ಹೇಳಬೇಕು.ದೇವರಿಗೆ ತುಳಸಿ ಎಲೆಗಳು ಬಹಳ ಅಚ್ಚುಮೆಚ್ಚು . ಆದ್ದರಿಂದ ಉತ್ತಮ ಫಲಿತಾಂಶಕ್ಕೆ ದೇವರ ಪೊಜೆಗೆ ತುಳಸಿ ಎಲೆಗಳನ್ನು ಇಡಬೇಕುಈ ವೃತವನ್ನು ಆಚರಿಸಿದ ನಂತರ ಎಲ್ಲಾ ರೋಗಗಳು ನಾಶವಾಗಿ ಅಷ್ಟ ಐಶ್ವರ್ಯ ದೊರೆಯುವುದು. ವೃತದ ಕೊನೆಯಲ್ಲಿ ಮಹಾ ಪ್ರಸಾದ ದ ಜೊತೆ ತೆಂಗಿನ ಚೂರುಗಳು ಮಿಶ್ರಣ ಮಾಡಿ. ನಂತರ ಇತರರಿಗೆ ತಿನ್ನಲುಪ್ರಸಾದವನ್ನ ನೀಡಿದಲ್ಲಿ ಪುಣ್ಯ ಲಭಿಸುವುದು.ಆದಷ್ಟು ಈ ವೃತವನ್ನ ಕಲಷ ಸ್ಥಾಪನೆಯಿಂದ (ಕಲಷದಲ್ಲೀ ನೀರು ಅಥವಾ ಅಕ್ಕಿ ಇಡಬೇಕು ಹಾಗೂ ೫ ಮಾವಿನ ಎಲೆ ಅಥವಾ ೫ ತಾಂಬೂಲದ ಎಲೆ ಇಡಬೇಕು) ಹಾಗೂ ೫ ಕಥೆಗಳ ಪಠಣ ಹಾಗೂ ಮಂತ್ರಗಳ ಉವಾಚದಿಂದಮಾಡಬೇಕು.

### ಎರಡನೇ ವಿಧಾನ:

ಶ್ರಿಮನ್ ನಾರಾಯಣ ಸ್ವತಃ ನಮಗೆ ಇನ್ನೊಂದು ಮಾತು ಹೇಳಿದ್ದಾರೆ. ಈ ವೃತವನ್ನ ಯಾವುದೇ ಕಾರಣ ದಿಂದ ಅಥವಾ ತೊಂದರೆಯಿಂದ (ಮೊದಲ ವಿಧಾನ) ಮಾಡಲು ಸಾಧ್ಯವಾಗುದಿಲ್ಲವೋ ಆವಾಗ ಒಬ್ಬರೆ ಕುಳಿತು ಈ ವೃತವನ್ನು ಆಚರಿಸ ಬಹುದು . ನೀವು ಬಾಲಾಜಿ ಸ್ವಾಮಿಯ ಚಿತ್ರದ ಎದುರು ಕುಳಿತು ಮಾನಸಿನಲ್ಲೀ ವಿನಾಯಕನ ಅಥವಾ ವಿಘ್ನೇಶ್ವರನ ನೆನೆಸ್ಬೆಕು. ನಂತರ, (ಅಷ್ಟ ಧೀಕ್ ಪಾಲಕರಿಗೆ) ಹಾಗೂ ನವ ಗ್ರಹಗಳ ದೇವರಿಗೆ ನೆನೆಯ ಬೇಕುಇದಾದ ನಂತರ ಒಂದು ತಟ್ಟೆಯಲ್ಲಿ ತುಳಸಿ ಎಲೆಗಳನ್ನು , ತೆಂಗಿನಕಾಯಿ, ಹೂಹಣ್ಣುಗಳನ್ನ ಇಡಬೇಕು . ಒಂದನೇವೃತದ ಎಲ್ಲಾ ೫ ಕಥೆಗಳ ಪಠಣದ ನಂತರ ದೇವರಿಗೆ ಈ ತಟ್ಟೆಯನ್ನ (ಹರಿವಾಣ) ವನ್ನು ಅರ್ಪಿಸಬೇಕು ನಂತರ ಪ್ರಸಾದವನ್ನ ಸ್ವೀಕರಿಸ ಬೇಕು ಇದನ್ನ ಮಾಡುವುದರಿಂದ ನಿಮ್ಮ ಸಂಕಷ್ಟಗಳು ದೂರವಾಗುವುದು.

ದೇವರಿಗೆ ಎಲ್ಲರ ಕಷ್ಟಗಳು ತಿಳಿದಿರುತ್ತದೆ. ನಾವು ಈ ದಯಾ ಸಾಗಾರನಿಗೆ ನಮ್ಮ ಕಷ್ಟಗಳನ್ನು ದೂರ ಮಾಡಲು ಪ್ರಾರ್ಥನೆ ಮಾಡಬೇಕು. ಈ ವೃತದ ಆಚರ್ಣೆಯಿಂದ ನಮ್ಮ ಎಲ್ಲಾ ಆಸೆಗಳು ತಿರುವುದು .ಎಲ್ಲಾ ಬಾಳಿನ ಅಡೆತಡೆಗಳುಹಾಗೂ ಕಷ್ಟಗಳು ಕಣ್ಮರೆಯಾಗುವುವು ಹಾಗೂ ಭಕ್ತರಿಗೆ ಅಷ್ಟ ಸಿರಿ ದೊರೆಯುವುದು.

## !!ಸಮಸ್ತ ಸಂಮಂಗಲಾನಿ ಭವಂತು!!

## ಶ್ರೀ ಲಕ್ಷ್ಮಿ ಶ್ರೀನಿವಾಸ ಕಟಾಕ್ಷ ಸಿದ್ಧಿರಸ್ತು

## ಶ್ರೀ ವೆಂಕಟೇಶ್ವರ ವೃತ

### ಶ್ರೀ ಗಣಪತಿ ಧ್ಯಾನ

ವಕ್ರತುಂಡ ಮಹಾಕಾಯ ಕೋಟಿ ಸೂರ್ಯ ಸಮಪ್ರಭ|

ನಿರ್ವಿಘ್ನಂ ಕುರು ಮೇ ದೇವ ಸರ್ವ ಕಾರ್ಯೇಷು ಸರ್ವದ ||

ಶುಕ್ಲಾಂಬರದರಂ ವಿಷ್ಣುಂ ಶಶಿವರ್ಣಂ ಚತುರ್ಭುಜಂ|

ಪ್ರಸನ್ನ ವದನಂ ಧ್ಯಾಯೇತ್ ಸರ್ವ ವಿಘ್ನೋಪ ಶಾಂತಯೇ ||

ತದೇವ ಲಗ್ನಂ, ಸುದಿನಂ ತದೇವ ತಾರಾ ಬಲಂ ಚಂದ್ರ ಬಲಂ ತದೇವ |

ವಿದ್ಯಾಬಲಂ ದೈವಬಲಂ ತದೇವ ಲಕ್ಷ್ಮೀಪತೇ ತೇಂಘ್ರಿಯುಗಂ ಸ್ಮರಾಮಿ||

**ಆಚಮನಃ**

ಓಂ ಕೇಶವಾಯ ಸ್ವಾಹಾ| ಓಂ ನಾರಾಯಣಾಯ ಸ್ವಾಹಾ| ಓಂ ಮಾಧವಾಯ ಸ್ವಾಹಾ| ಓಂ ಗೋವಿಂದಾಯ ನಮಃ| ಓಂ ವಿಷ್ಣವೇ ನಮಃ| ಓಂ ಮಧುಸೂದನಾಯ ನಮಃ| ಓಂ ತ್ರಿವಿಕ್ರಮಾಯ ನಮಃ| ಓಂ ವಾಮನಾಯ ನಮಃ| ಓಂ ಶ್ರೀಧರಾಯ ನಮಃ| ಓಂ ಹೃಷೀಕೇಶಾಯ ನಮಃ| ಓಂ ಪದ್ಮನಾಭಾಯ ನಮಃ| ಓಂ ದಾಮೋದರಾಯ ನಮಃ| ಓಂ ಸಂಕರ್ಷಣಾಯ ನಮಃ| ಓಂ ವಾಸುದೇವಾಯ ನಮಃ| ಓಂ ಪ್ರದ್ಯುಮ್ನಾಯ ನಮಃ| ಓಂ ಅನಿರುದ್ಧಾಯ ನಮಃ| ಓಂ ಪುರುಷೋತ್ತಮಾಯ ನಮಃ| ಓಂ ಅಧೋಕ್ಷಜಾಯ ನಮಃ| ಓಂ ನಾರಸಿಂಹಾಯ ನಮಃ| ಓಂ ಅಚ್ಯುತಾಯ ನಮಃ| ಓಂ ಜನಾರ್ಧನಾಯ ನಮಃ| ಓಂ ಉಪೇಂದ್ರಾಯ ನಮಃ| ಓಂ ಹರಯೇ ನಮಃ| ಓಂ ಶ್ರೀಕೃಷ್ಣಾಯ ನಮಃ||

**ಭೂತೋಚ್ಚಾಟನ**

ಉತ್ತಿಷ್ಠಂತು |ಭೂತ ಪಿಶಾಚಾ |ಯೇ ತೇ ಭೂಮಿಭಾರಕಾಃ |ಯೇ ತೇಷಾ ಮವಿರೋಧೇನ |ಬ್ರಹ್ಮಕರ್ಮ ಸಮಾರಭೇ ||
(ಅಕ್ಷತೆಯನ್ನು ನಿಮ್ಮ ಹಿಂದೆ ಎಸೆದು ನಿಮ್ಮ ಬಲ ಕೈ ಬೆರಳಿನಿಂದ ನಿಮ್ಮ ಮೂಗಿನ ಬಲ ಬದಿಯನ್ನು ಒತ್ತಿ ಪ್ರಾಣಾಯಾಮ ಮಾಡಿರಿ)

**ಪ್ರಾಣಾಯಾಮಃ**

ಓಂ ಭೂಃ | ಓಂ ಭುವಃ | ಓಗ್ಮ್ ಸುವಃ | ಓಂ ಮಹಃ | ಓಂ ಜನಃ | ಓಂ ತಪಃ | ಓಗ್ಮ್ ಸತ್ಯಮ್ |

ಓಂ ತಥ್ಸ'ವಿತುರ್ವರೇ"ಣ್ಯಂ ಭರ್ಗೋ' ದೇವಸ್ಯ' ಧೀಮಹಿ |

ಧಿಯೋ ಯೋ ನಃ' ಪ್ರಚೋದಯಾ"ತ್ ||

ಓಮಾಪೋ ಜ್ಯೋತೀರ ಸೋಮೃತಂ ಬ್ರಹ್ಮ ಭೂ–ರ್ಭುವ–ಸ್ಸುವರೋಮ್ ||

ಮಮೋಪಾತ್ತ, ದುರಿತ ಕ್ಷಯದ್ವಾರಾ, ಶ್ರೀ ಪರಮೇಶ್ವರ ಮುದ್ದಿಸ್ಯ, ಶ್ರೀ ಪರಮೇಶ್ವರ ಪ್ರೀತ್ಯರ್ಥಂ, ಶುಭೇ, ಶೋಭನೇ, ಅಭ್ಯುದಯ ಮುಹೂರ್ತೇ, ಶ್ರೀ ಮಹಾವಿಷ್ಣೋ ರಾಜ್ಞಯಾ, ಪ್ರವರ್ತ ಮಾನಸ್ಯ, ಅದ್ಯ ಬ್ರಹ್ಮಣಃ, ದ್ವಿತೀಯ ಪರಾರ್ಥೇ, ಶ್ವೇತವರಾಹ ಕಲ್ಪೇ, ವೈವಶ್ವತ ಮನ್ವಂತರೇ, ಕಲಿಯುಗೇ, ಪ್ರಥಮ ಪಾದೇ, (ಭಾರತ ದೇಶಃ – ಜಂಬೂ ದ್ವೀಪೇ, ಭರತ ವರ್ಷೇ, ಭರತ ಖಂಡೇ, ಮೇರೋಃ ದಕ್ಷಿಣ/ಉತ್ತರ ದಿಗ್ಭಾಗೇ;ಶ್ರೀಶೈಲಸ್ಯ (ಹತ್ತಿರದ ನದಿಗಳ ಹೆಸರುಗಳನ್ನ ಹೇಳಿ) , ಪ್ರದೇಶಯ್, ಕೃಷ್ಣ, ಗೋದಾವರಿ ಮಧ್ಯಭಾಗೆ, ಶೋಭನ ಗೃಹೇ, ಸಮಸ್ತ ದೇವತಾ ಬ್ರಾಹ್ಮಣ, ಹರಿಹರ ಗುರುಚರಣ ಸನ್ನಿಥೌ, ಅಸ್ಮಿನ್, ವರ್ತಮಾನ, ವ್ಯಾವಹಾರಿಕ, ಚಾಂದ್ರಮಾನ, ...ಶ್ವಸ್ತಿಶ್ರೀ ಪ್ರಭವಾದಿ ನಾಮ ಸಂವತ್ಸರ ಮಧ್ಯ (ಈಗಿನ ದಿನಾಂಕ ,ದಿನ, ತಿಂಗಳು ಹಾಗೂ ವರ್ಷವನ್ನು ಹೇಳೀರಿ) ಸಂವತ್ಸರೇ,ಅಯನೇ,ಋತೇ,ಮಾಸೇ,ಪಕ್ಷೇ,ತಿಥೌ,ವಾಸರೇ,ಶುಭ ನಕ್ಷತ್ರ, ಶುಭ ಯೋಗ, ಶುಭ ಕರಣ, ಏವಂಗುಣ, ವಿಶೇಷಣ, ವಿಶಿಷ್ಟಾಯಾಂ, ಶುಭ ತಿಥೌ, ಶ್ರೀಮಾನ್ (ನಿಮ್ಮ ಹೆಸರು ಹೇಳಿ) ,ಗೋತ್ರಃ (ನಿಮ್ಮ ಗೋತ್ರ ಹೇಳಿ) ,ನಾಮಧೇಯಃ,ಧರ್ಮಪತ್ನೀ ಸಮೆತಸ್ಯ ಅಸ್ಮಾಕಮ್ ಸಹಾಕುಟುಂಬಾನಾಮ್, ಕ್ಷೇಮ, ಸ್ಥೈರ್ಯ, ಧೈರ್ಯ, ವಿಜಯ,

ಆಯುರ್–ಆರೋಗ್ಯ, ಐಶ್ವರ್ಯಾ–ಅಭಿವೃಧ್ಯಾರ್ಥಮ್, ಧರ್ಮಾರ್ಥ ಕಾಮಮೋಕ್ಷ ಚತುರ್ವಿಧ

ಪುರುಷಾರ್ಥ ಫಲ ಸಿದ್ಧಯಾರ್ಥಮ್ ಮಮೊಪಾತ್ತ ದೂರಿತಾಕ್ಷಯ ದ್ವಾರಾ ಶ್ರೀ ಪರಮೆಸ್ವರ

ಪ್ರೀತ್ಯರ್ಥಮ್ ಶ್ರೀ ಲಕ್ಷ್ಮಿ ಪದ್ಮಾವತಿ ಸಮೇತ ಶ್ರೀ ವೆಂಕಟೇಶ್ವರ ದೇವತಾ ಮುದ್ದೀಷ್ಯ

ಶ್ರೀ ವೆಂಕಟೇಶ್ವರ ವ್ರತಕಲ್ಪ ಕರಿಶ್ಯೆ ದ್ರವ್ಯೈಃ ಸಂಭವದ್ಭಿಹಿ ಪದಾರ್ಥೇಯ್ ಸಂಭವತಾ

ನಿಯಾಮೇಣ ಯಾವಚ್ಚಕ್ತಿ ಧ್ಯಾನಾ ವಾಹನಾಡಿ ಷೋಡಶೋಪಚಾರ ಪೂಜಾಮ್ ಕರಿಶ್ಯೆ. (ನೀರನ್ನ ಮುಟ್ಟಿ)

**ತದಂಗ ಕಲಶಾರಾಧನಂ ಕರಿಶ್ಯೈ**

(ಸ್ವಾಮಿಯ ಬಲ ಬದಿಗೆ ಕಲಷ ಇರಿಸಿ, ಅದರಲ್ಲಿ ಗಂಧ, ಕುಂಕುಮ, ಅಕ್ಷತೆಹಾಗೂ ಹೊವನ್ನು ಹಾಕಿ) ಈ ಕೆಳಗಿನ ಶ್ಲೊಕವನ್ನು ಓದಿ.)

**ಶ್ಲೋ||** ಕಲಶಸ್ಯ ಮುಖೇ ವಿಷ್ಣುಃ ಕಂಠೇ ರುದ್ರ ಸಮಾಶ್ರಿತಾಃ
ಮೂಲೇ ತತ್ರ ಸ್ಥಿತೋಬ್ರಹ್ಮಾ, ಮಧ್ಯೇ ಮಾತೃ ಗಣಾಃ ಸ್ಮೃತಾಃ||
ಕುಕ್ಷೌತುಸಾಗರಾಃ ಸರ್ವೇ, ಸಪ್ತ ದ್ವೀಪ ವಸುಂಧರಾ|
ಋಗ್ವೇದೋಥ ಯಜುರ್ವೇದ ಸಾಮವೇದೋಹ್ಯತರ್ವಣಃ||
ಅಂಗೈಶ್ಚ ಸಹಿತಾಸರ್ವೇ ಕಲಶಾಂತು ಸಮಾಶ್ರಿತಾಃ |
ಕಲಷೆ ಗಂಧ ಪುಷ್ಪಾಕ್ಷತಾಂ ನಿಕ್ಷಿಪ್ಯ, ಹಸ್ಥೇನಾಚ್ಛಾದ್ಯ,
ಆಪೋ ವಾ ಇದಮ್ ಸರ್ವಮ್ ವಿಸ್ವಾಭೂತಾನ್ಯಾಪಹಾ

ಪ್ರಾಣವಾ ಆಪಹಾ
ಸ್ನಮ್ರಾಡೂಪೋ ವಿರಾಡಾಪಾ
ಶ್ಯಾಪೊ ಯಜೂಂಶ್ಯಾಪ
ಅಪೋಭೂರ್ಭುವಸ್ಸುವ ರಾಪ ಓಂ

ಪಾಶವ ಆಪೊನ್ನ ಮಾಪೊಂೃತ ಮಾಪ
ಸ್ವರಾದಾಪಾಸ್ಚಂದಾಮ್ ಸ್ಯಾಪೊ ಜ್ಯೋತೀಮ್
ಸ್ನಾತ್ಯಮಾಪ ಸ್ನರ್ವಾ ದೇವತಾ

(ನೀರನ್ನು ತುಂಬಿಸಿ ಅದರಲ್ಲಿ ತುಳಸಿ ದಳಮುಳುಗಿಸಿ)

**ಶ್ಲೋ||** ಗಂಗೇ ಚ೧ ಯಮುನೇ! ಚೈವ ಗೋದಾವರೀ! ಸರಸ್ವತೀ!
ನರ್ಮದೇ! ಸಿಂಧು! ಕಾವೇರಿ ಜಲೇಸ್ಮಿನ್ ಸನ್ನಿಧಿಂ ಕುರು ||
ಕಾವೇರಿ ತುಂಗಭದ್ರಾ ಚ ಕೃಷ್ಣವೇಣೀ ಚ ಗೌತಮಿ
ಭಾಗೀರಥಿಚ ವಿಖ್ಯಾತಾ ಪಂಚಗಂಗಾ ಪ್ರಕೀರ್ತಿತಾಃ
ಕಲಶೊದಕೇನ ದೇವತ್ಮಾನಮ್ ಪೂಜದ್ರವ್ಯಾಣಿ ಚ ಸಂಪ್ರೋಕ್ಷ್ಯ ||

(ಕಲಶದಲ್ಲಿ ಒಂದು ಹೂವನ್ನು ಮುಳುಗಿಸಿ ದೇವರ ಚಿತ್ರ, ಪೂಜಾ ತಟ್ಟೆ ಮತ್ತು ನಿಮ್ಮ ಮೇಲೆ ನೀರು ಚಿಮುಕಿಸಿ)

## ಶ್ರೀ ಗಣಪತಿ ಪ್ರಾರ್ಥನಾ

ಶುಕ್ಲಾಂಬರಧರಂ ವಿಷ್ಣುಂ ಶಶಿ ವರ್ಣಂ ಚತುರ್ಭುಜಂ |
ಪ್ರಸನ್ನ ವದನಂ ಧ್ಯಾಯೇತ್ ಸರ್ವ ವಿಘ್ನೋಪಶಾಂತಯೇತ್ ||
ಆದೌನಿರ್ವಿಘ್ನೇನ ವೃತ ಪರಿಸಮಾಪ್ತ್ಯರ್ಥಮ್ಗಣಪತಿ ಪೂಜಾಮ್ ಕರಿಶ್ಯೆ ||

## ಅತಃ ಗಣಪತಿ ಪೂಜ

ಓಂ ಗಣಾನಾಮ್ ತ್ವಾಗಣಪತಿಂ ಹವಾಮಹೇ| ಕವೀಂ ಕವೀನಾಮುಪ ಮಸ್ಯ್ಯವಸ್ತವಂ |ಜ್ಯೇಷ್ಟರಾಜಂ ಬ್ರಹ್ಮ'ಣಾಂ ಬ್ರಹ್ಮಣಸ್ಪತ |ಅನಶ್ಶೃಣ್ವನ್ನೂತಿಭಿಃ ಸೀದ ಸಾದ'ನಮ್ ||ಶ್ರೀ ಮಹಾ ಗಣಾಧಿಪತಯೆ ನಮಃ – ಧ್ಯಾಯಾಮಿ, ಧ್ಯಾನಮ್ ಸಮರ್ಪಯಾಮಿ||

ಆವಾಹಯಾಮಿ, ರತ್ನಸಿಂಹಾಸನಮ್ ಸಮರ್ಪಯಾಮಿ, ಪಾದ್ಯೋಃಪಾದ್ಯಂ ಸಮರ್ಪಯಾಮಿಹಸ್ತೋಃ ಅರ್ಘ್ಯಾಮ್ ಸಮರ್ಪಯಾಮಿ, ಮುಖೆ ಆಚಮನಿಯಮ್ ಸಮರ್ಪಯಾಮಿ ||

ಆಪೋಹಿಷ್ಟಮಯೊಭುವಸ್ತಾನ್ ಊರ್ಜೇಧ್ಧಾತನ, ಮಹೆರಣಾಯ ಚಕ್ಷಸೆಯೋ ವತ್ ಶಿವತ ಮೊರಸಸ್ತಸ್ಯ ಭಾಜಯತೇಹನಹ ಉಷಥೀರಿನಮಾತರಹ, ತಾಸ್ಮಾರಮ್ ಗಮಾಮವೋ ಯಾಸ್ಯಾಕ್ಷಯಾಯ ಜಿಂಥವ, ಅಪೊಜನಯಧಚನಹ,

ಶ್ರೀ ಮಹಾ ಗಣಾಧಿಪತಯೆ ನಮಃ –ಶುಧ್ಧೋದಕ ಸ್ನಾನಂ ಸಮರ್ಪಯಾಮಿ
||ಸ್ನಾನಾಂತರಂ ಶುದ್ಧ ಅಚಮನಮ್ ಸಮರ್ಪಯಾಮಿ ||

ಅಭಿವಸ್ತ್ರಾಶು ವಾಸನಾನ್ಯರ್ ಶಾಭಿದೆನೂಸ್ಸು ದುಘಾಹ ಪೂಜಮಾನಾಹ |ಅಭಿಚಂದ್ರಾ ಭರ್ತಾ ವೇ ನೋ ಹಿರಣ್ಯಾಭ್ಯಾಶ್ವಾನ್ರುತಿನೋದೇವ ಸೋಮ ||
ಶ್ರೀ ಮಹಾ ಗಣಾಧಿಪತಯೆ ನಮಃ – ವಸ್ತ್ರಯುಗಮಮ್ಸಮರ್ಪಯಾಮಿ||

ಯಜ್ಞೋಪವೀತಂ ಪರಮಮ್ ಪವಿತ್ರಂ ಪ್ರಜಾಪತೆ ರ್ಯಾತ್ಸಾಹಾಜಂ ಪುರಸ್ತಾತ್ |ಆಯುಷ್ಯ ಮಗ್ರ್ಯಾಮ್ ಪ್ರತಿಮುಂಚ ಶುಭ್ರಾಂ ಯಜ್ಞೋಪವೀತಂ ಬಾಲಾಮಸ್ತು ತೇಜಹಾ ||
ಶ್ರೀ ಮಹಾ ಗಣಾಧಿಪತಯೆ ನಮಃ –ಯಜ್ಞೋಪವೀತಂ ಸಮರ್ಪಯಾಮಿ||

ಗಂಧದ್ವಾರಾಂ ದುರಾಧಾರ್ಷಾಮ್ ನಿತ್ಯಪುಷ್ಟಾಮ್ ಕರೀಷಿನೀಂ |ಎಸ್ವರೀಜ್ಜ್ ಸಾರ್ವಭೂತಾನಾಮ್ ತ ಮಿಹೋಪಾಹ್ವಾಯೆ ಶ್ರೀಯಂ ||
ಶ್ರೀ ಮಹಾ ಗಣಾಧಿಪತಯೆ ನಮಃ – ದಿವ್ಯ ಶ್ರೀ ಚಂದನಂ ಸಮರ್ಪಯಾಮಿ||

ಆಯಣಪ ದೇ ಪಾರಾಯಣಪ ದೂರ್ವಾ ರೋಹಂತೂ ಪುಷ್ಪಿನೀಹಿ |ಹರದಾಸ್ಚ ಪುಂಡರೀಕಾಣಿ ಸಮುದ್ರಾಸ್ಯ ಗೃಹಾ ಇಮೆ ||
ಶ್ರೀ ಮಹಾ ಗಣಾಧಿಪತಯೆ ನಮಃ – ದೂರ್ವಾಡಿ ನಾನವೀಧ ಪುಷ್ಪಾನಿ ಸಮರ್ಪಯಾಮಿ||

ಯಜ್ಞೋಪವೀತಂ ಪರಮಮ್ ಪವಿತ್ರಂ ಪ್ರಜಾಪತೆ ರ್ಯಾತ್ಸಾಮಾಜಂ ಪುರಸ್ತಾತ್ |ಆಯುಷ್ಯ ಮಗ್ರಯಮ್ ಪ್ರತಿಮುಂಚ ಶುಭ್ರಮ್ ಯಜ್ಞೋಪವೀತಂ ಬಲಮಸ್ತು ತೇಜಃ ||

ಶ್ರೀ ಮಹಾ ಗಣಾಧಿಪತಯೆ ನಮಃ –ಯಜ್ಞೋಪವೀತಂ ಸಮರ್ಪಯಾಮಿ ||

ಗಂಧದ್ವಾರಾಂ ದು'ರಾಧರ್ಷಾಂ ನಿತ್ಯಪು'ಷ್ಟಾಂ ಕರೀಷಿಣೀ"ಮ್ |
ಈಶ್ವರೀಗ್‍ಮ್' ಸರ್ವ'ಭೂತಾನಾಂ ತಾಮಿಹೋಪ'ಹ್ವಯೇ ಶ್ರಿಯಮ್ ||

ಶ್ರೀ ಮಹಾ ಗಣಾಧಿಪತಯೆ ನಮಃ – ದಿವ್ಯ ಶ್ರೀ ಚಂದನಂ ಸಮರ್ಪಯಾಮಿ ||

ಆಯನೇತೇ ಪರಾಯಣೇ ದೂರ್ವಾರೋಹಂತು ಪುಷ್ಪಿಣೀ |
ಹೃದಾಶ್ಚ ಪುಂಡರೀಕಾಣಿ ಸಮುದ್ರಸ್ಯ ಗೃಹಾ ಇಮೇ ||

ಶ್ರೀ ಮಹಾ ಗಣಾಧಿಪತಯೆ ನಮಃ – ದೂರ್ವಾದಿ ನಾನಾವಿಧ ಪುಷ್ಪಾಣಿಸಮರ್ಪಾಯಾಮಿ ||

**ಅತಃ ಶ್ರೀ ಷೊದಶನಾಮ ಪೂಜ**

೧. ಓಂ ಸುಮುಖಾಯ ನಮಃ
೨. ಓಂ ಏಕದಂತಾಯ ನಮಃ
೩. ಓಂ ಕಪಿಲಾಯ ನಮಃ
೪. ಓಂ ಗಜಕರ್ಣಾಯ ನಮಃ
೫. ಓಂ ಲಂಬೋಧರಾಯ ನಮಃ
೬. ಓಂ ವಿಕಟಾಯ ನಮಃ
೭. ಓಂ ವಿಘ್ನರಾಜಾಯ ನಮಃ
೮. ಓಂ ಗಣಾಧಿಪಾಯ ನಮಃ
೯. ಓಂ ಧೂಮಕೇತವೆ ನಮಃ
೧೦. ಓಂ ಗಣಾಧ್ಯಕ್ಷಾಯ ನಮಃ
೧೧. ಓಂ ಬಾಲಚಂದ್ರಾಯ ನಮಃ
೧೨. ಓಂ ಗಜಾನನಾಯ ನಮಃ
೧೩. ಓಂ ವಕ್ರತುಂಡಾಯ ನಮಃ
೧೪. ಓಂ ಸೂರ್ಪಕರ್ಣಾಯ ನಮಃ
೧೫. ಓಂ ಹೇರಮ್ಬಾಯ
೧೬. ಓಂ ಸ್ಕಂದಪೂರ್ವಜಾಯ ನಮಃ

ಓಂ ಸರ್ವಸಿದ್ಧಿ ಪ್ರದಾಯಕಾಯ ನಮಃ |
ಶ್ರೀ ಮಹಾ ಗಣಾಧಿಪತಯೆ ನಮಃ |

ನಾನಾವಿಧ ಪರಿಮಳ ಪುಷ್ಪಾಣಿ ಸಮರ್ಪಯಾಮಿ

ವನಸ್ಪತಿರಸೋದ್ಭೂತಃ ಗನ್ಧಾಢ್ಯಶ್ಚ ಮನೋಹರಃ |
ಆಘ್ರೇಯಃ ಸರ್ವದೇವಾನಾಂ ಧೂಪೋಽಯಂ ಪ್ರತಿಗೃಹ್ಯತಾಮ್||

ಶ್ರೀ ಮಹಾ ಗಣಾಧಿಪತಯೆ ನಮಃ – ಧೂಪಂ ಆಘ್ರಾಪಯಾಮಿ ||

ಸಾಜ್ಯಂ ತ್ರಿವರ್ತಿ ಸಂಯುಕ್ತಂ ವಹ್ನಿನಾ ಯೋಜಿತಂ ಪ್ರಿಯಂ|
ಗ್ರಹಾಣ ಮಂಗಳಂ ದೀಪಂ ತ್ರಿಲೋಕ್ಯ ತಿಮಿರಾಪಹ ||
ಭಕ್ತ್ಯಾ ದೀಪಂ ಪ್ರಯಚ್ಛಾಮಿ ದೇವಾಯ ಪರಮಾತ್ಮನೇ|
ತ್ರಾಹಿಮಾಮ್ ನರಕಾದ್ಘೋರಾತ್ ದಿವ್ಯಃ ಜ್ಯೋತಿ ನಮೋಸ್ತುತೆ ||
ಶ್ರೀ ಮಹಾ ಗಣಾಧಿಪತಯೆ ನಮಃ – ದೀಪಂ ಸಮರ್ಪಾಯಾಮಿಧೂಪದಿಪಾನನ್ತರಂ ಆಚಮಾನೀಯಂ ಸಮರ್ಪಾಯಾಮಿ

**ನೈವೇದ್ಯ**

ಒಂದು ತಟ್ಟೆಯಲ್ಲಿ ಒಂದು ಸಣ್ಣ ತುಂಡು ಬೆಳ್ಳವನ್ನು ಇಟ್ಟು ಸ್ವಲ್ಪ ನೀರು ಸುರಿಯಿರಿ. ಭೂರ್ಭುವಃ ಸ್ವಃ ತತ್ಸವಿತುರ್ವರೇಣ್ಯಂ ಭರ್ಗೋದೇವಸ್ಯ ಧೀಮಹಿ ಧಿಯೋ ಯೋ ನಃ ಪ್ರಚೋದಯಾತ್
ಸತ್ಯಂ **ತ್ವರ್ತೇನ** ಪರಿಷಿಂಚಾಮಿ (ರಾತ್ರಿವೇಳೆ ಪೂಜೆ ಮಾಡುತ್ತಿದ್ದರೆ -ಋತಂತ್ವ ಸತ್ಯೇನ ಪರಿಷಿಂಚಾಮಿ,ಎನ್ನಬೇಕು)

ಶ್ರೀ ಮಹಾ ಗಣಾಧಿಪತಯೆ ನಮಃ ಸಮರ್ಪಯಾಮಿ ನೈವೆದ್ಯಮ್ ಗುಡಪೊಹಾರ -||

ಅಮೃತಾಮಸ್ತು ಅಮೃತೋಪಸ್ತರಣಮಸಿ ||

'ಓಂ ಪ್ರಾಣಾಯ ಸ್ವಾಹಾ| ಓಂ ಅಪಾನಾಯ ಸ್ವಾಹಾ| ಓಂ ವ್ಯಾನಾಯ ಸ್ವಾಹಾ|ಓಂ ಉದಾನಾಯ ಸ್ವಾಹಾ| ಓಂ ಸಮಾನಾಯ ಸ್ವಾಹಾಮಧ್ಯೆ ಮಧ್ಯೆ ಪಾನೀಯಂ ಸಮರ್ಪಯಾಮಿ ||

ಅಮೃತಾಪಿಧಾನ ಮಸಿ ಉತ್ತರಾಪೋಷಣಂ ಸಮರ್ಪಯಾಮಿ|
ಹಸ್ತೌ ಪ್ರಕ್ಷಾಳಯಾಮಿ,ಶುದ್ಧಚಮನೀಯಂ ಸಮರ್ಪಯಾಮಿ|
ಪೂಗೀಫಲ್ಯೆ ಸ್ಸಕರ್ಪೂರಯ್ ರ್ನಾಗ್ವಲ್ಲೀದಲ್ಂಶ್ಯೈರ್ಯುತಂ |
ಮುಕ್ತಚೂರ್ಣ ಸಮಾಯುಕ್ತಮ್ ತಾಂಬೂಲಂ ಪ್ರತಿಗೃಹ್ಯತಾಮ್ ||

ಶ್ರೀ ಮಹಾ ಗಣಾಧಿಪತಯೆ ನಮಃ –ತಾಂಬೂಲಂ ಸಮರ್ಪಯಾಮಿ||

ಓಂ ಗಣಾನಾಂ ತ್ವಾ ಗಣಪತಿಗಂ ಹವಾಮಹೆಯ |ಕವೀಂ ಕವಿನಾಮುಪ ಮಶ್ರುವಸ್ತವಮ್ |ಜ್ಯೇಷ್ಟರಾಜಂ ಬ್ರಹ್ಮ'ಣಾಂ ಬ್ರಹ್ಮಣಸ್ಪತ |ಆ ನಃ'ಶೃಣ್ವನ್ನೂತಿಭಿ'ಸ್ಸೀದ ಸಾದ'ನಮ್ ||

ಶ್ರೀ ಮಹಾ ಗಣಾಧಿಪತಯೆ ನಮಃ – ಸುವರ್ಣಮಂತ್ರಪುಶ್ಪಂ ಸಮರ್ಪಾಯಾಮಿ ||

ಮಂತ್ರಹೀನಂ ಕ್ರಿಯಾಹೀನಂ ಭಕ್ತಿಹೀನಂ ಗಣಾಧಿಪ|
ಯತ್ಕೃತಂತು ಮಯಾದೇವ ಪರಿಪೂರ್ಣಂ ತದಸ್ತುತೇ||
ಯಜ್ಞೇನ ಯಜ್ಞಮಯ ಜಂತ ದೇವಾಃ ತಾನಿ ಧರ್ಮಾಣಿ ಪ್ರಥಮಾನ್ಯಾಸನ್ |
ತೇಹ ನಾಕಂ ಮಹಿಮಾನಸ್ಸಚಂತೆ ಯತ್ರ ಪೂರ್ವೇ ಸಾಧ್ಯಾಸ್ಸಂತಿ ದೇವಾಃ ||

## ಪುನರಾಚಣಂ

ಅನಯಾ ಧ್ಯಾನಾವಾಹಾನಾದಿ ಷೋಡಶೋಪಚಾರ ಪೂಜಯಾ ಚ ಭಗವಾನ್ ಸರ್ವಾತ್ಮಕಃ
ಶ್ರೀ ಮಹಾ ಗಣಾಧಿಪತಿ ಸ್ಸುಪ್ರೀತೋ ವರದೊ ಭೂತ್ವಾ ಉತ್ತರಾಯ್ ಕರ್ಮಣ್ಯ
ವಿಘ್ನಮಸ್ತ್ವಿತಿ ಭವಂತೋ ಬ್ರುವಂತು ಉತ್ತರೆ ಕರಮ್ಯ್ಯವಿಘ್ನಾಮಸ್ತು ಗಣಾಧಿಪತಿ ಪ್ರಸಾದಂ ಶಿರಸಾ
ಗೃಹ್ಣಮಿ ||

ಸಹಸ್ರಪರಮಾ ದೇವಿ ಶತಮೂಲಾ ಶತಾಂಕುರಾ |
ಸರ್ವಗ್ನಂ ಹಾರತು ಮೇ ಪಾಪಂ ದೂರ್ವಾದುಸ್ಸ್ವಪ್ನನಾಶನಿ |
ಗಣಪತಿ ಯದಾಸ್ಥಾನಮು ದ್ವಾಸಯಾಮಿ ||

## ಪ್ರಾಣ ಪ್ರತಿಷ್ಟ

ಓಂ ಅಸುನೀತೆ ಪುನಾರಾಸ್ಮಾಸು ಚಕ್ಷುಃ ಪುನಃ
ಪ್ರಾಣಮೀಹನೋದೇಹಿ ಭೋಗಂ ಜ್ಯೋಕ್‌ಪ್ಶ್ಯೆಮ
ಸೂರ್ಯಮುಕ್ಚರಂತ ಮನುಮತೆ ಮೃಡಯಾನ ಸ್ವಸ್ತಿ
ಅಮೃತಂ ವೈಪ್ರಾಣಾ ಅಮೃತಮಾಪಃ ಪ್ರಾಣಾನೆವ
ಯಾಧಾಸ್ಥಾನಾಮೂಪಾಹ್ವಯತೆ (ದೇವರ ಮೂರ್ತಿ ಅಥವಾ ಚಿತ್ರವನ್ನು ಮುಟ್ಟಿ)
ಶ್ರೀ ವೆಂಕಟೇಶ್ವರಸ್ವಾಮಿ ಆವಾಹಾಯಾಮಿ, ಸ್ಥಾಪಾಯಾಮಿ, ಪೂಜಯಾಮಿ ಸ್ಥಿರೋಭವ, ವರಧ್ಭವ
ಸ್ಸುಪ್ರಸನ್ನೋಭವ, ಸ್ಥಿರಾಸನಂ ಕುರು |

## ಧ್ಯಾನ

ಶಾಂತಾಕಾರಂ ಭುಜಗಶಯನಂ ಪದ್ಮನಾಭಂ ಸುರೇಶಂ
ವಿಶ್ವಾಕಾರಂ ಗಗನಸದೃಶಂ ಮೇಘವರ್ಣಂ ಶುಭಾಂಗಮ್ |
ಲಕ್ಷ್ಮೀಕಾಂತಂ ಕಮಲನಯನಂ ಯೋಗಿಹೃದ್ಧ್ಯಾನಗಮ್ಯಂ
ವಂದೇ ವಿಷ್ಣುಂ ಭವಭಯಹರಂ ಸರ್ವಲೋಕೈಕನಾಥಮ್ ||
ವಂದೇ ವಿಷ್ಣುಂ ಭವಭಯಹರಂ ಸರ್ವಲೋಕೈಕನಾಥಮ್ ||

ಶ್ರೀ ಲಕ್ಷ್ಮಿಪದ್ಮಾವತಿ ಸಮೇತ ಶ್ರೀವೆಂಕಟೇಶ್ವರ ಸ್ವಾಮಿನೆ ನಮಃ –
ಧ್ಯಾಯಾಮಿ, ಧ್ಯಾನಂ ಸಮರ್ಪಯಾಮಿ (ಒಂದು ಹೊವನ್ನ ಅಥವಾ ಒಂದು ಎಲೆ ದೇವರ ಚಿತ್ರ ಅಥವಾ
ಅವರ ಮೂರ್ತಿ ಎದುರು ಇಡಿ)

## ಆವಾಹನಂ

ಆವಾಹಯಾಮಿ ದೇವೇಶ ಸಿದ್ಧಗಂಧರ್ವ ಸೇವಿತ |
ಯದ್ರುಮಾಸ್ಯಮಿದಂ ಪುಣ್ಯಂ ಸರ್ವಪಾಪಹರೋಹಾರಃ ||
ಶ್ರೀ ಲಕ್ಷ್ಮಿಪದ್ಮಾವತಿ ಸಮೇತ ಶ್ರೀವೆಂಕಟೇಶ್ವರ ಸ್ವಾಮಿನೆಯ್ ನಮಃ – ಆವಾಹಯಾಮಿ
(ಒಂದು ಹೊವನ್ನ ಅಥವಾ ಒಂದು ಎಲೆ ದೇವರ ಚಿತ್ರ ಅಥವಾ ಅವರ ಮೂರ್ತಿ ಎದುರು ಇಡಿ)

## ಆಸನಮ್

ದೇವ ದೇವ ಜಗನ್ನಾಥ ಪ್ರಣುತ ಕ್ಲೇಶನಾಶನ | ರತ್ನಸಿಂಹಾಸನಮ್
ದಿವ್ಯಂ ಗೃಹಾಣ ಮಧುಸೂದನ || ಶ್ರೀ
ಲಕ್ಷ್ಮಿಪದ್ಮಾವತಿ ಸಮೇತ ಶ್ರೀ ವೆಂಕಟೇಶ್ವರ ಸ್ವಾಮಿನೆಯ್ ನಮಃ ರತ್ನಸಿಂಹಾಸನಮ್
ಸಮರ್ಪಯಾಮಿ (ಒಂದು ಹೊವನ್ನ ಅಥವಾ ಒಂದು ಎಲೆ ದೇವರ ಚಿತ್ರ ಅಥವಾ ಅವರ ಮೂರ್ತಿ ಎದುರು ಇಡಿ)

## ಪಾದ್ಯಮ್

ವಾಂಚಿತಂ ಕುರುಮೆದೇವ ದುಷ್ಕೃತಂ ಚ ವಿನಾಶಯ |
ಪಾದ್ಯಮ್ ಗ್ರುಹಣ ಭಗವಾನ್ ಮಾತುರುತ್ಸಂಗ ಸಂಸ್ಥಿತ ||
ಶ್ರೀ ಲಕ್ಷ್ಮಿಪದ್ಮಾವತಿ ಸಮೇತ ಶ್ರೀ ವೆಂಕಟೇಶ್ವರ ಸ್ವಾಮಿನೆಯ್ ನಮಃ –
ಪಾದಾಯೋ, ಪಾದ್ಯಮ್ ಸಮರ್ಪಯಾಮಿ (ಒಂದು ಚಮಚದಲ್ಲಿ ನೀರನ್ನ ತಗೆದುಕೊಂಡು ತಟ್ಟೆಯಲ್ಲಿ ಸುರಿಯಿರಿ)

## ಅಘ್ಯಾಮ್

ಕುರುಷ್ವ ಮೇ ದಯಾಸಿಂಧೋ ಸಂಸಾರಾರ್ತಿ ಭಯಾಪಹ |
ದಧಿಕ್ಷೀರ ಜಲೋಪೇತಂ ಗೃಹಾಣಾರ್ಘ್ಯಂ ನಮೋಸ್ತುತೇ ||
ಶ್ರೀ ಲಕ್ಷ್ಮಿಪದ್ಮಾವತಿ ಸಮೇತ ಶ್ರೀ ವೆಂಕಟೇಶ್ವರ ಸ್ವಾಮಿನೆಯ್ ನಮಃ
ಹಸ್ತಾಯೋರರ್ಘ್ಯಂ ಸಮರ್ಪಯಾಮಿ (ಒಂದು ಚಮಚದಲ್ಲಿ ನೀರನ್ನ ತಗೆದುಕೊಂಡು ತಟ್ಟೆಯಲ್ಲಿ ಸುರಿಯಿರಿ)

## ಆಚಮನಂ

ನಮ ಸ್ಸತ್ಯಾಯ ಶುದ್ಧಾಯ ನಿತ್ಯಾಯ ಜ್ಞಾನರೂಪಿಣೆ |
ಗ್ರಹಣಾಚಮನಂ ದೇವ ಸರ್ವಲೋಕೈಕ ನಾಯಕ ||
ಶ್ರೀ ಲಕ್ಷ್ಮಿಪದ್ಮಾವತಿ ಸಮೇತ ಶ್ರೀ ವೆಂಕಟೇಶ್ವರ ಸ್ವಾಮಿನೆಯ್ ನಮಃ –
ಮುಖೆಆಚಮಾನೀಯಂ ಸಮರ್ಪಯಾಮಿ (ಒಂದು ಚಮಚದಲ್ಲಿ ನೀರನ್ನ ತಗೆದುಕೊಂಡು ತಟ್ಟೆಯಲ್ಲಿ ಸುರಿಯಿರಿ)

## ಪಂಚಾಮೃತಸಾನಂ

ಪಂಚಾಮೃತಂ ಮಯಾನಿತಂ ಪಯೊದಧಿಘ್ರುಥಮ್ ಮಧು |
ಶರ್ಕಾರಾ ಸಾಹಿತಂ ಚೈವಾದೆವತ್ವಂ ಪ್ರತಿಗ್ೃಹ್ಯತಾಮ್ ||
ಶ್ರೀ ಲಕ್ಷ್ಮಿಪದ್ಮಾವತಿ ಸಮೇತ ಶ್ರೀ ವೆಂಕಟೇಶ್ವರ ಸ್ವಾಮಿನೆಯ್ ನಮಃ – ಪಂಚಾಮೃತ ಸ್ನಾನಂ

ಸಮರ್ಪಯಾಮಿ (ಪಂಚಾಮೃತ ಹಸು ಹಾಲು, ಮೊಸರು , ತುಪ್ಪ, ಜೇನು, ಸಕ್ಕರೆ ಮತ್ತು ನೀರಿಂದತಯಾರಿಸಲಾಗುತ್ತದೆ)

## ಸ್ನಾನಂ

ಸ್ವರ್ಣಪಾತ್ರೋದಕಮ್ ಗಂಗಾ ಯಮುನಾದಿ ಸಮನ್ವಿತಂ |
ಶುದ್ಧೋದಕಮ್ ಗೃಹಣ್ಯೈಶ ಸ್ನಾನಂ ಕುರು ಯಥಾವಿಧಿ ||
ಶ್ರೀ ಲಕ್ಷ್ಮಿಪದ್ಮಾವತಿ ಸಮೇತ ಶ್ರೀ ವೆಂಕಟೇಶ್ವರ ಸ್ವಾಮಿನೆಯ್ ನಮಃ
ಶುದ್ಧೋದಕಸ್ನಾನಂ ಸಮರ್ಪಯಾಮಿ (ಒಂದು ಚಮಚದಲ್ಲಿ ನೀರನ್ನ ತಗೆದುಕೊಂಡು ತಟ್ಟೆಯಲ್ಲಿ ಸುರಿಯಿರಿ)

## ವಸ್ತ್ರಂ

ತಪ್ತಕಾಂಚನ ಸಂಕಾಶಂ ಪೀತಾಂಬರ ಮಿದಂ ಹರೆ |
ಸುಗೃಹಾಣ ಜಗನ್ನಾಥ ಶ್ರೀನಿವಾಸ ನಮೋಸ್ತುತೆ ||
ಶ್ರೀ ಲಕ್ಷ್ಮಿಪದ್ಮಾವತಿ ಸಮೇತ ಶ್ರೀ ವೆಂಕಟೇಶ್ವರ ಸ್ವಾಮಿನೆಯ್ ನಮಃ ವಸ್ತ್ರಯುಗಮಂ ಸಮರ್ಪಯಾಮಿ

## ಯಜ್ಞೋಪವೀತಂ

ಯಜ್ಞೋಪವೀತಂ ಪರಮಂ ಪವಿತ್ರಂ ಪ್ರಜಾಪತೇಃ ಯತ್ಸಹಜಂ ಪುರಸ್ತಾತ್ |.
ಆಯುಷ್ಯಮಗ್ರ್ಯಂ ಪ್ರತಿಮುಂಚ ಶುಭ್ರಂ ಯಜ್ಞೋಪವೀತಂ ಬಲಮಸ್ತು ತೇಜಃ ||
ಶ್ರೀ ಲಕ್ಷ್ಮಿಪದ್ಮಾವತಿ ಸಮೇತ ಶ್ರೀ ವೆಂಕಟೇಶ್ವರ ಸ್ವಾಮಿನೆಯ್ ನಮಃ – ಯಜ್ಞೋಪವೀತಂಸಮರ್ಪಯಾಮಿ

## ಗಂಧಂ

ಚಂಧನ ಕಸ್ತೂರಿ ಘನ್ಸಾರ ಸಮನ್ವಿತಂ |
ಗಂಧಂ ಗೃಹಾಣ ಗೋವಿಂದ ನಾನಾಗಂಧಸ್ಚಧಾರಯ ||
ಶ್ರೀ ಲಕ್ಷ್ಮಿಪದ್ಮಾವತಿ ಸಮೇತ ಶ್ರೀ ವೆಂಕಟೇಶ್ವರ ಸ್ವಾಮಿನೆಯ್ ನಮಃ – ದಿವ್ಯ ಪರಿಮಳ ಗಂಧಂ ಸಮರ್ಪಯಾಮಿ ( ಚಂದನವನ್ನು ದೇವರಿಗೆ ಅರ್ಪಿಸಿ )

## ಅಕ್ಷತೆ

ಗೋವಿಂದಾ ಪರಮಾನಂದ ಹಾರಿದ್ರಾಸಾಹಿತಾಕ್ಷತಾನ್ |
ವಿಶ್ವೇಶ್ವರ ವಿಶಾಲಾಕ್ಷ ಗೃಹಾಣ ಪರಮೇಶ್ವರ ||
ಶ್ರೀ ಲಕ್ಷ್ಮಿಪದ್ಮಾವತಿ ಸಮೇತ ಶ್ರೀ ವೆಂಕಟೇಶ್ವರ ಸ್ವಾಮಿನೆಯ್ ನಮಃ
ಅಕ್ಷತಾಂ ಸಮರ್ಪಯಾಮಿ (ಅಕ್ಷತೆ ಕಾಳು ಹಾಕಿ, ಅರಿಶಿನ ಪುಡಿ ಮತ್ತು ಎಣ್ಣೆ ಬೆರೆಸಿದ ಅಕ್ಕಿ)

## ಪುಷ್ಪಮ್

ಸುಗಂಧಿನಿ ಸುಪುಷ್ಪಾಣಿ ಜಾಜೀಕುಂದಮುಖಾನೀಚ |
ಮಾಲತಿ ವಕುಲಾದೇವಿ ಪೂಜಾರ್ಥಮ್ ಪ್ರತಿಗ್ೃಹ್ಯಾತಂ ||
ಶ್ರೀ ಲಕ್ಷ್ಮಿಪದ್ಮಾವತಿ ಸಮೇತ ಶ್ರೀ ವೆಂಕಟೇಶ್ವರ ಸ್ವಾಮಿನೆಯ್ ನಮಃ ಪುಷ್ಪಮ್ ಸಮರ್ಪಯಾಮಿ
(ದೇವರಿಗೆ ಹೂವನ್ನು ಅರ್ಪಿಸಿ)

## ಆತಂಗ ಪೂಜೆ

ಓಂ ಶ್ರೀ ವೆಂಕಟೇಶ್ವರಾಯ ನಮಃ – ಪಾದೌ ಪೂಜಯಾಮಿ |ಓಂ ಶ್ರೀ ವೆಂಕಟಾಚಲಾಧೀಶಯ ನಮಃ – ಗುಲ್ಫೌ ಪೂಜಯಾಮಿ |ಓಂ ಶ್ರೀ ಪ್ರದಾಯಕಾಯ ನಮಃ – ಜಾನುನಿ ಪೂಜಯಾಮಿ |ಓಂ ಪದ್ಮಾವತಿ ಪತಯೆ ನಮಃ – ಜಂಘೌ ಪೂಜಯಾಮಿ |ಓಂ ಜ್ಞಾನಪ್ರದಾಯ ನಮಃ – ಊರೂ ಪೂಜಯಾಮಿ |ಓಂ ಶ್ರೀ ನಿವಾಸಾಯ ನಮಃ – ಕಟಿಂ ಪೂಜಯಾಮಿ |ಓಂ ಮಹಾಭಾಗಾಯ ನಮಃ – ನಾಭಿಂ ಪೂಜಯಾಮಿ |ಓಂ ನಿರ್ಮಲಾಯ ನಮಃ – ಉದರಂ ಪೂಜಯಾಮಿ |ಓಂ ವಿಶಾಲ ಹೃದಯಾಯ ನಮಃ – ಹೃದಯಂ ಪೂಜಯಾಮಿ |ಓಂ ಪರಿಶುದ್ಧಾತ್ಮನೆ – ಸ್ತನೌ ಪೂಜಯಾಮಿ |ಓಂ ಪುರುಷೋತ್ತಮಾಯ ನಮಃ – ಭುಜೌ ಪೂಜಯಾಮಿ |ಓಂ ಸ್ವರ್ಣಹಸ್ತಾಯ ನಮಃ – ಹಸ್ತೌ ಪೂಜಯಾಮಿ |ಓಂ ವರಪ್ರದಾಯ ನಮಃ – ಕಂಠಂ ಪೂಜಯಾಮಿ |ಓಂ ಲೋಕಾನಾಥಾಯ ನಮಃ – ಸ್ಕಂಡೌ ಪೂಜಯಾಮಿ |ಓಂ ಸರ್ವೇಶ್ವರಾಯ ನಮಃ– ಮುಖಂ ಪೂಜಯಾಮಿ |ಓಂ ರಸಜ್ಞಾಯ ನಮಃ – ನಾಸಿಕಾಮ್ ಪೂಜಯಾಮಿ |ಓಂ ಪುಣ್ಯಾಶ್ರವಣ ಕೀರ್ತನಾಯ ನಮಃ – ಶ್ರೋತರೆ ಪೂಜಯಾಮಿ |ಓಂ ಫುಲ್ಲಾಂಬುಜ ವಿಲೋಚನಾಯ ನಮಃ – ನೇತ್ರೆ ಪೂಜಯಾಮಿ |ಓಂ ವರ್ಚಸ್ವಿನೆ ನಮಃ – ಲಲಾಟಂ ಪೂಜಯಾಮಿ |ಓಂ ರಮ್ಯ ವಿಗ್ರಹಾಯ ನಮಃ – ಸರ್ವಾಣ್ಯಾಂಗಾಣಿ ಪೂಜಯಾಮಿ |

ಶ್ರೀ ಲಕ್ಷ್ಮಿಪದ್ಮಾವತಿ ಸಮೇತ ಶ್ರೀ ವೆಂಕಟೇಶ್ವರ ಸ್ವಾಮಿನೆಯ್ ನಮಃ ದಿವ್ಯಸುಂದರ ವಿಗ್ರಹಂ ಪೂಜಯಾಮಿ

# ಶ್ರೀ ವೆಂಕಟೇಶ್ವರ ಅಷ್ಟೋತ್ತರ ಶತನಾಮಾವಳಿ

| | |
|---|---|
| ಓಂ ಶ್ರೀ ವೆಂಕಟೇಶಾಯ ನಮಃ | ಓಂ ನಿತ್ಯ ಯೌವನರೂಪವತೇ ನಮಃ |
| ಓಂ ಶ್ರೀನಿವಾಸಾಯ ನಮಃ | ಓಂ ಚತುರ್ವೇದಾತ್ಮಕಾಯ ನಮಃ (೩೦) |
| ಓಂ ಲಕ್ಷ್ಮಿಪತಯೇ ನಮಃ | ಓಂ ವಿಷ್ಣವೇ ನಮಃ |
| ಓಂ ಅನಾನುಯಾಯ ನಮಃ | ಓಂ ಅಚ್ಯುತಾಯ ನಮಃ |
| ಓಂ ಅಮೃತಾಂಶನೇ ನಮಃ | ಓಂ ಪದ್ಮಿನೀಪ್ರಿಯಾಯ ನಮಃ |
| ಓಂ ಜಗದ್ವಂದ್ಯಾಯ ನಮಃ | ಓಂ ಧರಾಪತಯೇ ನಮಃ |
| ಓಂ ಗೋವಿಂದಾಯ ನಮಃ | ಓಂ ಸುರಪತಯೇ ನಮಃ |
| ಓಂ ಶಾಶ್ವತಾಯ ನಮಃ | ಓಂ ನಿರ್ಮಲಾಯ ನಮಃ |
| ಓಂ ಪ್ರಭವೇ ನಮಃ | ಓಂ ದೇವಪೂಜಿತಾಯ ನಮಃ |
| ಓಂ ಶೇಶಾದ್ರಿನಿಲಾಯಾಯ ನಮಃ (೧೦) | ಓಂ ಚತುರ್ಭುಜಾಯ ನಮಃ |
| ಓಂ ದೇವಾಯ ನಮಃ | ಓಂ ಚಕ್ರಧರಾಯ ನಮಃ |
| ಓಂ ಕೇಶವಾಯ ನಮಃ | ಓಂ ತ್ರಿಧಾಮ್ನೇ ನಮಃ (೪೦) |
| ಓಂ ಮಧುಸೂದನಾಯ ನಮಃ | ಓಂ ತ್ರಿಗುಣಾಶ್ರಯಾಯ ನಮಃ |
| ಓಂ ಅಮೃತಾಯ ನಮಃ | ಓಂ ನಿರ್ವಿಕಲ್ಪಾಯ ನಮಃ |
| ಓಂ ಮಾಧವಾಯ ನಮಃ | ಓಂ ನಿಷ್ಕಳಂಕಾಯ ನಮಃ |
| ಓಂ ಕೃಷ್ಣಾಯ ನಮಃ | ಓಂ ನಿರಾಂತಕಾಯ ನಮಃ |
| ಓಂ ಶ್ರೀಹರಯೇ ನಮಃ | ಓಂ ನಿರಂಜನಾಯ ನಮಃ |
| ಓಂ ಜ್ಞಾನಪಂಜರಾಯ ನಮಃ | ಓಂ ವಿರಾಭಾಸಾಯ ನಮಃ |
| ಓಂ ಶ್ರೀವತ್ಸ ವಕ್ಷಸೇ ನಮಃ | ಓಂ ನಿತ್ಯ ತೃಪ್ತಾಯ ನಮಃ |
| ಓಂ ಸರ್ವೇಶಾಯ ನಮಃ (೨೦) | ಓಂ ನಿರ್ಗುಣಾಯ ನಮಃ |
| ಓಂ ಗೋಪಾಲಾಯ ನಮಃ | ಓಂ ನಿರುಪ್ರದವಾಯನಮಃ |
| ಓಂ ಪುರುಷೋತ್ತಮಾಯ ನಮಃ | ಓಂ ಗದಾಧರಾಯ ನಮಃ (೫೦) |
| ಓಂ ಗೋಪೀಶ್ವರಾಯ ನಮಃ | ಓಂ ಶಾರ್ಙ್ಗಪಾಣಯೇ ನಮಃ |
| ಓಂ ಪರಂಜ್ಯೋತಿಷೇ ನಮಃ | ಓಂ ನಂದಕಿನೀ ನಮಃ |
| ಓಂ ವೈಕುಂಠ ಪತಯೇ ನಮಃ | ಓಂ ಶಂಖದಾರಕಾಯ ನಮಃ |
| ಓಂ ಅವ್ಯಯಾಯ ನಮಃ | ಓಂ ಅನೇಕಮೂರ್ತಯೇ ನಮಃ |
| ಓಂ ಸುಧಾತನವೇ ನಮಃ | ಓಂ ಅವ್ಯಕ್ತಾಯ ನಮಃ |
| ಓಂ ಯಾದ ವೇಂದ್ರಾಯ ನಮಃ | ಓಂ ಕಟಿಹಸ್ತಾಯ ನಮಃ |
| ಓಂ ವರಪ್ರದಾಯ ನಮಃ | ಓಂ ಶೌರಯೇ ನಮಃ |
| ಓಂ ಅನೇಕಾತ್ಮನೇ ನಮಃ | ಓಂ ಹಯಗ್ರೀವಾಯ ನಮಃ |
| ಓಂ ದೀನಬಂಧವೇ ನಮಃ | ಓಂ ಜನಾರ್ಧನಾಯ ನಮಃ |
| ಓಂ ಆರ್ತಲೋಕಾಭಯಪ್ರದಾಯ ನಮಃ (೬೦) | ಓಂ ಕನ್ಯಾಶ್ರಣತಾರೇಜ್ಯಾಯ ನಮಃ |
| ಓಂ ಆಕಾಶರಾಜವರದಾಯ ನಮಃ | ಓಂ ಪೀತಾಂಬರಧರಾಯ ನಮಃ |
| ಓಂ ಯೋಗಿಹೃತ್ಪದ್ಮಮಂದಿರಾಯ ನಮಃ | ಓಂ ಅನಘಾಯ ನಮಃ |
| ಓಂ ದಾಮೋದರಾಯ ನಮಃ | ಓಂ ವನಮಾಲಿನೇ ನಮಃ |
| ಓಂ ಜಗತ್ಪಾಲಾಯ ನಮಃ | ಓಂ ಪದ್ಮನಾಭಾಯ ನಮಃ |

| | |
|---|---|
| ಓಂ ಪಾಪಘ್ನಾಯ ನಮಃ<br>ಓಂ ಭಕ್ತವತ್ಸಲಾಯ ನಮಃ<br>ಓಂ ತ್ರಿವಿಕ್ರಮಾಯ ನಮಃ<br>ಓಂ ಶಿಂಶುಮಾರಾಯ ನಮಃ<br>ಓಂ ಜಟಾಮಕುಟ ಶೋಭಿತಾಯ ನಮಃ<br>ಓಂ ಶಂಖ ಮದ್ಯೋಲ್ಲ ಸನ್ಮಂಜು ಕಿಂಕಿಣ್ಯಾಢ್ಯ -<br>ಕಾರುಂಡಕಾಯ ನಮಃ (೭೦)<br>**ಓಂ ನೀಲಮೇಘಶ್ಯಾಮತನವೇ ನಮಃ**<br>ಓಂ ಬಿಲ್ವಪತ್ರಾರ್ಚನ ಪ್ರಿಯಾಯ ನಮಃ<br>ಓಂ ಜಗದ್ವ್ಯಾಪಿನೇ ನಮಃ<br>ಓಂ ಜಗತ್ಕರ್ತ್ರೇ ನಮಃ<br>ಓಂ ಜಗತ್ಸಾಕ್ಷಿಣೇ ನಮಃ<br>ಓಂ ಜಗತ್ಪತಯೇ ನಮಃ<br>ಓಂ ಚಿಂತಿತಾರ್ಥ ಪ್ರದಾಯ ನಮಃ<br>ಓಂ ಜಿಷ್ಣವೇ ನಮಃ<br>ಓಂ ದಾಶಾರ್ಹಾಯ ನಮಃ<br>ಓಂ ದಶರೂಪವತೇ ನಮಃ (೮೦)<br>ಓಂ ದೇವಕೀ ನಂದನಾಯ ನಮಃ | ಓಂ ಮೃಗಯಾಸಕ್ತ ಮಾನಸಾಯ ನಮಃ (೯೦)<br>ಓಂ ಅಶ್ವರೂಢಾಯ ನಮಃ<br>ಓಂ ಖಡ್ಗಧಾರಿಣೇ ನಮಃ<br>ಓಂ ಧನಾರ್ಜನ ಸಮುತ್ಸುಕಾಯ ನಮಃ<br>**ಓಂ ಘನಸಾರಲಸನ್ಮಧ್ಯಕಸ್ತೂರೀ ತಿಲಕೋಜ್ವಲಾಯ ನಮಃ**<br>ಓಂ ಸಚ್ಚಿತಾನಂದರೂಪಾಯ ನಮಃ<br>ಓಂ ಜಗನ್ಮಂಗಳ ದಾಯಕಾಯ ನಮಃ<br>ಓಂ ಯಜ್ಞ ರೂಪಾಯ ನಮಃ<br>ಓಂ ಯಜ್ಞಭೋಕ್ತ್ರೇ ನಮಃ<br>ಓಂ ಚಿನ್ಮಯಾಯ ನಮಃ<br>ಓಂ ಪರಮೇಶ್ವರಾಯ ನಮಃ (೧೦೦)<br>ಓಂ ಪರಮಾರ್ಥಪ್ರದಾಯಕಾಯ ನಮಃ<br>ಓಂ ಶಾಂತಾಯ ನಮಃ<br>ಓಂ ಶ್ರೀಮತೇ ನಮಃ<br>ಓಂ ದೋರ್ದಂಡ ವಿಕ್ರಮಾಯ ನಮಃ<br>ಓಂ ಪರಬ್ರಹ್ಮಣೇ ನಮಃ<br>ಓಂ ಶ್ರೀವಿಭವೇ ನಮಃ<br>ಓಂ ಜಗದೀಶ್ವರಾಯ ನಮಃ (೧೦೮) |

**|| ಇತಿ ಶ್ರೀ ವೆಂಕಟೇಶ್ವರ ಅಷ್ಟೋತ್ತರ ಶತಾನಾಮಾವಳಿಃ ||**

# ಶ್ರೀ ಮಹಾ ಲಕ್ಷ್ಮಿ ಅಷ್ಟೋತ್ತರ ಶತಾನಾಮಾವಳಿ

| | |
|---|---|
| ಓಂ ಪ್ರಕೃತ್ಯೈ ನಮಃ | ಓಂ ಕ್ರೋಧಸಂಭವಾಯೈ ನಮಃ |
| ಓಂ ವಿಕೃತ್ಯೈ ನಮಃ | ಓಂ ಅನುಗ್ರಹಪರಾಯೈ ನಮಃ (೩೦) |
| ಓಂ ವಿದ್ಯಾಯೈ ನಮಃ | ಓಂ ಬುದ್ಧಯೇ ನಮಃ |
| ಓಂ ಸರ್ವಭೂತಹಿತಪ್ರದಾಯೈ ನಮಃ | ಓಂ ಅನಘಾಯೈ ನಮಃ |
| ಓಂ ಶ್ರದ್ಧಾಯೈ ನಮಃ | ಓಂ ಹರಿವಲ್ಲಭಾಯೈ ನಮಃ |
| ಓಂ ವಿಭೂತ್ಯೈ ನಮಃ | ಓಂ ಅಶೋಕಾಯೈ ನಮಃ |
| ಓಂ ಸುರಭ್ಯೈ ನಮಃ | ಓಂ ಅಮೃತಾಯೈ ನಮಃ |
| ಓಂ ಪರಮಾತ್ಮಿಕಾಯೈ ನಮಃ | ಓಂ ದೀಪ್ತಾಯೈ ನಮಃ |
| ಓಂ ವಾಚೇ ನಮಃ | ಓಂ ಲೋಕಶೋಕ ವಿನಾಶಿನ್ಯೈ ನಮಃ |
| ಓಂ ಪದ್ಮಾಲಯಾಯೈ ನಮಃ (೧೦) | ಓಂ ಧರ್ಮನಿಲಯಾಯೈ ನಮಃ |
| ಓಂ ಪದ್ಮಾಯೈ ನಮಃ | ಓಂ ಕರುಣಾಯೈ ನಮಃ |
| ಓಂ ಶುಚ್ಯೈ ನಮಃ | ಓಂ ಲೋಕಮಾತ್ರೇ ನಮಃ (೪೦) |
| ಓಂ ಸ್ವಾಹಾಯೈ ನಮಃ | ಓಂ ಪದ್ಮಪ್ರಿಯಾಯೈ ನಮಃ |
| ಓಂ ಸ್ವಧಾಯೈ ನಮಃ | ಓಂ ಪದ್ಮಹಸ್ತಾಯೈ ನಮಃ |
| ಓಂ ಸುಧಾಯೈ ನಮಃ | ಓಂ ಪದ್ಮಾಕ್ಷ್ಯೈ ನಮಃ |
| ಓಂ ಧನ್ಯಾಯೈ ನಮಃ | ಓಂ ಪದ್ಮಸುಂದರ್ಯೈ ನಮಃ |
| ಓಂ ಹಿರಣ್ಮಯ್ಯೈ ನಮಃ | ಓಂ ಪದ್ಮೋದ್ಭವಾಯೈ ನಮಃ |
| ಓಂ ಲಕ್ಷ್ಮ್ಯೈ ನಮಃ | ಓಂ ಪದ್ಮಮುಖ್ಯೈ ನಮಃ |
| ಓಂ ನಿತ್ಯಪುಷ್ಟಾಯೈ ನಮಃ | ಓಂ ಪದ್ಮನಾಭಪ್ರಿಯಾಯೈ ನಮಃ |
| ಓಂ ವಿಭಾವರ್ಯೈ ನಮಃ (೨೦) | ಓಂ ರಮಾಯೈ ನಮಃ |
| ಓಂ ಅದಿತ್ಯೈ ನಮಃ | ಓಂ ಪದ್ಮಮಾಲಾಧರಾಯೈ ನಮಃ |
| ಓಂ ದಿತ್ಯೈ ನಮಃ | ಓಂ ದೇವ್ಯೈ ನಮಃ (೫೦) |
| ಓಂ ದೀಪ್ತಾಯೈ ನಮಃ | ಓಂ ಪದ್ಮಿನ್ಯೈ ನಮಃ |
| ಓಂ ವಸುಧಾಯೈ ನಮಃ | ಓಂ ಪದ್ಮಗಂಧಿನ್ಯೈ ನಮಃ |
| ಓಂ ವಸುಧಾರಿಣ್ಯೈ ನಮಃ | ಓಂ ಪುಣ್ಯಗಂಧಾಯೈ ನಮಃ |
| ಓಂ ಕಮಲಾಯೈ ನಮಃ | ಓಂ ಸುಪ್ರಸನ್ನಾಯೈ ನಮಃ |
| ಓಂ ಕಾಂತಾಯೈ ನಮಃ | ಓಂ ಪ್ರಸಾದಾಭಿಮುಖ್ಯೈ ನಮಃ |
| ಓಂ ಕಾಮಾಕ್ಷ್ಯೈ ನಮಃ | ಓಂ ಪ್ರಭಾಯೈ ನಮಃ |

| | |
|---|---|
| ಓಂ ಚಂದ್ರವದನಾಯೈ ನಮಃ | ಓಂ ಹರಿಣ್ಯೈ ನಮಃ |
| ಓಂ ಚಂದ್ರಾಯೈ ನಮಃ | ಓಂ ಹೇಮಮಾಲಿನ್ಯೈ ನಮಃ |
| ಓಂ ಚಂದ್ರಸಹೋದರ್ಯೈ ನಮಃ | ಓಂ ಧನಧಾನ್ಯ ಕರ್ಯೈ ನಮಃ |
| ಓಂ ಚತುರ್ಭುಜಾಯೈ ನಮಃ (೬೦) | ಓಂ ಸಿದ್ಧಯೇ ನಮಃ |
| ಓಂ ಚಂದ್ರರೂಪಾಯೈ ನಮಃ | ಓಂ ಸ್ತ್ರೈಣ ಸೌಮ್ಯಾಯೈ ನಮಃ |
| ಓಂ ಇಂದಿರಾಯೈ ನಮಃ | ಓಂ ಶುಭಪ್ರದಾಯೈ ನಮಃ |

| | |
|---|---|
| ಓಂ ಇಂದುಶೀತುಲಾಯೈ ನಮಃ | ಓಂ ನೃಪವೇಶ್ಮ ಗತಾನಂದಾಯೈ ನಮಃ |
| ಓಂ ಆHLAದಜನನ್ಯೈ ನಮಃ | ಓಂ ವರಲಕ್ಷ್ಮ್ಯೈ ನಮಃ (೯೦) |
| ಓಂ ಪುಷ್ಟ್ಯೈ ನಮಃ | ಓಂ ವಸುಪ್ರದಾಯೈ ನಮಃ |
| ಓಂ ಶಿವಾಯೈ ನಮಃ | ಓಂ ಶುಭಾಯೈ ನಮಃ |
| ಓಂ ಶಿವಕರ್ಯೈ ನಮಃ | ಓಂ ಹಿರಣ್ಯಪ್ರಾಕಾರಾಯೈ ನಮಃ |
| ಓಂ ಸತ್ಯೈ ನಮಃ | ಓಂ ಸಮುದ್ರ ತನಯಾಯೈ ನಮಃ |
| ಓಂ ವಿಮಲಾಯೈ ನಮಃ | ಓಂ ಜಯಾಯೈ ನಮಃ |
| ಓಂ ವಿಶ್ವಜನನ್ಯೈ ನಮಃ (೭೦) | ಓಂ ಮಂಗಳಾಯೈ ನಮಃ |
| ಓಂ ತುಷ್ಟ್ಯೈ ನಮಃ | ಓಂ ದೇವ್ಯೈ ನಮಃ |
| ಓಂ ದಾರಿದ್ರ್ಯ ನಾಶಿನ್ಯೈ ನಮಃ | ಓಂ ವಿಷ್ಣು ವಕ್ಷಃಸ್ಥಲ ಸ್ಥಿತಾಯೈ ನಮಃ |
| ಓಂ ಪ್ರೀತಿಪುಷ್ಕರಿಣ್ಯೈ ನಮಃ | ಓಂ ವಿಷ್ಣುಪತ್ನ್ಯೈ ನಮಃ |
| ಓಂ ಶಾಂತಾಯೈ ನಮಃ | ಓಂ ಪ್ರಸನ್ನಾಕ್ಷ್ಯೈ ನಮಃ (೧೦೦) |
| ಓಂ ಶುಕ್ಲಮಾಲ್ಯಾಂಬರಾಯೈ ನಮಃ | ಓಂ ನಾರಾಯಣ ಸಮಾಶ್ರಿತಾಯೈ ನಮಃ |
| ಓಂ ಶ್ರಿಯೈ ನಮಃ | ಓಂ ದಾರಿದ್ರ್ಯ ಧ್ವಂಸಿನ್ಯೈ ನಮಃ |
| ಓಂ ಭಾಸ್ಕರ್ಯೈ ನಮಃ | ಓಂ ಸರ್ವೋಪದ್ರವ ವಾರಿಣ್ಯೈ ನಮಃ |
| ಓಂ ಬಿಲ್ವನಿಲಯಾಯೈ ನಮಃ | ಓಂ ನವದುರ್ಗಾಯೈ ನಮಃ |
| ಓಂ ವರಾರೋಹಾಯೈ ನಮಃ | ಓಂ ಮಹಾಕಾಳ್ಯೈ ನಮಃ |
| ಓಂ ಯಶಸ್ವಿನ್ಯೈ ನಮಃ (೮೦) | ಓಂ ಬ್ರಹ್ಮ ವಿಷ್ಣು ಶಿವಾತ್ಮಿಕಾಯೈ ನಮಃ |
| ಓಂ ವಸುಂಧರಾಯೈ ನಮಃ | ಓಂ ತ್ರಿಕಾಲ ಜ್ಞಾನ ಸಂಪನ್ನಾಯೈ ನಮಃ |
| ಓಂ ಉದಾರಾಂಗಾಯೈ ನಮಃ | ಓಂ ಭುವನೇಶ್ವರ್ಯೈ ನಮಃ (೧೦೮) |

**|| ಇತಿ ಶ್ರೀ ಲಕ್ಷ್ಮಿ ಅಷ್ಟೋತ್ತರ ಶತಾನಾಮಾವಳಿಹಿ ||**

## ಶ್ರೀ ಪದ್ಮಾವತಿ ಅಷ್ಟೋತ್ತರ ಶತನಮಾವಳಿ

| | |
|---|---|
| ಓಂ ಪದ್ಮಾವತ್ಯೈ ನಮಃ | ಓಂ ದಯಾಮೃಥಾಯಾಯೈ ನಮಃ |
| ಓಂ ದೇವಿಯೈ ನಮಃ | ಓಂ ಪ್ರಜ್ಞಾಜ್ಞ್ಯೈ ನಮಃ |
| ಓಂ ಪದ್ಮೋಧ್ಭವೈ ನಮಃ | ಓಂ ಮಹಧರ್ಮಾರ್ಯೈನಮಃ |
| ಓಂ ಕರುಣಪ್ರದಾಯೀಣ್ಯ ನಮಃ | ಓಂ ಧರ್ಮರೂಪಿಣ್ಯೈನಮಃ |
| ಓಂ ಸಹೃದಯಾಯ ನಮಃ | ಓಂ ಅಲಂಕಾರ ಪ್ರಿಯಾಯೈನಮಃ |
| ಓಂ ತೇಜಸ್ವರೂಪಿಣ್ಯ ನಮಃ | ಓಂ ಸರ್ವದಾರಿದ್ರ್ಯಧ್ವಮಸಿನ್ಯೈ ನಮಃ |
| ಓಂ ಕಮಲಾಮುಖೈ ನಮಃ | ಓಂ ಶ್ರೀವೆಂಕಟೇಶವಕ್ಷಸ್ಥಳಸ್ಥಿತಿತಾಯೈ ನಮಃ |
| ಓಂ ಪದ್ಮಧರಾಯ ನಮಃ | ಓಂ ಲೋಕಶೋಕಾವಿನಾಶಿಣ್ಯನಮಃ |
| ಓಂ ಶ್ರೀಯೈ ನಮಃ | ಓಂ ದೇವಿಯೈ ನಮಃ |
| ಓಂ ಪದ್ಮನೆತ್ರ್ಯೈ ನಮಃ (೧೦) | ಓಂ ತಿರುಚಾನೂರುಪುರಾವಾಸಿನ್ಯ ನಮಃ (೨೦ ) |
| ಓಂ ಪದ್ಮಕರಾಯ ನಮಃ | ಓಂ ವೈಶ್ಣವೈ ನಮಃ |
| ಓಂ ಸುಗುನಾಯ್ಯೈ ನಮಃ | ಓಂ ವಿಷ್ಣೂಪಾದ ಸೇವಿತಾಯೈ ನಮಃ |
| ಓಂ ಕುಂಕುಂಮಪ್ರಿಯಾಯ್ಯೈನಮಃ | ಓಂ ರತ್ನಪ್ರಕಾಶಕೀರೀತಾಧಾರಿಣ್ಯ ನಮಃ |

| | |
|---|---|
| ಓಂ ಹೇಮವರ್ಣಾಯೈ ನಮಃ | ಓಂ ಜಗನ್ಮೋಹಿಂಯೈ ನಮಃ |
| ಓಂ ಚಂದ್ರವಂದಿತಾಯೈ ನಮಃ | ಓಂ ಶಕ್ತಿಸ್ವರೂಪಿಣ್ಯ ನಮಃ |
| ಓಂ ಧಗಧಾಗಪ್ರಕಾಶ ಶರೀರ–ಧಾರಿಣ್ಯನಮಃ | ಓಂ ಪ್ರಸನ್ನೋದ್ಯಾಯ್ಯ ನಮಃ |
| ಓಂ ವಿಷ್ಣುಪ್ರಿಯಾಯೈ ನಮಃ | ಓಂ ಇಂದ್ರಾದಿದೈವತ ಯಕ್ಷಕಿನ್ನರ ಕಿಂಪುರುಷ ಪೂಜಿತಾಯೈ ನಮಃ |
| ಓಂ ನಿತ್ಯ ಕಲ್ಯಾಣ್ಯೈ ನಮಃ | ಓಂ ಸರ್ವಲೋಕನಿವಾಸಿನ್ಯ ನಮಃ |
| ಓಂ ಕೋಟಿಸೂರ್ಯಪ್ರಕಾಶಿಣ್ಯನಮಃ | ಓಂ ಭೊಜಾಯೈ ನಮಃ |
| ಓಂ ಮಹಾಸೌಂದರ್ಯರೂಪಿಣ್ಯ ನಮಃ(೨೦) | ಓಂ ಐಶ್ವರ್ಯಪ್ರದಾಯಿನ್ಯೈ ನಮಃ (೫೦) |
| ಓಂ ಭಕ್ತವಾತ್ಸಲಾಯೈನಮಃ | ಓಂ ಶಾಂತಾಯೈ ನಮಃ |
| ಓಂಬ್ರಹ್ಮಾಂದವಾಸಿನ್ಯ ನಮಃ | ಓಂ ಉನ್ನತಾಸ್ಥಾನಸ್ಥಿತಾಯೈ ನಮಃ |
| ಓಂಸರ್ವಾವಾಂಚಫಲದಾಯೀಣ್ಯನಮಃ | ಓಂ ಮಂದಾರಕಾಮಿನ್ಯ ನಮಃ |
| ಓಂ ಧರ್ಮಸಂಕಲ್ಪೈ ನಮಃ | ಓಂ ಕಮಲಾಕಾರಾಯೈ ನಮಃ |
| ಓಂದಾಕ್ಷಿಣ್ಯಾಕಟಾಕ್ಷಿಣ್ಯ ನಮಃ | ಓಂ ವೇದಾಂತಜ್ಞಾನರೂಪಿನ್ಯೈ ನಮಃ |
| ಓಂ ಭಕ್ತಿಪ್ರದಾನ್ಯೈನಮಃ | ಓಂ ಸರ್ವಸಂಪತ್ತಿರೂಪಿಣ್ಯ ನಮಃ |
| ಓಂ ಗುಣತ್ರಯವಿವರ್ಜಿತಾಯೈನಮಃ | ಓಂ ಕೋಟಿಸೂರ್ಯಸಮಪ್ರಭಾಯೈ ನಮಃ |
| ಓಂಕಲಾಶೋಡಶಸಮ್ಯುತ್ತಾಯ ನಮಃ | ಓಂ ಪೂಜಾಫಲದಾಯೀಣ್ಯ ನಮಃ |
| ಓಂ ಸರ್ವಳೋಕಾನಾಂಜನನ್ಯೈನಮಃ | ಓಂ ಕಮಾಲಾಸನಾದಿ ಸರ್ವದೇವತಾಯೈ ನಮಃ |
| ಓಂ ಮುಕ್ತಿದಾಯೀಣ್ಯ ನಮಃ(೩೦) | ಓಂ ವೈಕುಂಠವಾಸಿನ್ಯ ನಮಃ (೬೦) |
| ಓಂ ಅಭಯದಾಯೀಣ್ಯ ನಮಃ | ಓಂ ಸರ್ವಲೋಕಮಾತ್ರೈ ನಮಃ |
| ಓಂ ದ್ರಾಕ್ಷಾಫಾಲಪಾಯಸಪ್ರಿಯಾಯೈ ನಮಃ | ಓಂ ಅಭಿಮತಾದಾಯೀಣ್ಯ ನಮಃ |
| ಓಂ ನೃತ್ಯಗೀತಪ್ರಿಯಾಯೈ ನಮಃ | ಓಂ ಲಲಿತಾವಧೂತ್ಯ ನಮಃ |
| ಓಂ ಕ್ಷೀರಸಾಗರೋಧ್ಭವಾಯೈ ನಮಃ | ಓಂ ಸಮಸ್ತಶಾಸ್ತ್ರ ವಿಶಾರದಾಯೈ |
| ಓಂ ಆಕಾಶಾರಾಜ ಪುತ್ರಿಕಾಯೈ ನಮಃ | ಓಂ ಸುವರ್ಣಭರಣಧಾರಿಣ್ಯ ನಮಃ |
| ಓಂ ಸುವರ್ಣಹಸ್ತಧಾರಿಣ್ಯ ನಮಃ | ಓಂ ಇಹಪರಲೋಕ ಸುಖಿಪ್ರದಾಯೀಣ್ಯ ನಮಃ |
| ಓಂ ಕಾಮರೂಪಿಣ್ಯ ನಮಃ | ಓಂ ಕರವಿರನಿವಾಸೀನ್ಯೈನಮಃ |
| ಓಂ ಕರುಣಾಕಟಾಕ್ಷಧಾರಿಣ್ಯ ನಮಃ | ಓಂ ನಾಗಲೋಕಮಣಿಸಂ ಆಕಾಶಸಿಂಧುಕಮಲೇಶ್ವರ ಪೂರಿತಾರಾಧಗಮಣಾಯೈ ನಮಃ |
| ಓಂ ಅಮೃತಾಸುಜಾಯೈನಮಃ | ಓಂ ಶ್ರೀ ಶ್ರೀನಿವಸಪ್ರಿಯಾಯೈ ನಮಃ |
| ಓಂ ಭೂಲೋಕಾಸ್ವರ್ಗಸುಖಿದಾಯೀಣ್ಯ ನಮಃ (೭೦) | ಓಂ ಚಂದ್ರಮಂಡಳಸ್ಥಿತಾಯೈ ನಮಃ (೧೦೦) |
| ಓಂ ಅಷ್ಟಾದಿಕ್ಪಾಲಕಾಧಿಪತ್ಯೈ ನಮ | ಓಂ ಅಳಿವೆಳು ಮಂಗಾಯೈ ನಮಃ |
| ಓಂ ಮನ್ಮಧ್ವರ್ಪ ಸಂಹಾರಿಣ್ಯ ನಮಃ | ಓಂ ದಿವ್ಯಮಂಗಳ ಧಾರಿಣ್ಯ ನಮಃ |
| ಓಂ ಕಮಲಾರ್ತಭಾಗಾಯೈ ನಮಃ | ಓಂ ಸುಕಲ್ಯಾಣಪೀಠಸ್ಥಿತಾಯೈ ನಮಃ |
| ಓಂ ಸ್ವಲ್ಪಾಪರಾಧಾಮಹಾಪರಾಧ–ಕ್ಷಮಾಯೈ ನಮಃ | ಓಂ ಕಾಮಕವನಾಪುಷ್ಪಾಪ್ರಿಯಾಯೈ ನಮಃ |
| ಓಂ ಶತ್ಕೋಟಿತೀರ್ಥವಾಸಿತಾಯೈ ನಮಃ | ಓಂ ಕೋಟಿ ಮನ್ಮಧರೂಪಿನ್ಯೈ ನಮಃ |
| ಓಂ ನಾರಾದಾದಿ ಮುನಿಶ್ರೇಷ್ಟ ಪೂಜಿತಾಯೈ ನಮಃ | ಓಂ ಭಾನುಮಂಧಲರೂಪಿಣ್ಯ ನಮಃ |
| ಓಂ ಆದಿಶಂಕರಪೂಜಿತಾಯೈ ನಮಃ | ಓಂ ಪದ್ಮಪಾದಾಯೈ ನಮಃ |

| | |
|---|---|
| ಓಂ ಪ್ರೀತಿದಾಯೀಣ್ಯೈ ನಮಃ | ಓಂ ರಾಮಾತ್ಮೈ ನಮಃ |
| ಓಂ ಸೌಭಾಗ್ಯಪ್ರದಾಯೀಣ್ಯೈ ನಮಃ | ಓಂ ಸರ್ವಲೋಕಸಭಾಂತರ ಧಾರಿಣ್ಯೈ ನಮಃ |
| ಓಂ ಮಹಾಕೀರ್ತಿ ಪ್ರದಾಯೀಣ್ಯೈ ನಮಃ (೮೦) | ಓಂ ಸರ್ವಮಾನಸವಾಸಿನ್ಯೈ ನಮಃ (೧೧೦) |
| ಓಂ ಕೃಷ್ಣಾತಿಪ್ರಿಯಾಯ ನಮಃ | ಓಂ ಸರ್ವಾಯ ನಮಃ |
| ಓಂ ಗಂಧರ್ವ ಶಾಪವಿಮೋಚಕಾತ್ಮೈ ನಮಃ | ಓಂ ವಿಶ್ವರೂಪಾತ್ಮೈ ನಮಃ |
| ಓಂ ಕೃಷ್ಣಪಥ್ನ್ಯೈ ನಮಃ | ಓಂ ದಿವ್ಯಜ್ಞಾನಾತ್ಮೈ ನಮಃ |
| ಓಂ ತ್ರೀಲೋಕಾಪೂಜಿತಾಯೈ ನಮಃ | ಓಂ ಸ್ವಾಮಂಗಳರೂಪಿಣ್ಯೈ ನಮಃ |
| ಓಂ ಜಗನ್ಮೋಹಿಂಯೈ ನಮಃ | ಓಂ ಸರ್ವಾಣುಗ್ರುಹಪ್ರದಾಯೀಣ್ಯೈ ನಮಃ |
| ಓಂ ಸುಲಭಾತ್ಮೈ ನಮಃ | ಓಂ ಓಂಕರಸ್ವರೂಪಿಣ್ಯೈ ನಮಃ |
| ಓಂ ಸುಶೀಲಾಯೈ ನಮಃ | ಓಂ ಬ್ರಹ್ಮಜ್ಞಾನಸಂಭೂತಾಯೈ ನಮಃ |
| ಓಂ ಆಂಜನಾಸುತನುಗ್ರುಹಪ್ರದಾಯೀಣ್ಯೈ ನಮಃ | ಓಂ ಶ್ರೀ ಪದ್ಮಾವತ್ಯೈ ನಮಃ |
| ಓಂ ಭಕ್ತತ್ಮನಿವಾಸಿನ್ಯೈ ನಮಃ | ಓಂ ಸದ್ಯೋವೇದವತ್ಯೈ ನಮಃ |
| ಓಂ ಸಂಧ್ಯಾವಂದಿನ್ಯೈ ನಮಃ (೯೦) | ಓಂ ಶ್ರೀಮಹಲಕ್ಶ್ಮ್ಯೈ ನಮಃ (೧೨೦) |

**|| ಇತಿ ಶ್ರೀ ಪದ್ಮಾವತಿ ಅಷ್ಟೋತ್ತರ ಶತನಮಾವಳಿ||**

## ಧೂಪ

**ದಶಾಂಗಮ್ ಗುಗ್ಗುಲೋಪಾಋಥಂ ಗೊಘ್ರುತೆನ ಸಮನ್ವಿತಂ |**
**ಧೂಪಂ ಗೃಹಾಣ ದೇವಾೕಶ ಸರ್ವಲೋಕ ನಮಸ್ಕಾರಾ ||**
**ಶ್ರೀ ಲಕ್ಷ್ಮಿ ಪದ್ಮಾವತಿ ಸಮೇತ ಶ್ರೀ ಶ್ರೀ ವೆಂಕಟೇಶ್ವರ ಸ್ವಾಮಿನೆಯ್ ನಮಃ –ಧೂಪಮಾಘರಾಪಾಯಾಮಿ**
(ಅಗರ್ಬತ್ತಿ ಅಥವಾ ಚಂದನದ ಬತ್ತಿ ಯನ್ನು ಕೈಯನ್ನು ಚಲಿಸುವ ಮೂಲಕ ಅರ್ಪಿಸಿ)

## ದೀಪಂ

**ತ್ರೀಲೋಕೇಶ ಮಹಾದೇವ ಸರ್ವಜ್ಞಾನ ಪ್ರದಾಯಕ |**
**ದೀಪಂ ದಾಸ್ಯಾಮಿ ದೇವಾೕಶ ರಕ್ಷಮಾಮ್ ಭಕ್ತವತ್ಸಾಲ ||**
**ಶ್ರೀ ಲಕ್ಷ್ಮಿ ಪದ್ಮಾವತಿ ಸಮೇತ ಶ್ರೀ ಶ್ರೀ ವೆಂಕಟೇಶ್ವರ ಸ್ವಾಮಿನೆಯ್ ನಮಃ– ದೀಪಂದರ್ಶಯಾಮಿ**
(ದೀಪವನ್ನು ದೇವರಿಗೆ ತೋರಿಸಿ)

## ನೈವೇಧ್ಯಮ್

**ಸರ್ವಭಕ್ಷಯ್ಯಶ್ಚ ಭೋಜ್ಯೈಸ್ಚ ರಸೈಸ್ತದ್ಭಿ ಸ್ಸಾಮನ್ವಿತಂ |**
**ನೈವೇದ್ಯಂತು ಮಾಯಾಣೀತಂ ಗೃಹಾಣ ಪುರುಷೋತ್ತಮ ||**
**ಶ್ರೀ ಲಕ್ಷ್ಮಿ ಪದ್ಮಾವತಿ ಸಮೇತ ಶ್ರೀ ಶ್ರೀ ವೆಂಕಟೇಶ್ವರ ಸ್ವಾಮಿನೆಯ್ ನಮಃ** – ನೈವೇಧ್ಯಾಮ್ಸಮರ್ಪಯಾಮಿ
(ದೇವರಿಗೆ ನೈವೇಧ್ಯ ವನ್ನು ನೀಡುವಾಗ ಇದನ್ನು ಹೇಳಿ ಬಾಳೆ ಹಣ್ಣು ನೀಡುವಾಗ "ಕದಲೀಫಳಮ್", ತೆಂಗಿನಕಾಯಿ ಯಾದರೆ "ನಾರಿಕಯ್ಳ ಫಲಮ್ ನಿವೇದಯಾಮಿ" ,ಅನ್ನಬೇಕು, ಬೆಳ್ಳ ಅರ್ಪಿಸುತಿದ್ದಾರೆ "ಗೂದೊಪಹಾರ ನೈವೇಧ್ಯಾಮ್ ಸಮರ್ಪಯಾಮಿ" )

ಓಂ ಪ್ರಾಣಾಯ ಸ್ವಾಹಾ, ಓಂ ಅಪಾನಾಯ ಸ್ವಾಹಾ, ಓಂ ವ್ಯಾನಾಯ ಸ್ವಾಹಾ, ಓಂ ಉದಾನಾಯ ಸ್ವಾಹಾ, ಓಂ ಸಮಾನಾಯ ಸ್ವಾಹಾ, ಓಂ ಪರಬ್ರಹ್ಮಣೆ ಸ್ವಾಹಾ, (ಚಮಚೆಯಲ್ಲಿ ನೀರನ್ನು ತೆಗೆದು ಕೊಂಡು ತಟ್ಟೆಯಲ್ಲಿ ನೀರನ್ನು ಬಿಡಿ) ಭೂರ್ಭುವಃ ಸ್ವಃ ತತ್ಸವಿತುರ್ವರೇಣ್ಯಂ ಭರ್ಗೋದೇವಸ್ಯ ಧೀಮಹಿ ಧಿಯೋ ಯೋ ನಃ ಪ್ರಚೋದಯಾತ್ ॥,

ಒಮಾಪೋ ಜ್ಯೋತೀರಾಪೋ ಮೃತಂ ಬ್ರಹ್ಮ ಭೂರ್ಭುವಸ್ಸುವರೋಮ್ ಮಧ್ಯೆ ಮಧ್ಯೆ ಪಾನೀಯಂ ಸಮರ್ಪಾಯಾಮಿ (ಚಮಚೆಯಲ್ಲಿ ನೀರನ್ನು ತೆಗೆದು ಕೊಂಡು ತಟ್ಟೆಯಲ್ಲಿ ನೀರನ್ನು ಬಿಡಿ)
ಅಮೃತಾಪಿಥಾನಮಸಿ, ಉತ್ತರಾಪೋಷಣಂ ಸಮರ್ಪಯಾಮಿ, ಹಸ್ತೌ ಪ್ರಕ್ಷಾಲಯಾಮಿ, ಪಾಡೌ ಪ್ರಕ್ಷಾಲಯಾಮಿ, ಪುನರಾಚಮಾನೀಯಂ ಸಮರ್ಪಯಾಮಿ .

## ತಾಂಬೂಲಂ

**ಪೂಗೀಫಲ್ಯ ಸ್ಸಾಕರ್ಪೋರ್ಯ ರ್ನಾಗವಲ್ಲಿ ದಲ್ಯರ್ಯುತಂ |**
**ಮುಕ್ತಾಚೂರ್ಣ ಸಮಾಯುಕ್ತಮ್ ತಾಂಬೂಲಂ ಪ್ರತಿಗ್ಽೃಹ್ಯಾತಾಮ್ ||**

ಶ್ರೀ ಲಕ್ಷ್ಮಿ ಪದ್ಮಾವತಿ ಸಮೇತ ಶ್ರೀ ಶ್ರೀ ವೆಂಕಟೇಶ್ವರ ಸ್ವಾಮಿನೆಯ್ ನಮಃ – ತಾಂಬೂಲಂಸಮರ್ಪಯಾಮಿ.

## ನೀರಾಜನಮ್

**ಶ್ರೀಯಃ ಕಾಂತಾಯ ಕಲ್ಯಾಣ ನಿಧಾಯೇ ನಿಧಾಯೆರ್ಥಿನಾಂ |**
**ಶ್ರೀ ವೆಂಕಟ ನಿವಾಸಾಯ ಶ್ರೀನಿವಾಸಾಯ ಮಂಗಳಂ ||**

ಶ್ರೀ ಲಕ್ಷ್ಮಿ ಪದ್ಮಾವತಿ ಸಮೇತ ಶ್ರೀವೆಂಕಟೇಶ್ವರ ಸ್ವಾಮಿನೆಯ್ ನಮಃ – ನೀರಾಜನಮ್ದರ್ಶಯಾಮಿ
(ಈ ಮೇಲಿನ ಮಂತ್ರವನ್ನು ಹೇಳಿ ಚಮಚಿಯಲ್ಲಿ ನೀರನ್ನು ತೆಗೆದು ಕೊಂಡು ತಟ್ಟೆಯಲ್ಲಿ ನೀರನ್ನು ಬಿಡಿ, "ಪುನರಾಚಮಾನೀಯಂ ಸಮರ್ಪಯಾಮಿ" ಎನ್ನಬೇಕು)

## ಮಂತ್ರಪುಷ್ಪಮ್

ಓಂ ಸಹಸ್ರ ಶೀರ್ಷಂ ದೇವಂ ವಿಶ್ವಾಕ್ಷಂ ವಿಶ್ವಶಂಭುವಮ್|
ವಿಶ್ವಂ ನಾರಾಯನಂದಾೀವಂ ಅಕ್ಷರಮ್ ಪರಮಂ ಪದಂ || ೧
ವಿಶ್ವತಃ ಪರಮಾ ನ್ನಿತ್ಯಂ ವಿಶ್ವಂ ನಾರಾಯಣಗುಂ ಹರೀಂ|
ವಿಶ್ವ ಮೆವೇದಂ ಪುರುಷಾಸ್ತದ್ವಿಶ್ವ ಮುಪಜೀವತಿ || ೨
ಪತಿಂ ವಿಶ್ವಸ್ಯಾತ್ಮೇಶ್ವರಗುಂ ಶಾಶ್ವತಗುಂ ಶಿವ ಮಚ್ಯುತಂ|
ನಾರಾಯಾಣಂ ಮಮಾಜ್ಞೆಯಂ ವಿಶ್ವಾತ್ಮಾನಮ್ ಪಾರಾಯಾಣಂ|| ೩
ನಾರಾಯಣ ಪರೊಜ್ಯೋತಿ ರಾತ್ಮಾ ನಾರಾಯಣಹ್ ಪರಹ |
ನಾರಾಯಣ ಪರಂ ಬ್ರಹ್ಮ ತತ್ವಂ ನಾರಾಯನಹ ಪರಹ|
ನಾರಾಯಣ ಪರೊ ಧ್ಯಾತಾ ಧ್ಯಾನಮ್ ನಾರಾಯನಹ ಪರಹ|| ೪
ಯಕ್ಕಾಚ್ಚ ಕಿಂಚಿ ಜ್ಜಗತ್ಸರ್ವಮ್ ದೃಶ್ಯತೆ ಶ್ರೂಯತೆಪಿ ವಾ |
ಅಂತರ್ಭಹಿಸ್ಚ ತಾತ್ಸರ್ವಮ್ ವ್ಯಾಪ್ಯ ನಾರಾಯನಹ ಸ್ಥಿತಹ || ೫
ಅನಂತಮವ್ಯಾಯಂ ಕವಿಗುಂ ಸಮುದ್ರೆಂತಂ ವಿಶ್ವ ಶಂಭುವಮ್|
ಪದ್ಮಕೋಶ ಪ್ರತೀಕಾಶಾಗುಂ ಹೃದಯಂ ಛಾಪ್ಯಾಧೋಮುಖಂ|| ೬
ಅಧೊ ನಿಶ್ಟ್ಯ ವಿತಸ್ತ್ಯಾಂತೆ ನಾಭ್ಯಾ ಮುಪರಿ ತಿಶ್ಠತಿ|
ಜ್ವಾಲಾಮಾಲಾಕುಲಂ ಭಾಟಿ ವಿಶ್ವಸ್ಯಾಯಾತಾನಂ ಮಹತ್|| ೭
ಸಂತಟಗುಂ ಶಿಲಾಭಿಸ್ತು ಲಂಬತ್ಯಾಕೋಶಾಸನ್ನಿಭಂ|
ತಸ್ಯನ್ತೆ ಸುಷಿರಗೂಂ ಸೂಕ್ಷ್ಮಮ್ ಟ್ಯಾಸ್ಮಿನ್ ಸರ್ವಮ್ ಪ್ರತಿಷ್ಟಿತಂ|| ೮

ತಾಸ್ಯ ಮಧ್ಯೆ ಮಹಾಅಗ್ನಿ ರ್ವಿಸ್ವಾರ್ಚಿ ರ್ವಿಶ್ವತೊ ಮುಖಾಹ|
ಸೋಗ್ರುಭುಗ್ವಿಭಜನ್ ಥೀಷ್ಟ ನ್ನಾಹಾರ ಮಜರಹ ಕವಿಹಿ|
ತೀರ್ಯಗೂರ್ಧ್ವ ಮಧಸ್ಸಾಯೀ ರಶ್ಮಯ ಸ್ಸಾಸ್ಯ ಸಂತತಾ|| ೯
ಸಂತಾಪಯತಿ ಸ್ವಂ ದೇಹ ಮಾಪಾಡಾತಳ ಮಸ್ತಾಕಹ|
ತಾಸ್ಯ ಮಧ್ಯೆ ವಾಹ್ನಿ ಶಿಖಾ ಅಣೀಯೋಧ್ವಾರ್ವ್ವ ವ್ಯವಸ್ಥಿತಹ|| ೧೦
ನೀಲತೊ ಯಾದಾಮಧ್ಯಸ್ಥಾ ದ್ವಿದಯುಲ್ಲೇಖೇವ ಭಾಸ್ವರಾ|
ನೀವಾರಸೂಕವತ್ತಾನ್ವೀ ಪೀತಾಭಾ ಸ್ವಾತ್ಯನೂಪಾಮಾ || ೧೧
ತಸ್ಯ ಶ್ರೈಖಾಯ ಮಧ್ಯೆ ಪರಮಾತ್ಮಾ ವ್ಯವಸ್ಥಿತಹ|
ಸ ಬ್ರಹ್ಮ ಸ ಶಿವ ಸ್ಸಾರಿ ಸ್ಸೇಂದ್ರ ಸ್ಸೋಕ್ಷರಹ ಪರಮಸ್ಸಾವ್ವರಾತ್|| ೧೨
ಓಂ ತದ್ಬ್ರಹ್ಮ,ಓಂ ತದ್ವಾಯುಹು,ಓಂ ತದಾತ್ಮಾ,ಓಂ ತತ್ಸತ್ಯಂ|
ಓಂ ತಾತ್ಸರ್ವಮ್,ಓಂ ತತ್ಪೂರೋರ್ನಮಹ|
ಅಂತಸ್ಚರತಿ ಭೂತೆಸು ಗುಹಾಂ ವಿಶ್ವಾಮುರ್ತಿಷು|
ತ್ವಂ ಯಗ್ನಸ್ತ್ವಂ ವಶಾತ್ಕಾರಸ್ತ್ವಮಿಂದ್ರಸ್ತ್ವಗ್-ಮ್|
ರುದ್ರಸ್ತ್ವಂ ವಿಷ್ಣುಸ್ತ್ವಂ ಬ್ರಹ್ಮತ್ವಂ ಪ್ರಜಾಪತಿಹಿ|
ತ್ವಂ ತಾದಾಪಾ ಆಪೋ ಜ್ಯೋತಿ ರಸೋಂೃತಂ ಬ್ರಹ್ಮ ವಸ್ಸುವರೋಮ್ ||೧೩

ಗದಾ ಪುನಸ್ಸಂಗಾರಾಧಾಂಗಕಲ್ಪಕ ಧ್ವಜಾರವಿಂದಾಂಕುಶ ವಜ್ರಲಾಲಾಸ್ಚಿತ
ಹೇ! ಶ್ರೀನಿವಾಸಾ ತ್ವಕ್ಚರನಾಂಬುಜ ದ್ವಯಮ್ ಮದಿಯ ಮೂರ್ಧಾನ ಮಲಾಜಾ
ಓಂ ನಿರಂಜನಾಯ ವಿದ್ಮಹಾಂೆ ನಿರಾಭಾಸಾಯ ಧೀಮಹಿ
ತನ್ನೋ ಶ್ರೀನಿವಾಸಃ ಪ್ರಚೋದಯಾತ್
ಶ್ರೀ ಲಕ್ಷ್ಮಿ ಪದ್ಮಾವತಿ ಸಮೇತ ಶ್ರೀವೆಂಕಟೇಶ್ವರ ಸ್ವಾಮಿನೆಯ್ ನಮಃ
ದಿವ್ಯಮಂತ್ರಪುಷ್ಪಮ್ ಸಮರ್ಪಯಾಮಿಪ್ರಧಕ್ಷಿಣ ನಮಸ್ಕಾರಾಂ

**ಸ್ಲೋಕಮ್**

ಯಾನಿಕಾಣಿ ಚ ಪಾಪಾನಿ ಜನ್ಮಾಂತರ ಕೃತಾನಿ ಚ |

ತಾನಿ ತಾನಿ ಪ್ರಾಣಾಶ್ಯಂತಿ ಪ್ರಧಕ್ಷಿಣ ಪದೇ ಪದೇ ||

ಪಾಪೋಹಮ್ ಪಾಪಕರ್ಮಾಹಂ ಪಾಪಾತ್ಮಾ ಪಾಪಸಂಭವಾಹ |

ತ್ರಾಹಿಮಾಮ್ ಕೃಪಮಯಾ ದೇವ ಸರಣಾಗತಾವತ್ಸಲ ||

ಅನ್ಯಧಾ ಶರಣಮ್ ನಾಸ್ತಿ ತ್ವಮೇವ ಶರಣಮ್ ಮಮ |

ತಾಸ್ಮಾತ್ಕಾರುಣ್ಯ ಭಾವೇನಾ ರಕ್ಷರಕ್ಷ ಜನಾರ್ಧನ ||

ಶ್ರೀ ಲಕ್ಷ್ಮಿ ಪದ್ಮಾವತಿ ಸಮೇತ ಶ್ರೀವೆಂಕಟೇಶ್ವರ ಸ್ವಾಮಿನೆಯ್ ನಮಃ
ಆತ್ಮಪ್ರಧಕ್ಶಿಣ ನಮಸ್ಕರಾಂ ಸಮರ್ಪಾಯಾಮಿ ( ೩ ಪ್ರದಕ್ಶಿಣೆ ನಿರ್ವಹಿಸುವಾಗ ಮೇಲಿನ ಮಂತ್ರ ಓದಿ

ತದನಂತರ ಸಾಷ್ಟಾಂಗ್ ನಮಸ್ಕಾರ್ ಹಾಕಿ)

**ವಿವಿದೊಪಚಾರ ಪೂಜೆಗಳು**

ಛತ್ರ ಧಾರಯಾಮಿ |ಚಾಮರಾಂ ವೀಜಯಾಮಿ |ನೃತ್ಯಂ ದರ್ಶಯಾಮಿ |ಗೀತಂ
ಶ್ರಾವಯಾಮಿ |ವಾದ್ಯಮ್ ಘೋಷಯಾಮಿ |ಅಂದೋಳಿಕಾನ್ ಆರೋಹಯಾಮಿ |
ಅಶ್ವಾನಾರೋಹ ಯಾಮಿ

| ಗಜಾನಾರೋಹಯಾಮಿ| ಸಮಸ್ತರಾಜೋಪಚಾರ, ಶಕ್ತ್ಯುಪಚಾರ, ಯಂತ್ರೋಪಚಾರ,

ದೇವೋಪಚಾರ,ಸರ್ವೋಪಚಾರ ಪೂಜಂ ಸಮರ್ಪಾಯಾಮಿ ||

ಕ್ಷಮಾರ್ಪಣಮ್

ಮಂತ್ರಹೀನಂ ಕ್ರಿಯಾಹೀನಂ ಭಕ್ತಿಹೀನಂ ಜನಾರ್ದನ|

ಯತ್ಕೃತಂತು ಮಯಾದೇವ ಪರಿಪೂರ್ಣಂ ತದಸ್ತುತೇ|| (ದೇವರಿಗೆ ನಮಸ್ಕಾರ ಮಾಡಿ)

ಅನಯಾ ಧ್ಯಾನಾವಾಹನಾಡಿ ಷೋಡಶಪಚಾರ ಪೂಜಯಾ ಚ ಭಗವಾನ್ ಸರ್ವಾತ್ಮಕಹ

ಶ್ರೀ ಲಕ್ಷ್ಮಿ ಪದ್ಮಾವತಿ ಸಮೇತ ಶ್ರೀವೆಂಕಟೇಶ್ವರ ಸ್ವರೂಪೋ ಭಗವಾನ್ ಸುಪ್ರೀತ

ಸುಪ್ರಸನ್ನೋ ವರದೊ ಭಾವಾತೂ. ಶ್ರೀವೆಂಕಟೇಶ್ವರ ದೇವ ಪ್ರಸಾದಂ ಶಿರಸಾ ಗೃಹ್ಣಾಮಿ.

(ತೀರ್ಥವನ್ನು ಸ್ವೀಕರಿಸಿ)

ಅಕಾಲ ಮೃತ್ಯೂಹರಣಮ್ ಸರ್ವವ್ಯಾಧಿ ನಿವಾರನಂ |

ಸರ್ವ ಪಾಪಕ್ಷಯಕಾರಾಂ ದೇವ ಪಾಧೊದಕಮ್ ಪಾವಣಂ ಶುಭಂ ||

(ತೀರ್ಥವನ್ನ ಕುಡಿಯಿರಿ)

ನೈವೇಧ್ಯ – ಓಂ ಭೂರ್ಭುವಸ್ಸುವಾಹ, ಓಂ ತತ್ಸವಿತುರ್ವರೇಣ್ಯಂ ಭರ್ಗೋ ದೇವಸ್ಯ ಧೀಮಹಿ

ಧಿಯೋ ಯೋನಹ ಪ್ರಚೋದಯಾತ್,ಸತ್ಯಾಂತ್ವರ್ತೇನ ಪರಿಶಿಂಚಾಮಿ,ಅಮೃತಾಮಸ್ತು

ಅಮೃತೋಪಸ್ತರನಮಸಿ,ಓಂ ಪ್ರಾಣಾಯ ಸ್ವಾಹ,ಓಂ ಅಪಾನಾಯ ಸ್ವಾಹ,ಓಂ ವ್ಯನಾಯ

ಸ್ವಾಹ,ಓಂ ಉದನಾಯ ಸ್ವಾಹ,ಓಂ ಸಮಾನಾಯ ಸ್ವಾಹ,ಓಂ ಬ್ರಾಹ್ಮನೆ ಸ್ವಾಹ, ಶ್ರೀ ಲಕ್ಷ್ಮಿ

ಪದ್ಮಾವತಿ ಸಮೇತ ಶ್ರೀ ವೆಂಕತೇಸ್ವರ ಸ್ವಾಮಿನೆಯ್ ನಮಹ – ಮಹಾ ನೈವೇಧ್ಯಾಮ್ ಸಮರ್ಪಯಾಮಿ ||

ಅಮೃತಾಪಿ ಧಾನಮಸಿ ಉತ್ತರಾಪೋಷಣಂ ಸಮರ್ಪಯಾಮಿ,ಹಸ್ತೌ ಪ್ರಕ್ಷಾಲಯಾಮಿ,ಪಾಡೌ ಪ್ರಕ್ಷಾಲಯಾಮಿ,ಶುದ್ಧ ಆಚಮಾನೀಯಂ ಸಮರ್ಪಯಾಮಿ ||

ತಾಂಬೂಲಂ ಸಮರ್ಪಯಾಮಿ,ಸುವರ್ಣ ಮಂತ್ರಪುಷ್ಪಮ್ ಸಮರ್ಪಯಾಮಿ,ಪ್ರಧಕ್ಷಿಣ ನಮಸ್ಕರಂ ಸಮರ್ಪಯಾಮಿ,ಅನಾಯಾಧ್ಯಾನಾ ವಾಹನಾಡಿ ಷೋಡಶೋಪಚಾರ ಪೂಜಯಾ ಭಗವಾನ್ ಸರ್ವಾತ್ಮಕಹ ಶ್ರೀ ಲಕ್ಷ್ಮಿ ಪದ್ಮಾವತಿ ಸಮೇತ ವೆಂಕತೇಸ್ವರ ಸ್ವಾಮಿ ಸ್ಸುಪ್ರೀತ ಸ್ಸುಪ್ರಸನ್ನೋ ವಾರದೋ ಭಾವಾತೂ,ಶ್ರೀ ಲಕ್ಷ್ಮಿ ಪದ್ಮಾವತಿ ಸಮೇತ ಶ್ರೀವೆಂಕಟೇಶ್ವರ ಸ್ವಾಮ್ಯ್ ಪ್ರಸಾದಂ ಶಿರಸಾ ಗ್ರೂಹ್ನಾಮಿ ||

**ಉದ್ವಾಸಾನಮ್**

ಯಜ್ಞೇನಾ ಯಜ್ಞ ಮಾಯಾಜಂತಾ ದೇವಸ್ಥಾನಿ ಧರ್ಮಾನಿ ಪ್ರಥಮಾನ್ಯಾಸಂ |
ತೇಹಣಾಕಂ ಮಹಿಮಾನಸ್ಸಚಂಟೆ ಯತ್ರ ಪೂರ್ವೇ ಸಾಧ್ಯಾಸ್ಸಂತಿದೇವಾಹ ||
ಗಚ್ಚ ಗಚ್ಚ ಸುರಾಶ್ರೇಷ್ಟ ಸ್ವಸ್ಥಾನ ಶ್ರೀವೆಂಕಟೇಶ್ವರ |
ಭಕ್ತಾಭೀಷ್ಟ ಸಮೃಧ್ಯಾರ್ಥಂ ಪುನರಾಗಮನಯ ಚ ||
ಶ್ರೀ ಲಕ್ಷ್ಮಿ ಪದ್ಮಾವತಿ ಸಮೇತ ಶ್ರೀವೆಂಕಟೇಶ್ವರ ಸ್ವಾಮ್ಯ್ ಯಾಥಾಸ್ತಾನಮ್ ಉದ್ವಾಸಯಾಮಿ

---

# ವ್ರತ-ಕಥೆಗಳು

## ಕಥೆ– ೧ : ಶ್ರೀ ಭಗವಾನ್ ಉವಾಚ

ಕಲಿಯುಗದ ಒಂದು ಮಂಗಳಕರ ದಿನದಂದು, ಶ್ರೀಮಾನ್ ನಾರಾಯಣನು ಸ್ವತಃ ತಿರುಮಲದಲ್ಲಿ ವಿಶ್ವಪತಿ ಹೆಸರಿನ ಒಂದು ಭಕ್ತನಿಗೆ ವೆಂಕಟೇಶ್ವರ ಸ್ವಾಮಿಯ ರೂಪದಲ್ಲಿ,ಕಾಣಿಸಿಕೊಂಡರು (ಇದು ಶ್ರೀಮನ್ ನಾರಾಯಣ ವಾಸಿಸುವ ಸ್ಥಳ – ವೈಕುಂತವೆನ್ದೆ ಪರಿಗಣಿಸಲಾಗುತ್ತದೆ) ಮತ್ತು ಈ ಕೆಳಗಿನಂತೆ ಹೇಳಿದರು

ಈ ವ್ರತದ ಬಗ್ಗೆ ಪುಸ್ತಕ ಬರೆಯಲು ಸೂಚನೆ ನೀಡಿದರು. ಅವರು ವಿಶ್ವಪತಿಯನ್ನ ಕುರಿತು, ಈ ವಿಶೇಷ ವ್ರತದ ಬಗ್ಗೆ ಹೇಳಿದರು ಈ ವ್ರತವು ತನಗೆ ಪ್ರೀತಿಪಾತ್ರವಾಗಿರುವುದು ಹಾಗೂ ಸುಲಭವಾಗಿ ಎಲ್ಲರೂ ನಿರ್ವಹಿಸಬಹುದಾಗಿದೆ ಎಂದರು.ಈ ಕಲಿಯುಗದಲ್ಲಿ, ಜನರ ತಮ್ಮ ಹಿಂದಿನ ಜನ್ಮದ ಫಲವನ್ನ ಅನುಭವಿಸುತಿದ್ದಾರೆ ಆದರೂ ಮತ್ತೆ ಮತ್ತೆ ಪಾಪಗಳನ್ನ ಮಾಡಿ ತಮ್ಮ ಕಷ್ಟ ಮತ್ತು ದುಖಃವನ್ನಹೆಚ್ಚಿಸಿ ಕೊಳ್ಳುತ್ತಿದ್ದಾರೆ. ಹೀಗೆ ನನ್ನ ಭಕ್ತರ ಹಲವಾರು ಕಷ್ಟಗಳಲ್ಲಿ ಸಿಕ್ಕಿ, ನಾನಾ ರೀತಿಯ ಅಡಚಣೆಗಳಿಂದ ಬಳಲಿ ನನ್ನ ದರ್ಶನ ಪಡೆಯಲುತಿರುಮಲ ತಿರುಪತಿಗೆ ಪ್ರಯಾಣ ಬೆಳೆಸುತ್ತಾರೆ. ನನ್ನ ಭಕ್ತರಲ್ಲಿ ನನಗೆ ಬಹಳಷ್ಟು ಪ್ರೀತಿ. ಯಾವ ಭಕ್ತರು ಧಾರ್ಮಿಕ ಜೀವನದಲ್ಲಿ ತಮ್ಮನ ತೊಡಗಿಸುತ್ತಾರೋ ಹಾಗೂ ತನಗೆ ಶರಣ್ ಯೆನ್ದವರ ಸಂಪೂರ್ಣ ಜವಾಬ್ದಾರಿಯನ್ನು ತಾನು ತಗೆದುಕೊಳ್ಳುವುದರಲ್ಲಿ ಸಂಶಯವಿಲ್ಲ ಈ ವ್ರತವೂ ಮುಂದೆ "ಶ್ರೀ ವೆಂಕಟೇಶ್ವರ ವ್ರತ" ವೆಂದೇ ಪ್ರಸಿದ್ದವಾಗಲಿದೆ. ಈ ವ್ರತವು ನನಗೆ ಬಹಳ ಪ್ರಿಯವಾಗಿದ್ದು ಭಕ್ತಿ ಯಿಂದ ಆಚರಿಸಿದಲ್ಲಿ ತಮ್ಮ ಸಮಸ್ಯೆಗಳಿಗೆ ತಕ್ಷಣ ಪರಿಹಾರಗಳನ್ನು ಕಾಣುವರು. ಈ ವ್ರತವು ತಮ್ಮ ಅನುಕೂಲತಕ್ಕಂತೆ ಮತ್ತು ಹಣಕಾಸು ಸ್ಥಿತಿ ಪ್ರಕಾರ ಯಾವುದೇ ಸಮಯದಲ್ಲಿ ಮಾಡಬಹುದಾಗಿದೆ. ಈ ಮಾರ್ಗಶಿರ ತಿಂಗಳಲ್ಲಿ ಈ ವ್ರತವನ್ನ ಆಚರಿಸಿದಲ್ಲಿ, ಗರಿಷ್ಟ ಫಲಿತಾಂಶವನ್ನು ಪಡೆಯಬಹುದಾಗಿದೆಮಾಘ ಅಥವಾ ಕಾರ್ತೀಕ ಮಾಸಗಳಲ್ಲಿ, ಪೌರ್ನಮಿ ಅಥವಾ ಪಂಚಮಿ, ಸಪ್ತಮಿ, ಏಕಾದಶಿ ದಿನಗಳಲ್ಲಿ ಅಥವಾಶ್ರವಣ ,ಸ್ವಾತಿ ತಾರೆಗಳ ದಿನಗಳಲ್ಲಿ ಮಾಡಬಹುದಾಗಿದೆ. ನಾನು ಕಲಿಯುಗದಲ್ಲಿ ನನ್ನ ಭಕ್ತರು ಎದರಿಸುವ ಎಲ್ಲ ಕಷ್ಟಗಳ ಅರಿವು ನನಗೆ ಇದೆ. ಭಕ್ತರಿಗೆ ಬರುವಆರೋಗ್ಯ ಸಮಸ್ಯೆಗಳು, ಸಂಪತ್ತು ಸಮಸ್ಯೆಗಳು ಹಾಗೂ ಕುಟುಂಬದ ಸಮಸ್ಯೆಗಳಿಂದ ಮುಕ್ತಿ ಪಡೆಯಲು ಈ ವ್ರತವನ್ನ ಆಚರಿಸಬೇಕುಈ ವ್ರತದ ಆಚರಣೆಯಿಂದ ಮನಸ್ಸಿಗೆ ಶಾಂತಿ ಸಿಗುತ್ತದೆ ಹಾಗೂ ನಿಮ್ಮ ಜೀವನದಲ್ಲಿ ಎಲ್ಲಾ ಅಡೆತಡೆಗಳನ್ನು ಇದು ತಗೆದುಹಾಕುತ್ತದೆ

ಇದು ಬೆಳಿಗ್ಗೆ ಅಥವಾ ಸಂಜೆ ನಿರ್ವಹಿಸಬಹುದು. ಈ ಪುಸ್ತಕವು ೫ ಕಥೆಗಳನ್ನ ಹೊಂದಿದೆ ಇವುಗಳನ್ನ ಭಕ್ತಿಯಿಂದ ಓದ ತಕ್ಕದುಈ ವ್ರತವನ್ನ ನಿಮ್ಮ ಮನೆಯಲ್ಲಿ ಅಥವಾ ದೇವಸ್ಥಾನ ಅಥವಾ ಯಾವುದೇ ಧಾರ್ಮಿಕ ನದಿಗಳ ತಟದಲ್ಲಿ ಮಾಡಬಹುದಾಗಿದೆಸಾಧ್ಯವಾದಷ್ಟು ಸಂಬಂಧಿಕರು ಮತ್ತು ಸ್ನೇಹಿತರು ಆಮಂತ್ರಿಸಿ ಈ ವ್ರತವನ್ನ ಆಚರಿಸಿದರೆ ಉತ್ತಮ. ಭಕ್ತರು ಯಾರುಈ ವ್ರತದಲ್ಲಿ ಭಾಗವಹಿಸುತ್ತಾರೊ ಹಾಗೂ ಪ್ರಸಾದವನ್ನ ಸ್ವೀಕರಿಸುತ್ತಾರೋ ಅವರಿಗೆ ಅಷ್ಟ ಸಂಪತ್ತು ದೊರೆಯುವುದು. ಹಿಂದೆ ಅನೇಕ ಸಂತರು ಈ ವ್ರತವನ್ನ ಆಚರಿಸಿ ನನ್ನ ಪೂರ್ಣ ಆಶೀರ್ವಾದವನ್ನ ಪಡೆದು ಕೊಂಡಿದ್ದಾರೆ.ಈ ವ್ರತವನ್ನ ಭಕ್ತಿಯಿಂದ ಆಚರಿಸಿದಲ್ಲಿ ನನ್ನ ಭಕ್ತರು ಸುಖ ಸಂತೋಷವನ್ನ ಜೀವನದಲ್ಲಿ ಕಾಣುವರು.ಈ ವ್ರತ ನಿರ್ವಹಿಸುವುದು ತುಂಬಾ ಸುಲಭ . ನನ್ನ ಎಲ್ಲಾ ಭಕ್ತರ ಸಮಸ್ಯೆಗಳ ಬಗ್ಗೆ ನನಗೆ ಅರಿವಿದೆ ಆದುದರಿಂದ ಈ ವ್ರತವನ್ನ ಸುಲಭದಿಂದ ಮಾಡಿ ಉತ್ತಮ ಫಲಿತಾಂಶವನ್ನ ಪಡೆಯಬಹುದಾಗಿದೆ ಇಲ್ಲದಿದ್ದರೆ ಈ ಫಲಿತಾಂಶ ಪಡೆಯಲು ಹಲವಾರು ತ್ಯಾಗ ಹಾಗೂ ತಪಸ್ಸು ಮಾಡಬೇಕಾಗಿತ್ತು.

ಮೊದಲಿಗೆ, ಧಾರ್ಮಿಕ ಸ್ಥಳ ಆಯ್ಕೆಮಾಡಿ ಸ್ವಚ್ಚಗೊಳಿಸಿ. ನಂತರ, ಒಂದು ಮಂಟಪ ದ ವ್ಯವಸ್ಥೆ ಮಾಡಿ ಮತ್ತು ಕಲ್ಯಾಣ ಶ್ರೀನಿವಾಸನ ಹಾಗೂ ಶ್ರೀದೇವಿ ಮತ್ತು ಭೂದೇವಿಯ ಮೂರ್ತಿ ಅಥವಾ ಚಿತ್ರವನ್ನು ಸ್ಥಾಪಿಸಿ . ಇತರ ದೇವ ದೇವತೆಯರ ಚಿತ್ರಗಳನ್ನು ಪಕ್ಕದಲ್ಲಿ ಇಡಬಹುದು. ಮೊದಲೆಯದಾಗಿ ನೀವು

ಅಷ್ಟ ದಿಕ್ಕುಗಳ ಮತ್ತು ಒಂಬತ್ತು ಗ್ರಹಗಳ (ನವ ಗ್ರಹ) ದೇವರಿಗೆ ನಮಿಸಬೇಕು .ಮೊದಲಿಗೆ, ವಿನಾಯಕ ಪೂಜಾ ನಿರ್ವಹಿಸಿ ತದನಂತರ ಭಕ್ತಿಯಿಂದ ಈ ೫ ಕಥೆಗಳನ್ನ ಓದ ಬೇಕು. ಈ ಕಥೆಯೂ ಐದು ಕಥೆಗಳಲ್ಲಿ ಮೊದಲನೆಯದಾಗಿದೆ. ಉಳಿದ ನಾಲ್ಕು ಕಥೆಗಳು ಮಹಾನ ಸಿದ್ದ ಪುರುಷಗಳಾದ ವಿಶ್ವಾಮಿತ್ರ, ವಸಿಷ್ಟ ಭಾರಧ್ವಜ ಮತ್ತು ಆತ್ರಿ ಯವರಿಂದ ನಿರೂಪಿಸಲ್ಪಟ್ಟಿದೆ . ಪ್ರತಿ ಕಥೆಯ ಕೊನೆಯಲ್ಲಿ ೩ ಬಾರಿ, ಗೋವಿಂದಾ ... ಗೋವಿಂದಾ .... ಗೋವಿಂದಾ .... ಎನ್ನಬೇಕು

ಯಾವುದೇ ಕಾರಣದಿಂದ ಅಥವಾ ತೊಂದರೆಯಿಂದ ಮೇಲಿನ ಹೇಳಿದಂತೆ ಮಾಡಲಾಗಿದಲ್ಲಿ ಒಬ್ಬರೇ ಕುಳಿತು ಈ ವ್ರತಂ ನಿರ್ವಹಿಸಬಹುದಾಗಿದೆ. ಕಲ್ಯಾಣ ಶ್ರೀ ವೆಂಕಟೇಶ್ವರನ ಚಿತ್ರ ಅಥವಾ ಮೂರ್ತಿಯ ಮುಂದೆ ಕುಳಿತು ಪ್ರಾರ್ಥನೆ ಮಾಡಬಹುದುನಿಮ್ಮ ಮನಸ್ಸಿನಲ್ಲಿ ವಿನಾಯಕ ಅಥವಾ ವಿಘ್ನೇಶ್ವರನ ಸ್ಮರಣೆ ಮಾಡಿದ ನಂತರ, ಅಷ್ಟ ದಿಕ್ಪಾಲಕರಿಗೆ ಹಾಗೂ ನವಗ್ರಹ ದೇವತೆಯರಿಗೆ ತುಳಸಿ ಎಲೆಗಳು (ತುಳಸಿ) , ತೆಂಗಿನಕಾಯಿ, ಹಣ್ಣುಗಳು ಮತ್ತು ಹೂಗಳನ್ನ ತಟ್ಟೆಯಲ್ಲಿ ಅರ್ಪಿಸಬೇಕು. ನಂತರ ಈ ೫ ಕಥೆಗಳನ್ನ ಓದಬೇಕುಕೊನೆಯಲ್ಲಿ ಆ ತಟ್ಟೆಯಲ್ಲಿರುವ ಸಾಮಗ್ರಿಯನ್ನ ನನಗೆ ನೈವೇದ್ಯವಾಗಿ ನೀಡಿ .ತದನಂತರ ಈ ಪ್ರಸಾದವನ್ನ ನೀವು ಭಕ್ತಿಯಿಂದ ಸ್ವೀಕರಿಸಿದಲ್ಲಿ ನಿಮ್ಮ ತೊಂದರೆಗಳು ದೂರವಾಗುವುದು . ಭಕ್ತಿಯಿಂದ ಈ ವ್ರತವನ್ನ ಆಚರಿಸಿದಲ್ಲಿ ನಾನು ಸ್ವಯಂ ಬಂದು ಈ ನೈವೇದ್ಯವನ್ನ ಸ್ವೀಕರಿಸುತ್ತೇನೆ ಹಾಗೂ ನನ್ನ ಭಕ್ತರಿಗೆ ಆಶೀರ್ವದಿಸುತ್ತೇನೆ. ಎಂದು ದೇವನು ಸ್ವಯಂ ತಿರುಮಲ ತಿರುಪತಿ ಯಲ್ಲಿ ತಿಮ್ಮರಾಜ ವಿಶ್ವಪತಿ ರಾಮಕೃಷ್ಣ ಮೂರ್ತಿ "ವಿಸ್ವಪತಿ".ಯರಿಗೆ ಭೋದಿಸಿದರು. ಈ ವ್ರತವನ್ನ ನಿರ್ವಹಿಸಿ ನಾವು ಕೂಡ ಶ್ರೀ ವೆಂಕಟೇಶ್ವರ ಸ್ವಾಮಿಯ ಆಶೀರ್ವಾದಪಾತ್ರರಾಗಬೇಕು ಬೇಕು

ಗೋವಿಂದಾ ... ಗೋವಿಂದಾ .... ಗೋವಿಂದಾ ....

||೧ ಕಥೆ ಅಂತ್ಯ ||

ಶ್ರಿಯಃ ಕಾಂತಾಯ ಕಲ್ಯಾಣನಿಧಯೇ ನಿಧಯೇಽರ್ಥಿನಾಮ್ |

ಶ್ರೀವೇಂಕಟ ನಿವಾಸಾಯ ಶ್ರೀನಿವಾಸಾಯ ಮಂಗಳಮ್||

## ಕಥೆ – ೨ : ಶ್ರೀ ವಿಶ್ವಾಮಿತ್ರ ಉವಾಚ

ಈ ಕಥೆಯನ್ನು ಈ ಕೆಳಗಿನಂತೆ ಮಹಾ ಸಂತ ಶ್ರೀ ವಿಶ್ವಾಮೀತ್ರ ಮೂಲಕ ಅಲಂಕರಿಸಲಾಗಿದೆ – ಓಹ್! ಕಲಿಯುಗ ವಾಸಿಗಳೆ ಹಾಗೂ ಶ್ರೀನಿವಾಸನ ಪ್ರಿಯ ಭಕ್ತರೇ ನೀವು ನಿರ್ವಹಿಸುವ ಈ ವೆಂಕಟೇಶ್ವರ ವ್ರತವು ಅತ್ಯಂತ ಪವಿತ್ರವಾದದ್ದು ಹಾಗೂ ಅತ್ಯಂತ ಪ್ರಾಬಲ್ಯದಾಗಿದೆ.ಶ್ರಿಮನ ನಾರಾಯಣನ ಕೃಪಾ ದೃಷ್ಟಿ ಪಡೆಯಲು ಈ ವ್ರತವು ಅತ್ಯಂತ ಸಹಾಯಕಾರಿ. ಹಿಂದೆ ಈ ವ್ರತವನ್ನ ಆಚರಿಸಿ ತಮ್ಮ ಇಷ್ಟಾರ್ಥ ವನ್ನ ಈಡೇರಿಸಿ ಕೊಂಡ ಭಕ್ತರು ಹಲವರಿದ್ದಾರೆ. ಮೊದಲಿಗೆ, ನಾವು ಎಲ್ಲರೂ ವೆಂಕಟೇಶ್ವರನಿಗೆ ಈ ವ್ರತವನ್ನ ನಮಗೆ ನೀಡಿದಕ್ಕೆ ನಮಿಸೋಣ.

ಅನೇಕ ವರ್ಷಗಳ ಹಿಂದೆ ಮಗಧ ರಾಜ್ಯದಲ್ಲಿ, ಶ್ರೀ ವೆಂಕಟೇಶ್ವರನ ಪ್ರಿಯ ಭಕ್ತ ವಿಷ್ಣು ಚಿತ್ತ ವಾಸಿಸುತಿದ್ದ.ಅವನಿಗೆ ಒಂಬತ್ತು ಜನ ಹೆಣ್ಣು ಮಕ್ಕಳಿದ್ದರು . ಅವನು ವಿದ್ಯಾವಂತ ನಾದರು ಬಡತನದಿಂದ ಬಳಲುತ್ತಿದ್ದ. ಅವರ ಪತ್ನಿ ತಾರಾಮತಿ ಯಾವಾಗಲೂಶ್ರಿಮನ ನಾರಾಯಣನ ಪರಮ ಭಕ್ತಳಾಗಿದ್ದಳು ಹಾಗೂ ಅವನ ಪಾದಗಳಲ್ಲಿ ತನ್ನ ಜೀವನ ವನ್ನ ಅರ್ಪಿಸಿದಳು ಅವರಿಗೆ ಆದಾಯದ ಕೊರತೆ ಇತ್ತು ಮದುವೆ ಮತ್ತು ಇತರ ಸಂದರ್ಭಗಳಲ್ಲಿ ಸಮಯದಲ್ಲಿ ದೊರೆತ ಕಾಸಿನ್ದ ಅವರ

ಜೀವನ ನಡೆಯುತಿತ್ತು.ಇದರ ಮದ್ಯೆ ಅವರ ೯ ಜನ ಹೆಣ್ಣು ಮಕ್ಕಳು ವಿವಾಹಯೋಗ್ಯ ವಯಸ್ಸನ್ನು ತಲುಪಿದರು. ತಾರಾಮತಿ ಇದರಿಂದ ಚಿಂತಕೃತಳಾಗಿ ಶ್ರೀನಿವಾಸಾನಲ್ಲಿ ಮೊರೆಯಿಟ್ಟಳು.

ಓಹ್! ಶ್ರೀನಿವಾಸನ ಭಕ್ತರೇ! ವೆಂಕಟೇಶ್ವರನು , ತನ್ನ ಭಕ್ತರ ಮೇಲೆ ಅನಿಯಮಿತ ಪ್ರೀತಿ ಹೊಂದಿರುವನೆಂಬುದು ಹಾಗೂ ತನ್ನಲಿ ಶರಣಾಗುವವರಿಗೆ ಸದಾ ರಕ್ಷಣೆ ನೀಡುವನು ಎಂಬುದು ಎಲ್ಲರಿಗೆ ಗೊತ್ತಿರುವ ಸತ್ಯ.ಆ ದಿನ ಮಾಘ ಪೌರ್ಣಮಿ. ಅಂದು ಬೆಳಿಗ್ಗೆ ಒಬ್ಬ ವೃದ್ದ ಬ್ರಾಹ್ಮಣ ಬಾಗಿಲ ತಟ್ಟುತಿದ್ದವಿಷ್ಣು ಚಿತ್ತ ಬಾಗಿಲನ್ನ ತೆರೆದಾಗ . "ತಾನು ವಂಗದೆಸದ ನಿವಾಸಿ ಎಂದು. ತಾನು ಒಂದು ಯಜ್ಞವನ್ನ ನಿರ್ವಹಿಸಲು ಹೋಗುವಾಗ ಕತ್ತಲೆಯಾದುದ ರಿಂದ ಈ ಸ್ಥಳಕ್ಕೆ ಬಂದೆನು ಎಂದನು. ನನಗೆ ನಿಮ್ಮ ಮನೆಯಲ್ಲಿ ಇಂದು ರಾತ್ರಿ ಉಳಿಯಲು ಅವಕಾಶ ನೀಡಿ ಎಂದು ಕೇಳಿಕೊಂಡನು. ನಾಳೆ ಬೆಳಿಗ್ಗೆ ಹೊರಡುವೆಯೆಂದನು. "ವಿಷ್ಣು ಚಿತ್ತ ವಿಧೇಯತೆಯಿಂದ – "ಸ್ವಾಮಿ, ತಾವು ನಮ್ಮ ಮನೆಗೆ ಬಂದಿರುವುದು ನಮ್ಮಮಹಾನ್ ಭಾಗ್ಯ ಎಂದು ತಿಳಿಯುತ್ತೇನೆ. ಪುರಾಣದಲ್ಲಿ ಹೇಳಿದಂತೆ ಅತಿಥಿಸ್ವತಃ ಶ್ರೀಮನ್ ನಾರಾಯಣ ನಾಗಿರುವನು ಆದುದರಿಂದ ಕಿಂಚಿತ್ತು ಸಂಶಯವಿಲ್ಲದೇ ನಮ್ಮ ಮನೆಯಲ್ಲಿ ಉಳಿಯಬಹುದು ಎಂದನು ಹಾಗೂ ಬ್ರಾಹ್ಮಣನ ಕೈ ಹಿಡಿದ್ದು ತನ್ನ ಮನೆಯೊಳಗೆ ಕರೆದುಕೊಂಡು ಬಂದನುಆ ಮಧ್ಯಾಹ್ನ ಊಟದ ನಂತರ ಆ ವೃದ್ದ ಬ್ರಾಹ್ಮಣನು ತಾರಾಮತಿಯ ಕುರಿತು " ತಾಯಿ,ಏಕೆ ನೀನು ಸದಾ ಚಿಂತಕೃತಳಾಗಿರುವೆ? ವಿಷಯ ಏನು? ನಿಮ್ಮ ದುಃಖಕ್ಕೆ ಕಾರಣ ಏನು? ದಯವಿಟ್ಟುಏನು ಹಿಂಜರಿಕೆಯಿಲ್ಲದೇ ನನ್ಗೆ ವಿಷಯ ಹೇಳು ಎಂದನು. ಅದಕ್ಕೆ ತಾರಾಮತಿ,"! ಸ್ವಾಮಿ, ನೀವು ಮಹಾನ್ ತಪಸ್ವಿ ಆಗಿದ್ದೀರ ನಿಮ್ಮ ಮುಖ ತೇಜವೂ ಶ್ರೀಮನ್ ನಾರಾಯಣರನ್ನ ಹೋಲುತ್ತದೆ. ಅಡಗಿಸಲು ಏನೂ ಇಲ್ಲ. ನನ್ನ ಚಿಂತೆ ನನ್ನ ಹೆಣ್ಣು ಮಕ್ಕಳ ಮದುವೆಯ ಕುರಿತಾಗಿದೆ ಅದಕ್ಕೆ ಆ ಬ್ರಾಹ್ಮಣನು ಮುಗುಳ್ನಕ್ಕು ತಾಯಿ! ನಿಮ್ಮ ದುಃಖ ಅರ್ಥಮಾಡಿಕೊಂಡಿದ್ದೇನೆ. ನಾನು ನಿಮ್ಮ ದುಃಖ ನಿವಾರಿಸಲು ಒಂದು ಅದ್ಬುತ ವೃತದ ಬಗ್ಗೆ ಹೇಳುತ್ತೇನೆಈ ವೃತದ ಆಚರ್ಣೆಯ ವೇಳೆ ನಿಮ್ಮ ಎಲ್ಲ ದುಃಖ ಮಾಯವಾಗುವುದಲ್ಲದೇ ನೀವು ಶ್ರೀಮಂತ ಹಾಗೂ ಅದೃಷ್ಟವಂತರಾಗಿ ಸಂತೋಷದಿಂದ ಬಾಳುವಿರಿ. ಈವೃತವೂ ಮಾಡಲು ಬಹಳ ಸುಲಭ.ಆ ವೃತದ ನಿಯಮಗಳನ್ನ ಕೇಳಿದ ಆದಂಪತಿಗಳುಬಹಳ ಸಂತೋಷದಿಂದ ಬ್ರಾಹ್ಮಣನಿಗೆ ತಮ್ಮ ಕೃತಜ್ಞತೆ ವ್ಯಕ್ತಪಡಿಸಿದರು. ಇದು ತಮ್ಮ ಮಹಾನ್ ಅದೃಷ್ಟ ವೆಂದು ಕೊಂಡರು. ವಿಷ್ಣು ಚಿತ್ತ ಯಾವುದೇ ವಿಳಂಬವಿಲ್ಲದೆ ಆ ದಿನ ಮಾಘ ಪೌರ್ಣಮಿಯಾದುದರಿಂದ ವೆಂಕಟೇಶ್ವರ ವೃತವನ್ನ ತನ್ನ ಹೆಂಡತಿ, ಹೆಣ್ಣು ಮಕ್ಕಳು , ಸ್ನೇಹಿತರು ಹಾಗೂ ಸಂಬಧಿಕರ ಜೊತೆಗೂಡಿ ನಿರ್ವಹಿಸಿದನು ಎಲ್ಲರೂ ಭಕ್ತಿಯಿಂದ ಪ್ರಸಾದವನ್ನ ಸ್ವೀಕರಿಸಿ ತಮ್ಮ ಮನೆಗೆ ತೆರಳಿದರು . ವಿಷ್ಣು ಚಿತ್ತ ಹಾಗೂ ಅವನ ಪತ್ನಿ ಬ್ರಾಹ್ಮಣನಿಗೆ ಪ್ರಸಾದವನ್ನ ನೀಡಿ ನಮಸ್ಕರಿಸಿದರು ಆಗ ಆ ಬ್ರಾಹ್ಮಣನು ಅವರಿಗೆ – "ನಿಮ್ಮ ಎಲ್ಲ ದುಃಖವೂ ಕಳೆದು ಶ್ರೀ ಲಕ್ಷ್ಮೀದೇವಿಯ ಕೃಪಾಕಟಾಕ್ಷವಾಗಲಿ ಎಂದು ಹರಿಸಿದನು .

ಅಂದು ರಾತ್ರಿ ವಿಷ್ಣುಚಿತ್ತನು ದುಃಖದಿಂದ ಬ್ರಾಹ್ಮಣನಲ್ಲಿ "ದೇವ ನಾನು ಬಹಳ ಬಡವರಾಗಿರುವುದರಿಂದ ನನ್ನಲಿ ಒನ್ದೆಒನ್ದು ಹರಿದ ಹೊದಿಕೆಯುವಿರುವುದು ಆದುದರಿಂದ ಅದನ್ನೇ ಸ್ವೀಕರಿಸಬೇಕು" ಎಂದನು ಇದನ್ನ ಹೇಳುವಾಗ ವಿಷ್ಣುಚಿತ್ತನ ಕಣ್ಣಲ್ಲಿ ನೀರು ತುಂಬಿಕೊಂಡಿದ್ದವು. ಇದಕ್ಕಿಂತ ಉತ್ತಮ ನನ್ನಲ್ಲಿ ಏನು ಇಲ್ಲ ನಿಮಗೆ ನೀಡಲು, ನನ್ನನ ಕ್ಷಮಿಸಿ ಎಂದನು. ಅದಕ್ಕೆ "ಬ್ರಾಹ್ಮಣನು ಮುಗುಳ್ನಕ್ಕುವಿಷ್ಣುಚಿತ್ತರನ್ನ ಸಮಾಧಾನಿಸಿ ಜಗುಲಿಯ ಮೇಲೆ ಮಲಗಿ ಕೊಂಡರು . ನಂತರ ಎಲ್ಲರೂ ಮಲಗಿ ಕೊಂಡರು. ಅಂದು ರಾತ್ರಿ ಸಿಡಿಲು ಗುಡುಗಿನ ಜೊತೆ ಜೂರಾಗಿ ಮಳೆ ಬರಲು ಆರಂಭಿಸಿತುತುಂಭಾ ಕತ್ತಲೆ ಇದ್ದು ಏನೂ ಗೋಚರವಾಗುತಿರಲಿಲ್ಲಾ. ವಿಷ್ಣು ಚಿತ್ತ

ಬ್ರಾಹ್ಮಣನ ಬಗ್ಗೆ ಚಿಂತಿಸತೊಡಗಿದನು ಅವನು ಕಾತರದಿಂದಸೂರ್ಯೋದಯಕ್ಕೆ ಕಾಯತೊಡಗಿದನು. ಇಡೀ ಕುಟುಂಬ ಬ್ರಾಹ್ಮಣನ ಬಗ್ಗೆ ಯೋಚಿಸುತ್ತ, ಉಳಿದ ರಾತ್ರಿಯನ್ನ ಕಳೆದರು. ಬೆಳಗ್ಗೆ ಮಳೆ ನಿಂತಿತ್ತು. ಮನೆಯಿಂದ ಹೊರಗೆ ಬಂದಾಗ ಅಲ್ಲಿ ಒಂದು ಅದ್ಭುತ ದೃಶ್ಯ ಕಂಡರು. ಬ್ರಾಹ್ಮಣನಿಗೆ ನೀಡಿದ ಹರಿದ ಹೊದಿಕೆ ಬದಲು ಅಲ್ಲಿ ರೇಷ್ಮೆ ಬಟ್ಟೆ (ಪಟ್ಟು ಪೀತಾಮ್ಬರಂ) ಕಂಡರು. ವೆಂಕಟೇಶ್ವರ ಸ್ವಾಮಿಯ ಮೂರ್ತಿಯೂ ಆ ರೇಷ್ಮೆ ಬಟ್ಟೆಯ ಮೇಲೆ ಕಾಣಿಸಿಕೊಂಡಿತು ಸಂಪೂರ್ಣ ವಿಷಯವನ್ನು ಅರ್ಥ ಮಾಡಿಕೊಂಡ ನಂತರ ಅವರ ಸಂತೋಷಕ್ಕೆ ಗಡಿಯೆ ಇರಲಿಲ್ಲಾ. ಅತಿಥಿಯಾಗಿ ಬಂದ ಆಬ್ರಾಹ್ಮಣನು ಶ್ರೀಮಾನ್ ನಾರಾಯಣನೇ ಆಗಿದ್ದನು. ಓಹ್! ಏನು ನಮ್ಮ ಅದೃಷ್ಟ! ಲೆಕ್ಕವಿಲ್ಲದಷ್ಟು ಜನ್ಮದ ಫಲವಿದು ವೆಂದು ಕೊಂಡರು. ಆದರೆ ಸ್ವಾಮಿಯನ್ನ ಗುರುತಿಸದೇ ಹೋದನೆ ಎಂದು ದುಃಖ ಪತ್ತರು. ಸ್ವಾಮಿಗೆ ಒಂದು ಹರಿದ ಹೊದಿಕೆ ನೀಡಿದಕ್ಕೆ ದುಃಖವಾಯಿತು. ನಂತರ ಅವರು ಆರಾಧ್ಯವನ್ನ ಪ್ರಾರ್ಥಿಸಿ ತಮ್ಮ ಮನೆಯೊಳಗೆ ಕರೆದೊಯ್ದರು. ಅವರ ಮನೆ ತುಂಭ ಚಿನ್ನ ಕಾಣಿಸ ತೊಡಗಿತು. ಎಲ್ಲೆಡೆ ಹಣ ಮತ್ತು ಚಿನ್ನದ ಆಭರಣ ಕಂಡಿತು. ಇದನ್ನ ನೋಡಿ ಅವರು ದೇವರನ್ನ ಕೊಂಡಾಡಿದರು ಇದೆಲ್ಲವೂ ಶ್ರೀವೆಂಕಟೇಶ್ವರ ವೃತದ ಮಹಿಮೆ ಎಂದು ತಿಳಿದು ಕೊಂಡರು

ಇದೆಲ್ಲವೂ ದೇವರ ಅನುಗ್ರಹದಿಂದ ಆಗಿದೆ. ಅವರು ಸ್ವತಃ ಭಕ್ತರ ಮನೆಗೆ ಅತಿಥಿಯಾಗಿ ಬಂದಿದರು. ಪ್ರಸಾದವನ್ನ ಸ್ವೀಕರಿಸಿದರು. ಪ್ರಭುಅನುಕಂಪದ ಸಾಗರ. ಯಾವ ಭಕ್ತರು ನಂಬಿಕೆಯಿಂದಾಈ ವೃತವನ್ನಆಚರಿಸುತ್ತಾನೊ ಅವರ ಮೇಲೆ ಪ್ರಭುವಿನಅನುಗ್ರಹ ವಿರುತ್ತದೆ "ಶ್ರೀ ಲಕ್ಷ್ಮಿ ಶ್ರೀನಿವಾಸ ಕಟಾಕ್ಷ ಸಿದ್ಧಿರಸ್ತು". ಮಹಾನ್ ಋಷಿ ವಿಶ್ವಾಮಿತ್ರರು ಈ ಕಥೆಯನ್ನ ಹೀಗೆಂದು ಮುಗಿಸಿದರು.

ಗೋವಿಂದಾ ... ಗೋವಿಂದಾ .... ಗೋವಿಂದಾ ....

||ಎರಡನೆಯ ಕಥೆ ಅಂತ್ಯ ||

ಶ್ರೀಯಃ ಕಾಂತಾಯ ಕಲ್ಯಾಣ ನಿಧಯೇ ನಿಧಾಯೆರ್ಥಿನಾಂ ||

ಶ್ರೀ ವೆಂಕಟ ನಿವಾಸಾಯ ಶ್ರೀನಿವಾಸಾಯ ಮಂಗಳಂ ||

## ಕಥೆ– ೩ : ಶ್ರೀ ವಸಿಷ್ಟ ಉವಾಚ

ಈ ಕಥೆ ಶ್ರಿಮನ್ ನಾರಾಯಣ ಅವರ ಆಶೀರ್ವಾದದಿಂದ ಮಹಾ ಸಂತ ವಸಿಷ್ಟರ ಮೂಲಕ ಅಲಂಕರಿಸಲಾಗಿದೆ. "ಓಹ್! ಶ್ರೀನಿವಾಸನ ಭಕ್ತರೇ ಹಾಗೂ ಕಲಿಯುಗ ವಾಸಿಗಳೇ! ಶ್ರಿಮನ್ ನಾರಾಯಣನು, ವೈಕುಂತದ ಶಕ್ತಿಶಾಲಿ ದೇವರು ವೆಂಕಟೇಶ್ವರ ಸ್ವತಃ ತಿರುಮಲ ತಿರುಪತಿಯಲ್ಲಿ ನೆಲೆಸಿದ್ದಾನೆ. ಅವನು ತನ್ನ ಭಕ್ತರ ಕಷ್ಟಗಳನ್ನ ನಿವಾರಿಸಲು ತಿರುಮಲ ಗುಡ್ಡಗಳಲ್ಲಿ ಜನ್ಮತಾಳಿದರು.

ಈ ವೃತವು ನಿರ್ವಹಿಸುವುದು ಬಹಳ ಸುಲಭ.ನಂಬಿಕೆ ಮತ್ತು ಭಕ್ತಿಯಿಂದ ಈ ವೃತವನ್ನ ಆಚರಿಸಿದಲ್ಲಿ ಭಕ್ತರು ಎಲ್ಲಾ ಅದೃಷ್ಟ ಪಡೆಯುತ್ತಾರೆ.ಅನೇಕ ವರ್ಷಗಳ ಹಿಂದೆ ಅವಂತೀವೆಂಬ ರಾಜ್ಯದಲ್ಲಿ ಭಾಗ್ಯನಗರ ಎಂಬ ಊರಿತ್ತು . ತನ್ನ ಹೆಸರಂತೆ ಅಲ್ಲಿಯ ಜನರು ಬಹಳ ಶ್ರೀಮಂತರು . ಆ ನಗರದ ಜನರಿಗೆ ತಮ್ಮ ಸಂಪತ್ತಿನ ಮೇಲೆ ಬಹಳ ಹೆಮ್ಮೆ ಇತ್ತು. ಬಡವರನ್ನ ಕಂಡಲ್ಲಿ ಅವರನ್ನ ಹೀಯಾಳಿಸುವುದು ಅವಮಾನಿಸುವುದು ಮಾಡುತ್ತಿದರು. ಸಂಪತ್ತಿನ ಮದದಲ್ಲಿ ದೇವರ ಆರಾಧನೆಯನ್ನ ಕೂಡ ನಿಲ್ಲಿಸಿದರು. ಅವರು ಹಬ್ಬದ ದಿನಗಳಲ್ಲಿ ಕೂಡ ದೇವಾಲಯಕ್ಕೆ ಹೋಗುತಿರಲಿಲ್ಲಾ.

ಹೀಗಿರುವಾಗ ಶ್ರಿಮನ್ ನಾರಾಯಣನು ಅವರ ಕಣ್ಣು ತೆರೆಸಿ ಬುದ್ದಿ ಕಲಿಸಬೇಕೆಂದು ಕೊಂಡರು . ಒಂದು ದಿನ ಎಲ್ಲಾ ಶ್ರೀಮಂತರು ತಮ್ಮದೇ ಮೋಜಿನಲ್ಲಿ ನಿರತ್ತಾಗಿದ್ದಾಗ ಪಟ್ಟಣದ ಪೂರ್ವ ಬಾಗದಲ್ಲಿ ಇರುವ ಶ್ರೀ ಲಕ್ಷ್ಮಿ ನಾರಾಯಣ ದೇವಾಲಯದಲ್ಲಿ. ಯಾರೂ ದೀಪವಿಡಲಿಲ್ಲ ಅಂದು ಮೊದಲ ಏಕಾದಶಿ (ತಿಂಗಳ ಹನ್ನೊಂದನೇ ದಿನ) ಮಹಾನ್ ಉತ್ಸವ ದಿನವಾಗಿತ್ತು. ಯಾರೂ ಪೂಜೆನಿರ್ವಹಿಸಲು ಅಥವಾ ದೇವಸ್ತಾನದಲ್ಲಿ ವಿಗ್ರಹಗಳು ಅಲಂಕರಿಸಲು ಉಪಸ್ಥಿತರಿರಲಿಲ್ಲಾ.ಅಂದು ಅನಿರೀಕ್ಷಿತವಾಗಿ ಸಂಜೆಆಕಾಶದ ಕಾರ್ಮೋಡಗಗಳು ಆವರಿಸಿತು ತುಂಭ ಕತ್ತಲೆಯಾಯಿತು . ಇಡೀ ರಾತ್ರಿಊಹಿಸಲಾಗದಷ್ಟು ಮಳೆ ಸುರಿಯತೊಡಗಿತ್ತು. ಇಡೀ ಪಟ್ಟಣ ನೀರಿನಲ್ಲಿ ಮುಳುಗಿತುಶ್ರೀಮಂತರ ಮನೆ ನೀರಿನ ಪಾಲಾಯಿತು. ಅವರು ತೊಟ್ಟಿದ ಬಟ್ಟೆಗಳ ಬಿನ್ನ ಎಲ್ಲದನ್ನ ಕಳೆದುಕೊಂಡರು . ಆಶ್ಚರ್ಯದ ವಿಷಯವೇನೆಂದರೆ ನಗರದ ಕೊನೆಯಲ್ಲಿ ಕೆಲವು ಗುಡಿಸಲುಗಳು ಇನ್ನೂ ಉಳಿದಿತ್ತು. ಗಾಳಿ ಮತ್ತು ಮಳೆ ಅವುಗಳನ್ನು ನಾಶಮಾಡಿರಲಿಲ್ಲ. ಗುಡಿಸಲುಗಳು ಕದಡಿರಲಿಲ್ಲ. ಅದರ ಮನೆಯವರು ಸುರಕ್ಷಿತವಾಗಿ ಇದ್ದರು.ಇದನ್ನ ನೋಡಿದ ಶ್ರೀಮಂತ ಜನರು ಚಕಿತರಾದರು. ಹಾಗೂ ಈ ಬಗ್ಗೆ ಚಿಂತನೆ ಮಾಡಿದರುಆಗ ಆಕಾಶದಲ್ಲಿ ದೊಡ್ಡದಾಗಿಮೊಡ ಮಿಂಚಿತ್ತು. ದೈವ ಸ್ವರವೂ ಹೀಗೆಂದಿತ್ತು. "ಓಹ್!ಮುರ್ಖ ಜನರೇ! ನಿಮ್ಮ ವ್ಯರ್ಥ ಅಭಿಮಾನದಿಂದ ನೀವು ಎಲ್ಲವನ್ನೂ ಕಳೆದುಕೊಂಡಿದ್ದೀರ. ಈ ಸಣ್ಣ ಗುಡಿಸಲಲ್ಲಿರುವ ದೇವಯ್ಯ ನನ್ನ ಪ್ರೀತಿಯ ಆರಾಧಕ. ಅವನನ್ನು ನೀವು ತುಂಭಾ ಅವಮಾನಿಸಿದ್ದೀರ ಹೀನಾಯವಾಗಿ ಕಂಡಿದ್ದೀರ. ಅವರು ಶ್ರೀ ಲಕ್ಷ್ಮಿ ನಾರಾಯಣ ದೇವಾಲಯದಲ್ಲಿ ದೈನಂದಿನ ಭೇಟಿ ನೀಡಿ ದೀಪವನ್ನ ಬೆಳಗುಸುತ್ತಿದ ಅವನು ಪ್ರತಿ ಏಕಾದಶಿ ರಂದು ವೆಂಕಟೇಶ್ವರ ವೃತವನ್ನ ಆಚರಿಸುತ್ತಿದ್ದ ಆ ಕಾರಣದಿಂದಾಗಿಅವನ ಗುಡಿಸಲು ಸುರಕ್ಷಿತವಾಗಿದೆ ನೀವು ಈ ವೃತವನ್ನ ಭಕ್ತಿಯಿಂದ ಮಾಡಿದಲ್ಲಿ ನಿಮ್ಮ ಸಂಪತ್ತನ್ನು ಮರಳಿ ಪಡೆಯುವಿರಿ. ಆ ಸ್ಥಳ ಇದ್ದ ಎಲ್ಲಾ ಜನರು ಈ ಮಾತನ್ನ ಕೇಳುತ್ತಿದ್ದರು. ತಕ್ಷಣ ಅವರು ದೇವಾಲಯಕ್ಕೆ ಹೋಗಿ ಬೇಕಾದ ಪೂಜೆ ಸಾಮಗ್ರಿಗಳನ್ನ ಸಂಗ್ರಹಿಸ ತೊಡಗಿದರುಹಾಗೂ ಈ ವೃತವನ್ನ ಆಚರಿಸಿದರು. ನಂತರ ಅವರ ಮನೆಗಳು ಮರಳಿ ಪಡೆದರು.

ಅಂದಿನಿಂದ ಆ ಸ್ಥಳದ ಉದ್ಯಮಿಗಳು ಏಕಾದಶಿ ಯನ್ನು ಶ್ರೀ ವೆಂಕಟೇಶ್ವರ ವೃತವನ್ನ ಆಚರಿಸಲಾರಂಭಿಸಿದರು. ಅವರ ಮುಂದಿನ ಜೀವನವೂ ಸಂತೋಷ ಮತ್ತು ಶಾಂತಿಯಿಂದ ಕಳೆದರು ಕೊನೆಯಲ್ಲಿ ಅವರು ಮುಕ್ತಿ ಪಡೆದರು.

ಈ ಕಥೆಯನ್ನ ವಶಿಷ್ಟ ಮುನಿಯವರು ಹೀಗೆಂದು ಮುಗಿಸಿದರು.

ಗೋವಿಂದಾ ... ಗೋವಿಂದಾ .... ಗೋವಿಂದಾ ....||

ಮೂರನೇ ಕಥೆ ಅಂತ್ಯ ||

ಶ್ರೀಯಃ ಕಾಂತಾಯ ಕಲ್ಯಾಣ ನಿಧಯೇ ನಿಧಾಯೆರ್ಥಿನಾಂ ||
ಶ್ರೀ ವೆಂಕಟ ನಿವಾಸಾಯ ಶ್ರೀ ನಿವಾಸಾಯ ಮಂಗಳಂ ||

## ಕಥೆ – ೪ : ಶ್ರೀ ಭಾರಧ್ವಜ ಉವಾಚ

ಈ ಕಥೆಯನ್ನು ಮಹಾ ಮುನಿಗಳಾದ ಭಾರಧ್ವಾಜರು ಹೀಗೆಂದು ಉಲ್ಲೇಖಿಸಿದ್ದಾರೆ. "ಓಹ್! ಕಲಿಯುಗ ವಾಸಿಗಲೇ! ಶ್ರಿಮನ ನಾರಾಯಣನ ಪ್ರೀತಿಪಾತ್ರರಾದ ಭಕ್ತರೇ!

ನೀವು ಮಾಡುತ್ತಿರುವ ಈ ವೆಂಕಟೇಶ್ವರ ವೃತವು ಅದ್ಭುತ ಆಗಿದೆ. ಈ ವೃತದ ಆಚರ್ಣೆಯಿನ್ದ ನಿಮ್ಮ ಆಸೆಗಳು ಇಡೆರುತ್ತವೆ. ಈ ದೇವರ ಅನುಗ್ರಹ ಪಾತ್ರರಾಗಲು ಈ ವೃತವನ್ನು ಆಚರಿಸಬೇಕು. ಶ್ರೀನಿವಾಸನು ಸ್ವತಃ ಎಲ್ಲರ ಮೇಲೆ ದಯೆ ತೋರಲು, ಕಲಿಯುಗ ದಲ್ಲಿ ತಿರುಮಲ ಬೆಟ್ಟದ ಮೇಲೆ ಜನ್ಮತಾಳಿದರು. ಇದುತಿರುಮಲ ಬೆಟ್ಟವನ್ನು ನಾವು ಕೇವಲ ನಿಮ್ಮ ಹಿಂದಿನ ಜನ್ಮದ ಫಲದಿಂದಲೇ ತುಳಿಯಬಹುದಾಗಿದೆ. ಈ ವೃತದಲ್ಲಿ ಭಾಗವಹಿಸುವವರು ಹಾಗೂ ಪ್ರಸಾದವನ್ನು ಸ್ವೀಕರಿಸುವವರು ಅತ್ಯಂತ ಭಾಗ್ಯಷಳಿಗಳಾಗುವುದರಲ್ಲಿ ಸಂಶಯವೇ ಇಲ್ಲಪ್ರಾಚೀನ ಕಾಲದಲ್ಲಿ ನಗಾರಿ ಎಂಬ ರಾಜ್ಯವಿತ್ತು ಅಲ್ಲಿ ಧನಗುಪ್ತ ಎಂಬ ಜಿಪುಣ ವ್ಯಾಪಾರಿವಾಸಿಸುತ್ತಿದ್ದನು. ಅವನು ಬಹಳಷ್ಟು ಹಣವನ್ನು ಸಂಪಾದಿಸಿದನು ಅವನ ಜಿಪುಣಾತನಕ್ಕೆ ಮಿತಿಯೇ ಇರಲಿಲ್ಲಾ. ಅವನಿಗೆ ತನ್ನ ದುಡ್ಡಿನ ಬಗ್ಗೆ ಅತ್ಯಾದಿಕ ಅಹಂಕಾರ ಇತ್ತು. ಆದರೆ ಅಹಂಕಾರವೂ ಎಂತಹವರನ್ನು ಕೂಡ ನಾಶಮಾಡಬಲ್ಲದು.

ಅವನ ಪತ್ನಿ ಕಾಂತಮತಿ ಮಹಾ ದೈವೀ ಭಕ್ತಳಾಗಿದ್ದಳು. ಅವಳು ದೇವರಲ್ಲಿ ತುಂಭ ನಂಬಿಕೆ ಹೊಂದಿದ್ದಳು.. ಈ ದಂಪತಿಗಳಿಗೆ ಮೂರು ಹೆಣ್ಣು ಮಕ್ಕಳಿದ್ದರು . ಕಿರಿಯ ಮಗಳಾದ ಕುಮಾರಿಯು ಮಹಾ ದೈವೀ ಭಕ್ತಳಾಗಿದ್ದಳು .ಅವಳು ಯಾವಾಗಲೂ ಲಾರ್ಡ್ ಶ್ರೀನಿವಾಸನ್ನು ಕುರಿತು ಪ್ರಾಥಿಸುತಿದ್ದಲು ಹಾಗೂ ತನ್ನ ತಂದೆಯ ಜ್ಞಾನ ಇಲ್ಲದೆ, ಅವಳು ಶ್ರೀ ವೆಂಕಟೇಶ್ವರ ದೇವಸ್ಥಾನಕ್ಕೆ ಭೇಟಿ ನೀಡಿ ಧರ್ಷನ ಪಡೆದು ಮನೆಗೆ ಪ್ರಸಾದವನ್ನು ತರುತಿದ್ದಳು ಅವಳ ತಂದೆಯ ಹೊರತುಪಡಿಸಿ ಎಲ್ಲರೂ ಅದನ್ನು ಸೇವಿಸುತ್ತಿದ್ದರು. ಕಾಂತಮತಿ ಯಾವಾಗಲೂ ತನ್ನ ಪತಿ ಈ ರೀತಿಯ ವರ್ತನೆಗೆ ಚಿಂತಾಕ್ರುತಲಾಗುತಿದ್ದಳುಒಂದು ದಿನ ಕುಮಾರಿ ತನ್ನ ಸ್ನೇಹಿತೆಯ ಮನೆಯಲ್ಲಿ ಶ್ರೀ ವೆಂಕಟೇಶ್ವರ ವೃತವನ್ನು ಮುಗಿಸಿ ಬರುವಷ್ಟರಲ್ಲಿ ಮಧ್ಯಾನ ಆಗಿತ್ತು ಸುಡು ಬಿಸಿಲ್ಲಿಗೆ ಅವಳಿಗೆ ದನಿವಾಯಿತು.ಪಕ್ಕದಲಿ ತನ್ನ ಅಪ್ಪನ ಅಂಗಡಿವಿರುದರಿಂದ ಅಲ್ಲಿ ಸ್ವಲ್ಪ ನೀರು ಕುಡಿದಳು ಅಪ್ಪನು ತಾನು ಎಲ್ಲಿ ಹೋಗಿದ್ದೆ ಎಂದು ಕೇಳಿದರೆ ಏನು ಹೇಳಬೇಕು ವೇನು ತಿಳಿಯದೇ ಗಡಿಬಿಡಿಯಲ್ಲಿ ಆ ಪ್ರಸಾದ ಪೊಟ್ಟಣ ಅಲ್ಲಿಯೇ ಬಿಟ್ಟಳು ಹಾಗೂ ಮನೆಗೆ ಓಡಿದಳು ಸ್ವಲ್ಪ ಸಮಯದ ನಂತರ ಅಲ್ಲಿ ಅಹಿತಕರ ಘಟನೆಯೊಂದಾಯಿತು ಅಂಗಡಿಗೆಲ್ಲ ಬೆಂಕಿಯೊಂದು ಕಾಣಿಸಿತ್ತು ನೋಡ್ನೋಡುತ್ತಾ ಆ ಬೆಂಕಿ ಹರದಲಾರಂಭಿಸಿತು. ಅಂಗಡಿಗಳು ಮತ್ತು ಬೀದಿ ಸುಟ್ಟು ಬೂದಿಯಾಯಿತು. ಧನಗುಪ್ತ ದೇಹ ನಡುಗಲಾರಂಬಿಸಿತ್ತು. ಆದರೂ ಅವನು ತನ್ನ ಅಂಗಡಿಯಿಂದ ಹೊರಬರಲಿಲ್ಲ ಇದ್ದಕ್ಕಿದ್ದಂತೆ ಅವನ ಕೈ ಪ್ರಸಾದ ದ ಪೊಟ್ಟಣದ ಮೇಲೆ ಬಿತ್ತುಒಂದು ಎನ್ನನ್ನು ಯೋಚಿಸದೇ ಆ ಪ್ರಸಾದವನ್ನು ಬಾಯಲ್ಲಿ ಇಟ್ಟನು ಪ್ರಸಾದವನ್ಣ ಬಾಯಲ್ಲಿ ಇಡುತಿದ್ದಂತೆ ಅವನಿಗೆ ಏನೋ ಒಂಥರ ಶಾಂತಿಯ ಅನುಭವವಾಯಿತು ಆಗ ಮಾತೊಂದು ಆಶ್ಚರ್ಯ ನಡೆಯಿತ್ತು ಆ ಬೆಂಕಿಯೂ ಧನಗುಪ್ತನ ಅಂಗಡಿಯನ್ನು ಸುಡಲಿಲ್ಲ. ಬೆಂಕಿಯ ಸುದ್ದಿ ಕೇಳಿ ಗಾಬರಿಯಿಂದ ಓಡಿಬಂದ ಕಾಂತಮತಿಯೂ ತನ್ನ ಗಂಡನು ಸುರಕ್ಷಿತವಾಗಿದನ್ನು ನೋಡಿ ಸಂತೋಷಪಟ್ಟಳುಆ ಪ್ರಸಾದದ ಕಾರಣದಿಂದ ತನಗೆ ಜೀವನಧಾನ ಸಿಕ್ಕಿರುದನ್ನು ಅರಿತು ಧನಗುಪ್ತನು ಧನ್ಯತೆಯ ಭಾವದಿಂದ ಅಣು ಸಂಜೆ ಶ್ರೀ ವೆಂಕಟೇಶ್ವರ ವೃತವನ್ನು ಆಚರಿಸಿದನು ಹಾಗೂ ತನ್ನ ಉಳಿದ ಜೀವನವನ್ನು ಶ್ರೀವೆಂಕಟೇಶ್ವರನಿಗೆ ಮುದಿಪ್ಪಾಗಿಟ್ಟನು ಕೊನೆಗೆ

ಮುಕ್ತಿಯನ್ನ ಪಡೆದನು ಕೇವಲ ಪ್ರಸಾದವನ್ನ ಸ್ವೀಕರಿಸಿದ್ದರಿಂದ ಅವನಿಗೆ ಜೀವಧಾನ ಸಿಗುವುದಾದರೆ ನಾವು ಶ್ರದ್ಧೆಯಿನ್ದ ಈ ವೃತವನ್ನ ಆಚರಿಸಿದಲ್ಲಿ ನಮಗೆ ತುಂಭ ಅನುಕೂಲವಾಗುವುದರಲ್ಲಿ ಸಂಶಯವೇ ಇಲ್ಲ ಇದರೊಂದಿಗೆ ೪ ಅದ್ಯಾಯ ಮುಗಿಯಿತ್ತು

ಗೋವಿಂದಾ ... ಗೋವಿಂದಾ .... ಗೋವಿಂದಾ ....

||ನಾಲ್ಕನೆಯ ಕಥೆ ಅಂತ್ಯ ||

ಶ್ರೀಯಃ ಕಾಂತಾಯ ಕಲ್ಯಾಣ ನಿಧಯೇ ನಿಧಾಯೆರ್ಥಿನಾಂ ||

ಶ್ರೀ ವೆಂಕಟ ನಿವಾಸಾಯ ಶ್ರೀ ನಿವಾಸಾಯ ಮಂಗಳಂ ||

## ಕಥೆ ೫ : ಶ್ರೀ ಆತ್ರಿ ಉವಾಚ

ಪುರಾಣ ಕಾಲದಿಂದಲೂ ತಿರುಮಲ ತಿರುಪತಿಯು ಈ ಪ್ರಾಂಪಾಂಚದ ವೈಕುಂತವೆಂದೇ ಪ್ರಸಿದ್ದವಾಗಿದೆ ಮತ್ತು ತಿರುಪತಿಯಂತಃ ಪವಿತ್ರ ಸ್ಥಳ ಮಗದೊಂದಿಲ್ಲ ವೆಂಕಟೇಶ್ವರ ಸಮ ದೇವನು ಈ ಪ್ರಪಂಚದಲೆಲ್ಲೂ ಇಲ್ಲ". ಶ್ರೀನಿವಾಸನು ಉತ್ತಮ ಕಾರ್ಯಗಳು ಮಾಡುವರನ್ನಮತ್ತು ಅವನಲ್ಲಿ ಸಂಪೂರ್ಣ ನಂಬಿಕೆ ಇಡುವವರನ್ನ ಎಂದಿಗೂ ಕೈಬಿಡುವುದಿಲ್ಲ ಅವನ್ನನು ಪ್ರಸನ್ನಗೊಳಿಸಲು "ಶ್ರೀ ವೆಂಕಟೇಶ್ವರ ವೃತವು" ಸುಲಭದ ದಾರಿ.

ಮಹಾ ಸಂತ ಆತ್ರಿ ಈ ಅದ್ಭುತವಾದ ವೆಂಕಟೇಶ್ವರ ವೃತದ ಕುರಿತು ಹೀಗೆಂದರು – "ಓಹ್! ಶ್ರೀನಿವಾಸನ ಪ್ರೀತಿಯ ಭಕ್ತರೇ ! ನೀವುಗಳು ತುಂಭಾ ಅದೃಷ್ಟ ಶಾಲಿಗಳು ಕೃತ, ತ್ರೇತಾ, ದ್ವಾಪರ ಯುಗದಲ್ಲಿ ಶ್ರಿಮನ್ ನಾರಾಯಣ ಪ್ರಸನ್ನಗೊಳಿಸಲು ತ್ಯಾಗ,ಅಂಕ ವರ್ಷಗಳ ಕಾಲ ತಪಸ್ಸು ಮಾಡಬೇಕಿತ್ತು ಆಅರೆ ಈ ಕಲಿಯುಗದಲ್ಲಿ ಅವನ ಹೆಸರನ್ನು ಹೇಳುವ ಮೂಲಕ ಅವನನ್ನು ಪ್ರಸನ್ನಗೊಳಿಸಲು ಸಾಧ್ಯ.ಅವನಲ್ಲಿ ಶರಣು ಎಂದು ಭಕ್ತಿಯಿಂದ ಕರೆದರೆ ಸಾಕು ಓಡೋಡಿ ಬರುವನು ಶ್ರೀನಿವಾಸನು ದಯಾಮುರುತಿ ಯಾಗಿರುವನು ತಿರುಮಲ ಬೆಟ್ಟವನ್ನ ಹತ್ತುವುದೇ ನಮ್ಮ ಪೂರ್ವಜನ್ಮದ ಫಲವೆನ್ನಬಹುದು

ಪ್ರಾಚೀನ ಕಾಲದಲ್ಲಿ ಕೌಮರ ರಾಜ್ಯದಲ್ಲಿ ಮಿತ್ರಎಂಬ ಒಬ್ಬ ಮಡಿವಾಳವಿದ್ದನು. ತನ್ನ ವೃತ್ತಿಯಲ್ಲಿ ತನನ್ನು ಸಂಪೂರ್ಣವಾಗಿ ತೊಡಗಿಸಿದನು. ಬರುವ ಗಳಿಕೆಯ ಅನುಸಾರ ದಾನ ಮಾಡುತ್ತಿದ್ದನು . ಅವರು ಕೈಗಳು ದೌರ್ಬಲ್ಯದಿಂದ ಬಟ್ಟೆ ಒಗೆಯುವುದು ಕಷ್ಟವಾಗಿತ್ತು ಮತ್ತು ಅವನ ಗ್ರಾಹಕರಿಗೆ ಒಗೆದ ಬಟ್ಟೆ ಹಿಂದಿರುಗಿಸುವುದು ಕಷ್ಟಕರವಾಗಿತ್ತು. ಅವನಿಗೆ ಬಹಳ ದೊಡ್ಡ ಕುಟುಂಬವಿತ್ತು. ಕೆಲ್ಸಾಮಾಡದಿದ್ದರೆ ಅವರು ಉಪವಾಸ ಬೀಳುತಿದ್ದರು ಆದರೆ ಶ್ರೀನಿವಾಸಾನಲ್ಲಿ ಅವನಿಗೆ ಬಲವಾದ ನಂಬಿಕೆ ಇತ್ತು. ಕರ್ಮದ ಕೊನೆಯಲ್ಲಿ ಶ್ರೀನಿವಾಸನು ಪ್ರತ್ಯಕ್ಷನಾಗಿ ತನ್ನನು ರಕ್ಷಿಸುತ್ತಾನೆ ಎಂದು ಬಲವಾಗಿ ನಂಬಿದನು.

ಒಂದು ಸಂಜೆ ಮಿತ್ರ ಎಂದಿನಂತೆ ತನ್ನ ಕೆಲಸವನ್ನು ಮುಗಿಸಿ ಬಟ್ಟೆಗಳ ಜೊತೆ ಹಿಂತಿರುಗುತ್ತಿದ ಬಹಳ ಆಯಾಸಗೊಂಡಿದ. ದಾರಿಯಲ್ಲಿ ಅವನು ಒಬ್ಬ ಬ್ರಾಹ್ಮಣ ಎದುರುಗೊಂಡನು. ಮಿತ್ರ ಅವನ ಜೊತೆ ವಿನಮ್ರ ದಿಂದ ವರ್ತಿಸಿದನು. ನೆಲದ ಮೇಲೆ ಬಟ್ಟೆಗಳನ್ನ ಇಟ್ಟು ಬ್ರಾಹ್ಮಣನಿಗೆ ನಮಸ್ಕರಿಸಿದನು. ಆಬ್ರಾಹ್ಮಣನು ಅವನ ಯೋಗಕ್ಷೇಮ ಕೇಳಲು ತನ್ನ ಸಂಕಷ್ಟಗಳನ್ನ ಬಿಚ್ಚಿಟ್ಟನು,ಇದನ್ನ ಕೇಳಿ ಆ ಬ್ರಾಹ್ಮಣನು ಮಿತ್ರನಿಗೆ ಸಮಾಧಾನಿಸಿದನು ನಂತರ ಮಿತ್ರ ವಿಧೇಯತೆಯಿಂದ ಆ ಬ್ರಾಹ್ಮಣನ್ನ ಕುರಿತು "ಸ್ವಾಮಿ! ನೀವು ಯಾರೆಂದು ಗೊತ್ತಿಲ್ಲ. ಆದರೂ ನೀವು ಮಹಾತ್ಮರಂತೆಯೇ ಕಾಣುವಿರಿ . ನನ್ನ ಕುಟುಂಬದ ಭಾರವನ್ನು ಹೊತ್ತಿರುವ ನಾನು,ಅದರಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ, ಈ ಕೈಯ ದೋರ್ಭಲ್ಯದಿಂದ "ಜಯಿಸಲು ನನಗೊಂದು ಉಪಾಯವನ್ನ ಹೇಳಿ ಎಂದನುನಂತರ ವಯಸ್ಸಾದ ಆ ಬ್ರಾಹ್ಮಣನು ಹೀಗೆಂದು ಹೇಳಲು ಆರಂಭಿಸಿದನು – "ಪ್ರೀತಿಯ ಮಿತ್ರನೇ! ನಾನು ಹೇಳುವ ಉಪಾಯದಿಂದ ನಿನ್ನ ಕೈಗಳು ಸರಿಯಾಗುವುದಲ್ಲದೇ ನಿನಗೆ ಐಶ್ವರ್ಯದ ಭಂಡಾರ ಸಿಗುವುದು ಹೀಗೆಂದು ಆ ಬ್ರಾಹ್ಮಣನು ಮಿತ್ರನಿಗೆ ವೆಂಕಾಟಶ್ವರ ವೃತದ ಬಗ್ಗೆ ಹೇಳಿದನು. ಈ ವೃತವನ್ನ ನಿರ್ವಹಿಸಿದ ತಕ್ಷಣ ನಿನಗೆ ಒಂದು ಸಾವಿರ ಚಿನ್ನದ ನಾಣ್ಯಗಳು ದೊರೆಯುವುದು. ಆದರೆ ಆ ಚಿನ್ನದ ನಾಣ್ಯಗಳ ಅರ್ಧ ನನಗೆ ನೀಡಬೇಕು. ನನ್ನ ನಾಣ್ಯಗಳನ್ನ ಸಂಗ್ರಹಿಸಲು ಇದೇ ಸಮಯಕ್ಕೆ ನಾಳೆ ನಿಮ್ಮ ಮನೆಗೆ ಬರುತ್ತೇನೆ ಎಂದನುಮಗ ಓಡಿ ಬಂದು – "ಅಪ್ಪ ! ರಾಜನ ಸೇವಕರು ನಿಮಗಾಗಿ ಬಂದಿದ್ದಾರೆ . ನಿಮ್ಮನ್ನ ರಾಜ ಹೋಬಿ ಯಾಗಿ ನೇಮಿಸಿ ಸಾವಿರ ಚಿನ್ನದ ನಾಣ್ಯಗಳನ್ನ ಹಾಗೂ ಬಹಳಷ್ಟು ಉಡುಗೊರೆಗಳನ್ನ ಕಳುಹಿಸಿದ್ದಾರೆ. " ಎಂದನು ಇದನ್ನ ಕೇಳಿ ಮಿತ್ರನು ತುಂಭ ಸಂತೋಶ್ಗೊಂಡನು ಅವರು ಅರಮನೆ ಕೆಲಸ ಆರಂಭಿಸಲು ಒಂದು ವಾರದ ಸಮಯ ಕೊಟ್ಟಿದ್ದರು. ಮಿತ್ರ ಒಂದು ವಾರ ನಿರೀಕ್ಷಿಸಲು ಬಯಸಲಿಲ್ಲ. ಮುಂದಿನ ದಿನ ಅವರು ಅರಮನೆಗೆ ಪ್ರಯಾಣ ಬೆಳೆಸಿದರು ಈ ಸಂತೋಷದಲ್ಲಿ ಅವರು ಸಂಪೂರ್ಣವಾಗಿ ಮೂಡಿ ಬ್ರಾಹ್ಮಣನನ್ನು ಮರೆತರು. ದಾರಿಯಲ್ಲಿ ಅವರನ್ನು ನೆನಪಿಸಿಕೊಂಡನು, ಆದರೆ

ಉದಾಸೀನತೆ ಜೊತೆ ಅವರು ಒಂದು ತಿಂಗಳ ನಂತರ ಅವನನ್ನು ಭೇಟಿ ಮಾಡುವುದೆಂದು ಭಾವಿಸಿ ಮುಂದೆ ಸಾಗಿದನು. ಅರಮನೆ ತಲುಪಿ ತಮ್ಮ ಕೆಲಸವನ್ನು ಪ್ರಾರಂಭಿಸಿದ್ದನು. ತಿಂಗಳು ಕಳೆದರು ಆ ಬ್ರಾಹ್ಮಣನ ಮಾತು ನೆನಪಿಗೆ ಬರಲಿಲ್ಲ, ಆ ಮುಇ ಬ್ರಾಹ್ಮಣನು ಬೇರೆ ಯಾರುಅಲ್ಲದೇ ಸ್ವತಃ ಶ್ರೀ ನಿವಾಸನೇ ಆಗಿದ್ದ ಬ್ರಾಹ್ಮಣ ರೂಪದಲ್ಲಿ ಮಿತ್ರನಿಗೆ ದರ್ಶನ ನೀಡಿದರು. ಆಗ ದೇವನಿಗೆ ಮಾನವಕುಲದ ಪ್ರಕೃತಿ ಬಗ್ಗ ಸಿಟ್ಟು ಬಂದು ಮಿತ್ರನಿಗೆ ಪಾಠ ಕಲಿಸಲು ನಿರ್ಧರಿಸಿದನುರಾಣಿಯ ಒಡವೆಗಳು ಮರುದಿನ ಕಣ್ಮರೆಯಾಯಿತು ಮತ್ತು ಮಿತ್ರನ್ನನು ದೋಷಿಸಲಾಯಿತ್ತು ಹಾಗೂ ಅವನ್ನನು ಬಂದಿಸಲಾಯಿತ್ತು. ಅವರು ಅನೇಕ ರೀತಿಯಲ್ಲಿ ಶಿಕ್ಷಿಸಲಾಯಿತು. ಅವನು ಆಗ ಚಿಂತಿಸಲು ಪ್ರಾರಂಭಿಸಿದನು – ತನಗೆ ಈ ಗತಿ ಯಾಕೆ ಉಂಟಾಯಿತು ?

ಆ ರಾತ್ರಿ ಅವನಿಗೊಂದು ಕನಸು ಬಿತ್ತು. ಅದರಲ್ಲಿ ಶ್ರೀನಿವಾಸನು ಮುದಿ ಬ್ರಾಹ್ಮಣನ ರೂಪದಲ್ಲಿ ಬಂದು ಅವನ ಕೊಟ್ಟ ಮಾತಿನ ಬಗ್ಗ ನೆನಪಿಸಿದನು. ಆ ಬ್ರಾಹ್ಮಣನು ಬೇರೆ ಯಾರೂ ಅಲ್ಲದೇ, ಶ್ರಿಮನ್ ನಾರಾಯಣಯಾಗಿದ್ದರಿಂದ ಅವನಿಗೆ ಮಾತನ್ನು ಕೊಟ್ಟು ತಪ್ಪಿದ್ದರಿಂದ ತನಗೆ ಈ ಗತಿ ಬಂತೆಂದು ತಿಳಿದನು. ನಂತರ ಮಿತ್ರ ದೇವರನ್ನು ಪ್ರಾರ್ಥಿಸಿ. ಓಹ್! ದೇವನೇ. ನಾನು ಮಹಾನ್ ಪಾಪಿ; ನಾನು ದೊಡ್ಡ ತಪ್ಪು ಮಾಡಿಬಿಟ್ಟೆ, ದಯವಿಟ್ಟು ನನ್ನನು ಕ್ಷಮಿಸು ಎಂದನು.

ಇಂದಿನಿಂದ, ನಾನು ಪ್ರತಿ ತಿಂಗಳು ಈ ವೃತವನ್ನ ನಿರ್ವಹಿಸುತ್ತೇನೆ ಮತ್ತು ನನ್ನ ಜೀವನದ ಕೊನೆಯ ತನಕ ನನ್ನ ಆದಾಯದ ಅರ್ಧ ನಿನಗೆ ಅರ್ಪಿಸುತ್ತೇನೇನೆಂದನುಮರುದಿನ ರಾಣಿಯ ಒಡವೆಗಳು ಬೇರೆಯೆಲ್ಲೋ ಪತ್ತೆಯಾದವು. ಆದುದರಿಂದ ರಾಜನು ಮಿತ್ರನನ್ನ ಬಿಡುಗಡೆಗೆ ಮಾಡಲು ಆದೇಶಹೊರಡಿಸಿದನು. ಅಂದಿನಿಂದ ಮಿತ್ರ ಪ್ರತಿ ತಿಂಗಳು ಶ್ರೀ ವೆಂಕಟೇಶ್ವರ ವೃತವನ್ನ ಆಚರಿಸಿ ಮತ್ತು ತನ್ನ ಆದಾಯದ ಅರ್ಧದಷ್ಟು ದೇವರಿಗೆ ನೀಡುತ್ತಿದ್ದನು. ಅವನ ಜೀವನದ ಕೊನೆಯಲ್ಲಿ ಬಹಳ ಸಂತೋಷವನ್ನ ಹೊಂದಿ ಮುಕ್ತಿ ಪಡೆದನು.

ಗೋವಿಂದಾ ... ಗೋವಿಂದಾ .... ಗೋವಿಂದಾ ....

||ಐದನೇ ಕಥೆ ಅಂತ್ಯ ||

ಶ್ರೀಯಃ ಕಾಂತಾಯ ಕಲ್ಯಾಣ ನಿಧಯೇ ನಿಧಾಯೆರ್ಥಿನಾಂ ||

ಶ್ರೀ ವೆಂಕಟ ನಿವಾಸಾಯ ಶ್ರೀ ನಿವಾಸಾಯ ಮಂಗಳಂ ||



September 13, 2010



September 18, 2010



September 18, 2010



September 20, 2010



September 20, 2010



September 21, 2010



September 26, 2010



October 10, 2010

# ಶ್ರೀ ವೆಂಕಟೇಶ್ವರ ವೃತ ನಿಯಮಗಳು



https://www.venkateswaravratham.org
info@venkateswaravratham.org